ಡಿಗರ ಮನೆ ಮನೆಯ ವಾರಪತ್ರಿಕೆ 14–6–92, ರೂ. 4–50



ಈ ವಾರದ
ಸಂಪೂರ್ಣ ಕಾದಂಬರಿ

ಮರಳಿ ಬಂದಳು ಸೀತೆ

ಬೇಲೂರು ರಾಮಮೂರ್ತಿ

ರಾಗಸಂಗಮ

ಕನ್ನಡಿಗರ ಮನೆ ಮನೆಯ ವಾರಪತ್ರಿಕೆ

ಸಂಗಮ : 15 | 14–6–92 | ರಾಗ : 16

ಕಾದಂಬರಿ ವಿಭಾಗ

ಮ್ಯಾಗಜಿನ್ ವಿಭಾಗ

ಪ್ರಧಾನ ಸಂಪಾದಕ
ಎನ್. ಸುಂದರ್ ರಾಜನ್

ಕಲೆ
ಜೆ...

ಸಂಪಾದಕಿ
ಕಮಲಾ ಸುಂದರ್ ರಾಜನ್

ಮುಖಪುಟ
ಮೋನು ವಾಲಿಯಾ

ಸಹಾಯಕ ಸಂಪಾದಕಿ
ಎಸ್. ರೇಖಾ

ವರ್ಣ ಪಾರದರ್ಶಿಕೆ
ಕೆ. ಪ್ರವೀಣ ನಾಯಕ್


ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646,
41, ಕೋಟೆ 'ಬಿ' ಬೀದಿ
ಬೆಂಗಳೂರು–560 002
ದೂರವಾಣಿ : 625004

ಅಂಚೆ ವೆಚ್ಚ ಸೇರಿದ ಚಂದಾ ವಿವರ

52 ಸಂಚಿಕೆಗಳು (1 ವರ್ಷ)	ರೂ. 225
26 ಸಂಚಿಕೆಗಳು (6 ತಿಂಗಳು)	ರೂ. 117
13 ಸಂಚಿಕೆಗಳು (3 ತಿಂಗಳು)	ರೂ. 60
ಬಿಡಿ ಪ್ರತಿಯ ಬೆಲೆ	ರೂ. 4.50

ಕಾದಂಬರಿ

ವಿಭಾಗ



ಬೇಲೂರು ರಾಮಮೂರ್ತಿ

ಸಂಪೂರ್ಣ ಕಾದಂಬರಿ

ಮರಳಿ ಬಂದಳು ಸೀತೆ

ಬೇಲೂರು ರಾಮಮೂರ್ತಿ



ನಾಗೇಶ

"ಸುಶೀಲ ನೋಡ್ದ್ಯಾ, ನಿನ್ನನ್ನು ದೇವ್ರಿಂದ ಕಿತ್ತು ತಂದು ನಂಗೆ ಕೊಡ್ತಾರಂತೆ. ಹೀಗ್ಯಾಕೆ ಮಾಡ್ದೆ ಸುಶೀ, ಸುಮ್ನೆ ನನ್ಜೊತೆ ಇದ್ದಿದ್ರೆ ಈ ತಾಪತ್ರಯನೇ ಇರ್ತಿರ್ಲಿಲ್ಲ."

"ಅಪಘಾತದಲ್ಲಿ ಮುಖ, ಕೈ ಕಾಲು ಜಜ್ಜಿ ಹೋಗಿ ಮಾಂಸದ ಮುದ್ದೆಯಾಗಿ ಬಿದ್ದಿದ್ದೋಳನ್ನು ನಾವೇ ಅಂತ್ಯ ಸಂಸ್ಕಾರ ಮಾಡಿದ್ದೀವಿ. ಇನ್ನು ಅವಳು ಹಿಂದಕ್ಕೆ ಬರೋದೊಂದ್ರೇನು!"



ಗುರುಬಸಪ್ಪ



ಚಂದ್ರು

"ಸ್ವಲ್ಪ ಮೆಂಟಲ್ ಲೂಸು ಅಂತ ಕಾಣುತ್ತೆ. ಡಾಕ್ಟ್ರ ಹತ್ರಾನೂ ಹೋಗಲ್ಲ ಅಂತಾನೆ. ಅವನು ಹೇಳೋದನ್ನೆಲ್ಲ ನಾವು ನಂಬಬೇಕು ಅಂತಾನೆ. ತನ್ನ ಹೆಂಡತಿ ಬದುಕಿದ್ದಾಳೆ ಅಂತ ಬಲವಾಗಿ ನಂಬಿದ್ದಾನೆ."

ಈ ಪ್ರಮುಖ ಪಾತ್ರಗಳ ಕಥೆಯೇ ಈ ಕಾದಂಬರಿ.

೧

ಬೆಳಿಗ್ಗೆ ಹತ್ತು ಗಂಟೆಯಾದರೂ ಇನ್ನೂ ಮಲಗೇ ಇದ್ದ ನಾಗೇಶ. ಸ್ವಲ್ಪ ಹೊತ್ತಿಗೆ ಮುಂಚೆ ಆಫೀಸಿಗೆ ಫೋನ್ ಮಾಡಿ ಇವತ್ತೂ ಒಂದಿನ ರಜ ಎಕ್ಸ್‌ಟೆಂಡ್ ಮಾಡಿದೀನಿ ಅಂತ ಬಾಸ್ ಪಿ.ಎ. ಜಯಂತಿಗೆ ತಿಳಿಸಿದ್ದ. ಯಾರಾದರೂ ಮನೆಗೆ ಹುಡುಕ್ಕೊಂಡು ಬರಬಹುದು ಅನಿಸಿತ್ತು. ಈಚೆಗೆ ಮನೆಗೆ ಬಂದು ಹೋಗೋರಿಗೇನು ಕಡಿಮೆ ಇಲ್ಲ. ಚಂದ್ರು ಅಂತೂ ಹೆಚ್ಚೂ ಕಡಿಮೆ ಪ್ರತೀ ದಿನಾನೂ ಬಂದಿದ್ದಾನೆ.

ಇನ್ನೂ ಸ್ವಲ್ಪ ಹೊತ್ತು ಮಲಗಿದ್ದು ನಂತರ ಎದ್ದು ಬಚ್ಚಲು ಮನೆಗೆ ಹೋಗಿ ಹಲ್ಲುಜ್ಜಿ ಸ್ನಾನ ಮಾಡಿ ಬಂದ. ಮೈ ಒರೆಸಿಕೊಳ್ಳುತ್ತಾ ಈಚೆ ಬಂದಾಗ ವರಾಂಡದಲ್ಲಿ ಹಾಕಿದ್ದ ಸುಶೀಲಳ ಫೋಟೋ ಕಣ್ಣಿಗೆ ಬಿತ್ತು. ದೇವರ ಕೋಣೆಗೆ ಹೊರಟಾಗ ಫೋನ್ ಶಬ್ದ ಮಾಡಿತು.

ಫೋನ್ ಹತ್ತಿರ ಬಂದು ರಿಸೀವರ್ ಎತ್ತಿ "ಹಲೋ" ಅಂದ.

ಅತ್ತಕಡೆಯಿಂದ ಧ್ವನಿ ಬಂತು.

"ಯಾರು ಮಾತಾಡೋದು. ನಾಗೇಶನಾ?"

"ಹೌದು. ಆದ್ರೆ ನೀವ್ಯಾರು?"

"ನಾವು ಯಾರೂಂತ ಹಾಗೆಲ್ಲ ಹೇಳೋಕಾಗೋಲ್ಲ."

"ಮತ್ತೆ ಫೋನ್ ಮಾಡಿದ್ದೇಕೆ?"

"ಹೇಳ್ತೀವಿ. ಅಷ್ಟೊಂದು ಆತುರ ಯಾಕೆ. ಫೋನ್ ಮಾಡಿದ್ಮೇಲೆ ಸಮಾಚಾರ ಹೇಳ್ದೇ ಇರ್ತೀವಾ. ಅದಿರ್ಲಿ ನಿಮ್ಮ ಬ್ಯಾಂಕ್ ಬ್ಯಾಲೆನ್ಸ್ ಎಷ್ಟು?"

"ರೀ, ಯಾರ್ರೀ ಅದು ತಲೆ ಹರಟೆ ಮಾಡ್ತಿರೋದು. ನನ್ನ ಬ್ಯಾಂಕ್ ಬ್ಯಾಲೆನ್ಸ್ ಕಟ್ಕೊಂಡು ನಿಮಗೇನಾಗ್ಬೇಕ್ರೀ?"

"ಅದೂ ಹೇಳ್ತೀವಿ. ನಿಮ್ ಹೆಂಡ್ತಿ ನಿಮಗೆ ಜೀವ ಸಹಿತ ಬೇಕೂಂದ್ರೆ ರಾಕ್ ಮೆಮೋರಿಯಲ್ ಹತ್ರ ಒಂದು ಲಕ್ಷ ರೂಪಾಯಿ ತರ್ಬೇಕು. ಪೋಲೀಸ್ನೋರು, ಪತ್ತೇದಾರರೂಂತ ಹೋದ್ರೆ ನಿಮ್ ಹೆಂಡ್ತಿ ಹೆಣ ನೋಡ್ಬೇಕಾಗುತ್ತೆ ಅಷ್ಟೆ"

ಅತ್ತ ಕಡೆಯಿಂದ ಬಂದ ಮಾತು ಕೇಳಿ ನಾಗೇಶನಿಗೆ ಅಚ್ಚರಿಯಾಯ್ತು. ಕೊನೆಗೆ ಸಿಟ್ಟೂ ಬಂತು.

"ಬಾಯಿಗೆ ಬಂದ್ಹಾಗೆ ಹರಟಬೇಡ್ರಿ. ನಿಮಗೆ ಯಾರ್ನಾದ್ರೂ ಹೆದರ್ಸಿ ಒಂದು ಲಕ್ಷ ರೂಪಾಯಿ ಸಂಪಾದ್ನೆ ಮಾಡ್ಬೇಕೂಂತಿದ್ರೆ ಡೈರಕ್ಟರಿ ತಗೊಂಡು ಬೇರೆ ಯಾವ್ದಾದ್ರೂ ನಂಬರ್ ತಿರುಗಿಸಿ." ಅಂದು ಸಿಟ್ಟಿನಿಂದ ರಿಸೀವರ್ ಕುಕ್ಕಿದ.

'ಹೆಂಡ್ತಿ ಅಂತೆ. ಜೀವಸಹಿತ ಅಂತೆ. ಮಾತಾಡೋಕೆ ಒಂದು ರೀತಿ ನೀತಿ ಬೇಡ್ವೆ. ಬಾಯಿಗೆ ಬಂದ್ಹಾಗೆ ಹರಟ್ತಾರೆ.' ಅಂತ ಅಂದ್ಕೊಂಡು ಫ್ರಿಜ್‌ನಲ್ಲಿದ್ದ ಸೇಬು ತಿಂದು ಇದ್ದ ಹಾಲಿನಿಂದ ಕಾಫಿ ಮಾಡ್ಕೊಂಡು ಕುಡಿದ. ಸಿಗರೇಟ್ ಸೇದುತ್ತ ಅವತ್ತಿನ ಪೇಪರ್ ದೃಷ್ಟಿಸಿದ.

ಪೇಪರ್ ಓದುವಾಗಲೆಲ್ಲ ಅದೇಕೋ ಕಣ್ಣು ಕ್ರೈಮ್‌ಬಿಟ್ ಕಡೆ ಹೋಗ್ತಿತ್ತು. 'ಲೂನ ಮೇಲೆ ಹೋಗುತ್ತಿದ್ದ ಯುವತಿಯೊಬ್ಬಳಿಗೆ ರಭಸದಿಂದ ಬಂದು ಕಾರು ಡಿಕ್ಕಿ ಹೊಡೆದು ಸ್ಥಳದಲ್ಲೇ ಯುವತಿಯ ಮರಣ.' 'ಲೂನಾ, ಸ್ಕೂಟರ್ ಡಿಕ್ಕಿ – ಗಾಯಗೊಂಡು ಯುವತಿ ಆಸ್ಪತ್ರೆಯಲ್ಲಿ ಮರಣ' ಇತ್ಯಾದಿ ಸುದ್ದಿಗಳು ಬಹಳ ನೋವುಂಟುಮಾಡುತ್ತಿದ್ದವು. ಅನೇಕ ಅಪಘಾತಗಳು – ಅನೇಕ ಮರಣಗಳು.

ಬಾಗಿಲು ಸದ್ದಾಯ್ತು. ಎದ್ದು ಬಾಗಿಲು ತೆಗೆದು ನಿಂತ.

ಚಂದ್ರು ಬಾಗಿನಿಲಿಂದಾಚೆ ನಿಂತಿದ್ದ.

"ಯಾಕೋ ಇವತ್ತು ಆಫೀಸಿಗೆ ಬರ್ಬೇಕಾಗಿತ್ತಲ್ವ. ಬರಲ್ಲಾಂತ ಫೋನ್ ಮಾಡಿದ್ಯಂತ" ಅಂದ ಚಂದ್ರು.

"ಎದ್ದಾಗ್ಲೇ ಹತ್‌ಗಂಟೆ ಆಗಿತು. ಇನ್ನೇನು ಬರೋದು ಅಂದ್ಕೊಂಡು ಫೋನ್ ಮಾಡ್ದೆ. ಆಫೀಸ್ನಲ್ಲಿ ನನ್ನ ಬಗ್ಗೆ ಏನಾದ್ರೂ ಮಾತಾಡ್ಕೊಂಡ್ರಾ?"

"ಮಾತಾಡ್ಕೊಳೋದೂಂದ್ರೇನು. ಒಬ್ನೇ ಇರೋ ಬದ್ಲು ಆಫೀಸಿಗೆ ಬಂದಿದ್ರೆ ಚೆನ್ನಾಗಿರೋದೂಂತ. ಸ್ವಲ್ಪ ಬದಲಾವಣೆ ಇರೋದಲ್ವ."

"ಬಾ ಕೂತ್ಕೋ. ಕಾಫಿ ಕುಡೀತೀಯಾ?"

"ಕಾಫಿ ತಿಂಡಿ ಏನೂ ಬೇಡ. ನಾನು ಇನ್‌ಕಂ ಟ್ಯಾಕ್ಸ್ ಆಫೀಸಿಗೆ ಹೊರಟಿದ್ದೆ, ಹಾಗೇ ಬಂದೆ." ಅಂತ ಚಂದ್ರು ಮಾತು ಮುಗಿಸುತ್ತಿದ್ದಂತೆ ನಾಗೇಶ,

"ಸ್ವಲ್ಪ ಹೊತ್ಗ ಮುಂಚೆ ಒಂದು ಫೋನ್ ಬಂದಿತ್ತು." ಅಂದ.

"ಯಾರ್ದು?"

"ಯಾರೂಂತ ಹೇಳ್ಲಿಲ್ಲ."

"ಏನು ಹೇಳಿದ್ರು?"

"ಒಂಥರಾ ವಿಚಿತ್ರ ಕಣಯ್ಯ. ಅವರ ಹೆಸರು, ಕುಲ, ಗೋತ್ರ ಒಂದು ಹೇಳ್ಲಿಲ್ಲ."

"ಇನ್ನೇನು ಹೇಳಿದ್ರು?"

"ನಾನು ಒಂದು ಲಕ್ಷ ರೂಪಾಯಿ ಕೊಟ್ರೆ ನನ್ ಹೆಂಡ್ತೀನ· ಕೊಡ್ತಾರಂತೆ. ಇಲ್ದಿದ್ರೆ ಅವಳನ್ನು ಸಾಯಿಸಿಬಿಡ್ತಾರಂತೆ."

"ಅಂದ್ರೆ... ಏನೋ ನೀನು ಹೇಳ್ತಿರೋದು?"

"ನಾನು ಹೇಳ್ತಿರೋದಲ್ಲ. ಅದ್ಯಾವೋನೋ ಕೆಲಸಕ್ಕೆಬಾರದೋನು ಹೇಳಿದ್ದು."

"ಆದಿಕ್ಕೆ ನೀನೇನಂದೆ?"

"ಅನ್ನೋದೇನು ನಿಂಗೆಲ್ಲೋ ತಲೆ ಕೆಟ್ಟಿದೆ, ಡೈರಕ್ಟರಿ ತೆಗೆದು ಬೇರೆ ಯಾವ್ದಾದ್ರೂ ನಂಬರ್ ತಿರುಗಿಸು ಅಂದೆ. ಅಲ್ಲ ಕಣೋ ಚಂದ್ರು ಈಗಿನ ಕಾಲ್ದಲ್ಲಿ ಒಂದು ಫೋನ್ ಇಟ್ಕೊಳೋದೂ ಒಂದು ತಾಪತ್ರಯವೇ, ಹೀಗೆ ಮಾತಾಡೋದೇ?"

"ನೀನು ಏನ್ ಹೇಳ್ತಾ ಇದೀಯಾ ನಾಗೇಶ."

"ಹೇಳ್ತಾ ಇರೋದಲ್ಲ, ನಡೆದದ್ದೇ" ಅಂತಿದ್ದ ಹಾಗೆ ಮತ್ತೆ ಫೋನ್ ಶಬ್ದ ಮಾಡ್ತು.

"ನೋಡು ನೋಡು ಮತ್ತೆ ಅವನೇ ಮಾಡಿರಬೇಕು" ಅಂದು ರಿಸೀವರ್ ಎತ್ತಿ "ಹಲೋ" ಅಂದ.

"ಅದ್ಯಾಕೆ ಡಿಸ್‌ಕನೆಕ್ಟ್ ಮಾಡಿದ್ರಿ ತುಂಬಾ ಕಷ್ಟ ಅಲ್ವ ಡಿಸಿಷನ್ ತಗೊಳೋದು'' ಅಂತ ಅತ್ತ ಕಡೆಯಿಂದ ಮಾತು ಬರುತ್ತಿದ್ದಂತೆ ರಿಸೀವರ್ ಕುಕ್ಕಿ "ಹಲ್ಕಾಗಳು'' ಅಂದ್ಕೊಂಡು ಚಂದ್ರು ಹತ್ತಿರ ಬಂದು "ನೋಡ್ದ್ಯಾ ಹೀಗೆ ಗಾಯದ ಮೇಲೆ ಉಪ್ಪು ಸುರಿದ ಹಾಗೆ'' ಅಂದ.

ಚಂದ್ರು ಸೂಕ್ಷ್ಮವಾಗಿ ನಾಗೇಶನನ್ನು ಗಮನಿಸಿದ. ಲುಂಗಿ ಸರಿ ಮಾಡ್ಕೊಂಡು ಕೂತ್ಕೊಂಡ ನಾಗೇಶ.

ಹತ್ತು ನಿಮಿಷಗಳಲ್ಲಿ ಮತ್ತೆ ಫೋನ್ ಶಬ್ದ ಮಾಡಿತು. ಹಲ್ಲು ಕಡಿಯುತ್ತ ಎದ್ದ ನಾಗೇಶ. ಅವನನ್ನು ತಡೆದು ತಾನೇ ಹೋಗಿ ರಿಸೀವರ್ ಎತ್ತಿ "ಹಲೋ'' ಅಂದ ಚಂದ್ರು.

ಅತ್ತ ಕಡೆಯಿಂದ ಮಧುರವಾಣಿ.

"ಹಲೋ ರೀ ಚಂದ್ರು, ಅಲ್ಲೇನ್ ಮಾಡ್ತಿದೀರ, ನಾಗೇಶ್ ಇದಾರಾ?''

"ಇದಾನೆ ಕೊಡ್ತೀನಿ. ನಾನು ಇನ್‌ಕಂ ಟ್ಯಾಕ್ಸ್ ಆಫೀಸಿಗೆ ಹೊರಟಿದ್ನಲ್ಲ ಹಾಗೇ ಬಂದೆ. ಒಂದ್ನಿಮಿಷ ಇರಿ'' ಅಂದು ನಾಗೇಶನ್ನ ಕರ್ದು,

"ನಿಂಗೆ ಕಣೋ, ಜಯಂತಿ ಫೋನ್ ಮಾಡಿರೋದು'' ಅಂದ.

ನಾಗೇಶ ಬರೋ ಮುಂಚೆ ಜಯಂತಿ ಕೇಳಿದಳು.

"ನಾಗೇಶ್ ಹುಷಾರಾಗಿದಾರೆ ತಾನೇ?''

"ಹುಷಾರಾಗಿದಾನೆ, ಯಾಕೆ?''

"ಬೆಳಗ್ಗೆಯಿಂದ ಮೂರ್ಸಾರಿ ಫೋನ್ ಮಾಡ್ದೆ. ರಿಸೀವರ್ ಎತ್ತಿ ಹಲೋ ಅಂದು ಡಿಸ್‌ಕನಕ್ಟ್ ಮಾಡ್ಬಿಟ್ರು. ಒಂದ್ಸಾರಿ ಅಂತೂ ಬೈದೇಬಿಟ್ರು. ಅದಕ್ಕೆ ಕೇಳ್ದೆ.''

ಚಂದ್ರು ಅಚ್ಚರಿಯಿಂದ "ಹೌದಾ'' ಅಂದ.

ಚಂದ್ರು ಕೈನಿಂದ ರಿಸೀವರ್ ತಗೊಂಡು,

"ಹಲೋ ಜಯಂತಿ ಹೌ ಆರ್ ಯು'' ಅಂತ ಕೇಳಿದ.

"ಚನ್ನಾಗಿದೀನಿ. ನೀವು ಇವತ್ತು ಬೆಳಗ್ಗೆ ಫೋನ್ ಮಾಡಿ ರಜ ಎಕ್ಸ್‌ಟೆಂಡ್ ಮಾಡಿದ್ದನ್ನ ಬಾಸ್‌ಗೆ ಹೇಳ್ದೆ. ಇನ್ನೊಂದೆರಡು ದಿನ ರಜ ಎಕ್ಸ್‌ಟೆಂಡ್ ಮಾಡಿದ್ರೂ ಪರವಾಗಿಲ್ಲ, ಲೆಟ್ ಹಿಮ್ ಟೇಕ್ ರೆಸ್ಟ್ ಅಂದ್ರು. ಅದನ್ನ ನಿಮಗೆ ಹೇಳ್ಬಿಡೋಣ ಅಂತ ಮೂರ್ಸಾರಿ ಫೋನ್ ಮಾಡ್ದೆ'' ಅಂದಳು ಜಯಂತಿ.

"ಮೂರ್ಸಾರಿನಾ. ಮಾತಾಡ್ತಿರೋದೇ ಇದೊಂದೇ ಸಾರಿ.''

"ಹೌದು ಈ ಮೊದ್ಲು ನೀವು ಡಿಸ್‌ಕನಕ್ಟ್ ಮಾಡ್ಬಿಟ್ರಲ್ಲ'' ಅಂದು ಕಿಲಕಿಲ ನಕ್ಕಳು ಜಯಂತಿ.

ಇನ್ನೇನೂ ಮಾತಾಡದೇ ರಿಸೀವರ್ ಕುಕ್ಕಿ ಬಂದ ನಾಗೇಶ.

"ಈ ಮೊದ್ಲು ಜಯಂತಿನೇ ಅಂತೆ ಫೋನ್ ಮಾಡಿದ್ದು.''

"ಹೌದು ಹೇಳಿದ್ಲು.''

"ಮತ್ತೆ ಇನ್ಯಾರೋ ಮಾಡಿದ್ರೂಂದೆ.''

"ಹೌದಯ್ಯ ಅವರ್ಯಾರೋ ಮಾಡಿದ್ರು. ಮಾಡಿ ಒಂದು ಲಕ್ಷ ಕೇಳಿದ್ರು.'' ಅಸಡ್ಡೆಯಿಂದ ನುಡಿದ.

ನಾಗೇಶನನ್ನೇ ಸೂಕ್ಷ್ಮವಾಗಿ ನೋಡಿದ ಚಂದ್ರು. ಇನ್‌ಕಂ ಟ್ಯಾಕ್ಸ್ ಆಫೀಸಲ್ಲಿ ಕೆಲಸ



ಮುಗಿದ್ಮೇಲೆ ಊಟ ಮಾಡ್ಕೊಂಡು ಬರೋಣಂತೆ'' ಅಂದ.

ಪೆಚ್ಚಾಗಿ ನಕ್ಕ ನಾಗೇಶ.

"ಬೇಡಯ್ಯ ನೀನು ಹೋಗಿ ಬಾ. ನಂಗೆ ಎಲ್ಲೂ ಬರೋ ಮೂಡಿಲ್ಲ'' ಅಂದ.

ಚಂದ್ರು ಹೊರಟ.

ಅವನು ಹೋದ್ಮೇಲೆ ಬಾಗಿಲು ಹಾಕ್ಕೊಂಡು ಮತ್ತೆ ಹಾಸಿಗೇಲಿ ಉರುಳಿದ ನಾಗೇಶ. ಮತ್ತೆ ಫೋನ್ ಗಂಟೆ ಬಾರಿಸಿದಾಗ ರೋಷದಿಂದ ಹೋಗಿ ರಿಸೀವರ್ ಎತ್ತಿ ಗಟ್ಟಿಯಾಗಿ, "ಯಾರ್ರೀ ಅದು, ನಿಮಗೆ ಮಾನ, ಮರ್ಯಾದೆ ಏನಾದ್ರೂ ಇದ್ಯೇನ್ರಿ?'' ಅಂದ.

ಅತ್ತ ಕಡೆಯ ಧ್ವನಿ,

"ಮರ್ಯಾದೇನೂ ಇದೆ, ಮಾನಾನೂ ಇದೆ. ಆದ್ರೆ ಇಲ್ದೆ ಇರೋದು ದುಡ್ಡು. ಅದಿಕ್ಕೆ ನಿಮಗೆ ಫೋನ್ ಮಾಡಿದ್ದು'' ಅಂದಿತು.

"ರೀ ನನ್ಹತ್ರ ಒಂದ್ ಲಕ್ಷ ಇಲ್ಲರೀ. ಮತ್ತೆ ಫೋನ್ ಮಾಡ್ಬೇಡಿ, ಗೋಳು ಹುಯ್ಕೋಬೇಡಿ.''

"ಅಂದ್ರೆ ನಿಮಗೆ ನಿಮ್ ಹೆಂಡ್ತಿ ಬೇಡ್ವ.''

"ಸತ್ತು ಸ್ವರ್ಗ ಸೇರಿರೋಳ್ನ ಎಲ್ಲಿಂದ ತಂದ್ಕೊಡ್ತೀರ್ರೀ. ರೀ ಸರಿಯಾಗಿ ಕೇಳಿ ನಿಮಗೆ ಬೇಕಾಗಿರೋ ನಾಗೇಶ ನಾನಲ್ರೀ. ಸರಿಯಾದ ನಂಬರ್ ನೋಡಿ ತಿರುಗಿಸ್ರೀ'' ಅಂದು ರಿಸೀವರ್ ಕುಕ್ಕಿದ.

ಹಣೆಯ ಮೇಲೆ ಸಾಲುಗಟ್ಟಿ ನಿಂತಿದ್ದ ಬೆವರು ಹನಿಗಳನ್ನು ಒರೆಸಿಕೊಂಡ.

ಕಣ್ಣಿಂದ ನೀರು ಉಕ್ಕಿತು. ಮಂಜಾದ ದೃಷ್ಟಿಗೆ ಸುಶೀಲಳ ಫೋಟೋ ಸರಿಯಾಗಿ ಕಾಣ್ಲಿಲ್ಲ. ಹತ್ತಿರ ಹೋದ.

"ಸುಶೀಲ ನೋಡ್ದ್ಯಾ, ನಿನ್ನನ್ನ ದೇವರಿಂದ ಕಿತ್ತು ತಂದು ನಂಗೆ ಕೊಡ್ತಾರಂತೆ. ಕೇಳ್ದ್ಯಾ ಅವರ ಮಾತ್ನ. ಅದಿಕ್ಕೆ ಒಂದು ಲಕ್ಷ ಅಂತೆ. ನಾನು ನಿನ್ನ ಪ್ರೀತಿಗೆ ಬೆಲೆ ಕಟ್ಟಿಲ್ಲ. ಈಗ ಅವರು ಜೀವಕ್ಕೆ ಬೆಲೆ ಕಟ್ತಿದ್ದಾರೆ. ಹೀಗ್ಯಾಕೆ ಮಾಡ್ದೆ ಸುಶೀ, ಸುಮ್ನೆ ನನ್ಜೊತೆ ಇದ್ದಿದ್ರೆ ಈ ತಾಪತ್ರಯನೇ ಇರ್ತಿರ್ಲಿಲ್ಲ.''

ಅಂದದ್ದಷ್ಟೆ, ಮುಂದೆ ಮಾತಾಡೋಕ್ಕೆ ಆಗ್ಲಿಲ್ಲ. ತುಂಬಾ ದುಃಖ ಆಯ್ತು.

ಸಂಜೆ ಆಫೀಸಿನ ಎಲ್ಲರೂ ಮನೆಗೆ ಬಂದರು. ನಾಗೇಶನಿಗೆ ಒಂದು ರೀತಿಯ ನಾಚಿಕೆಯಾಯಿತು.

"ಪಾಪ ಹೆಂಡ್ತಿ ಸಾವ್ನ ತುಂಬಾ ಹಚ್ಕೊಂಬಿಟ್ಟಿದಾರೆ ಅದಿಕ್ಕೆ ಹೀಗೆ. ಈಗ್ಲೇ ಏನಾದ್ರೂ ಔಷಧಿ, ಮಾತ್ರೇಂತ ತಗೊಂಡ್ರೆ ಒಳ್ಳೇದು. ಇಲ್ಲಿದ್ರೆ ಅದೇ ಯೋಚನೇಲಿ ಬುದ್ಧಿಭ್ರಮಣೆ ಆದ್ರೆ ಕಷ್ಟ'' ಅಂತ ಒಬ್ಬರು ಅಂದರು.

ಎಲ್ಲರೂ ನಾಗೇಶನನ್ನು ಸಮಾಧಾನ ಮಾಡೋರೆ.

ಅವರೆಲ್ಲ ಅಲ್ಲಿರುವಾಗ ಮತ್ತೆ ಫೋನ್ ಶಬ್ದ ಮಾಡ್ತು.

"ನೋಡಿ ಸಾರ್ ಫೋನ್‌ನಲ್ಲಿ ಅವನೇ ಲಕ್ಷ ರೂಪಾಯಿ ಕೊಡು ನಿನ್ ಹೆಂಡ್ತಿ ಕೊಡ್ತೀನಿ ಅಂತಾನೆ. ರಿಸೀವರ್ ತೆಗೀರಿ ಹಲೋ ಅನ್ನಿ. ನಂಗಂತೂ ಬೆಳಗ್ಗೆಯಿಂದ ಸಾಕಾಗಿದೆ'' ಅಂದ ನಾಗೇಶ್.

ನಾಗೇಶನ ಬಾಸ್ ಬಿಪಿನ್‌ದಾಸ್ ರಿಸೀವರ್ ಎತ್ತಿದರು.

"ಹಲೋ ಈಸ್ ಇಟ್ 3 4 9 0 8 9?"

"ಯಸ್ ಯಸ್."

"ಮಿಸ್ಟರ್ ನಾಗೇಶ ಪ್ಲೀಸ್."

"ನೀವು ಯಾರು ಮಾತಾಡೋದು?"

"ನಾನು ರಘು ಅಂತ ನಾಗೇಶ್ ಅವರ ಬ್ರದರ್–ಇನ್–ಲಾ."

"ಒಂದ್ನಿಮಿಷ" ಅಂದು ನಾಗೇಶನನ್ನು ಕರೆದು,

"ನಿಮ್ಮ ಬ್ರದರ್–ಇನ್–ಲಾ ಅಂತೆ" ಅಂದರು.

ನಾಗೇಶ ಬಂದು ರಘು ಜೊತೆ ಮಾತಾಡಿದ.

ಬಿಪಿನ್‌ದಾಸ್ ನಾಗೇಶನನ್ನು ನೋಡಿ,

"ತುಂಬಾ ಹೆದರಿದೀರ ಅಂತ ಕಾಣುತ್ತೆ. ಅದೂ ಫೋನ್ ಶಬ್ದ ಮಾಡಿದ್ರೆ ಬೆದರ್‍ತೀರ ಅಲ್ವ" ಅಂತ ಕೇಳಿದರು.

"ಹೌದು. ಮತ್ತೆ ಯಾವೋನೋ ಕೆಲಸಕ್ಕೆ ಬಾರ್ದೋನು ಫೋನ್ ಮಾಡಿದ್ರೆ ಬೆದರಿಕೆ ಆಗಲ್ವ. ಅದೂ ಹಾಗಾ ಅವನು ಮಾತಾಡೋದು" ಅಂದ.

ಬಿಪಿನ್‌ದಾಸ್ ಹೊರಡೋ ಮುನ್ನ, "ಬೇಕಾದ್ರೆ ಇನ್ನೊಂದೆಂಟ್ ದಿನ ವಿಶ್ರಾಂತಿ ತಗೊಳ್ಳಿ. ನಿಧಾನಕ್ಕೆ ಬಂದ್ರಾಯ್ತು" ಅಂದ್ರು.

"ಇಲ್ಲ ಸಾರ್. ನಾಳೆಯಿಂದ ಖಂಡಿತ ಬರ್‍ತೀನಿ. ಮನ್ಲಿದ್ರೆ ಮತ್ತದೇ ನೆನಪುಗಳು ಕಾಡ್ತಿರುತ್ವೆ" ಅಂದ ನಾಗೇಶ.

ಆಫೀಸಿನವರೆಲ್ಲ ಹೋದ್ಮೇಲೆ ಹಾಗೇ ಕುರ್ಚೀಲಿ ಕೂತೇ ಇದ್ದ ಬಹಳ ಹೊತ್ತು.

ಹೊಟ್ಟೆ ಚುರುಗುಟ್ಟಿ ಮಧ್ಯಾಹ್ನ ಕೂಡಾ ಊಟ ಮಾಡಿಲ್ಲ ಅಂತ ಎಚ್ಚರಿಸಿತು.

1988ರಲ್ಲಿ ಇದ್ದಂಥಾ ಪರಿಸ್ಥಿತಿಯೇ ಮತ್ತೆ ಬಂದಿದೆ ಅನಿಸಿತು ನಾಗೇಶನಿಗೆ.

ಸ್ಟೌ ಹತ್ತಿಸಿ ಅನ್ನಕ್ಕಿಟ್ಟ. ಅನ್ನ ಆದ ಮೇಲೆ ಇದ್ದ ಮೊಸರಲ್ಲಿ ಕಲಸಿಕೊಂಡು ನುಂಗಿ ನೀರು ಕುಡಿದು ಬಂದು ಮತ್ತೊಂದು ಸಿಗರೇಟ್ ಹಚ್ಚಿದ.

ಇದು ಬದುಕು

ಒಲುಮೆ ಹುಣ್ಣಿಮೆ
ಎಂದು ಬರೆದ ಯುವ ಕವಿ
ಮದುವೆಯಾದ
ಪ್ರಸ್ತದ ದಿನ
ಅನುಭವ ಶೋಧನೆಗಿಳಿದ
ಹೊರಗೆ ಹಾಲ್ಚೆಲ್ಲಿದ ಬೆಳದಿಂಗಳು
ಒಳಗೆ ಅಮಾವಾಸ್ಯೆ ಕಗ್ಗತ್ತಲು.

— ದೊಡ್ಡರಂಗೇಗೌಡ



ಸಂಜೆಯ ಹೊತ್ತಿಗೆ ರಘು ಬಂದು ಸುಶೀಲಳ ವಿಮೆಗೆ ಸಂಬಂಧಿಸಿದ ಪೇಪರ್‌ಗಳನ್ನು ತಗೊಂಡು ಹೋದ. ಆಗ ನಾಗೇಶ "ಬೀರೂಲಿ ಅವಳ ಸೀರೆ, ಒಡವೆ ಇದ್ಯಲ್ಲ ಅವುಗಳನ್ನು ತಗೊಂಡು ಹೋಗು. ಅವಳೇ ಹೋದ್ಮೇಲೆ ಇನ್ನು ಅವುಗಳಿಂದೇನು ಪ್ರಯೋಜನ'' ಅಂದ.

"ಇರ್ಲಿ ಭಾವ ಅದಿಕ್ಕೇನು ಅರ್ಜೆಂಟಿಲ್ಲ. ನೀವು ಸ್ವಲ್ಪ ಸಮಾಧಾನ ಮಾಡ್ಕೊಂಡಿರಿ'' ಅಂದು ಹೊರಟ ರಘು.

ಕೇವಲ ಇಪ್ಪತ್ತು ದಿನಗಳ ಹಿಂದೆ ನಡೆದ ದೃಶ್ಯ ಕಣ್ಣಿಗೆ ಕಟ್ಟಿದ ಹಾಗೆ ಎದುರಾಯ್ತು.

ನಾಗೇಶ ಬಸ್ಸಿಗೆ ಹೊರಟ ಮೇಲೆ ಸುಶೀಲ ಹೊರಟಿದ್ದಳು. ಲೈಟ್ ಬಿಲ್ ಕಟ್ಟಲು, ತರಕಾರಿ ತರಲು, ದೂರದ ಅಮ್ಮನ ಮನೆಗೆ ಹೋಗಿ ಬರಲು ಹೀಗೆ ಅನೇಕ ಕೆಲಸಗಳನ್ನು ಅಂಟಿಸಿಕೊಂಡು ಹೊರಡುತ್ತಿದ್ದಳು.

ಆರು ತಿಂಗಳ ಹಿಂದೆಯಷ್ಟೇ ಹೊಸ ಲೂನ ಬಂದಿತ್ತು.

ನಾಗೇಶ, ಸುಶೀಲ ಅಂಥಾ ದಢೂತಿ ಆಸಾಮಿಗಳಲ್ಲದ್ದರಿಂದ ಒಂದೊಂದು ಸಾರಿ ಅವರಿಬ್ಬರೂ ಒಟ್ಟಿಗೇ ಲೂನದಲ್ಲಿ ಓಡಾಡುತ್ತಿದ್ದರು. ಸಿನಿಮಾಕ್ಕೆ, ಹೋಟೇಲಿಗೆ, ದೇವಸ್ಥಾನಕ್ಕೆ ಅಂತ.

ಮಿಕ್ಕಂತೆ ಸುಶೀಲಳದೇ ಲೂನ.

ಅವತ್ತೂ ಹಾಗೇ ಹೊರಟಿದ್ದಳು.

ದಾರೀಲಿ ಅಪಘಾತ.

ಎದುರಿನಿಂದ ಬಿರುಸಾಗಿ ಬಂದ ಲಾರಿ ಲೂನಕ್ಕೆ ಡಿಕ್ಕಿ ಹೊಡೀತು. ಲೂನ ಅಪ್ಪಚ್ಚಿಯಾಯ್ತು. ಜೊತೆಗೆ ಸುಶೀಲಳೂ...

ಕುಟುಕು ಜೀವ ಇದೆ ಅಂತ ಯಾರೋ ಅಂದಿದ್ರಿಂದ ಮಾರುತಿ ಕಾರಿನವರು ಸುಶೀಲಳನ್ನು ಆಸ್ಪತ್ರೆಗೆ ಸಾಗಿಸಿದರು.

ಅವಳ ಪರ್ಸಿನಲ್ಲಿದ್ದ ಅಡ್ರೆಸ್ ತೆಗೆದು ಯಾರೋ ಅವನಿಗೆ ಫೋನ್ ಮಾಡಿದರು ಆಫೀಸಿಗೆ.

ಓಡೋಡಿ ಬಂದ ನಾಗೇಶ.

ಹಿಂದೆಯೇ ಅವನ ಸಹೋದ್ಯೋಗಿಗಳೂ ಬಂದರು.

ಬೆಳಗ್ಗೆ ತಾನೇ ತೋಳಿನ ಮಾಲೆ ಹಾಕಿ ಸಿಹಿಮುತ್ತು ನೀಡಿ ಬೀಳ್ಕೊಟ್ಟಿದ್ದ ಸುಶೀಲ ಮತ್ತೆ ಬಾರದ ಕಡೆಗೆ ಹೊರಟೇಹೋಗಿದ್ದಳು.

ಅವಳುಟ್ಟಿದ್ದ ಹಸಿರು ಸೀರೆ, ಜೊತೇಲಿದ್ದ ಬ್ಯಾಗ್ ಇವುಗಳಿಂದ ಮಾತ್ರ ಸುಶೀಲಳನ್ನು ಗುರುತು ಹಿಡೀಬಹುದಿತ್ತು. ಸಾಮಾಜಿಕ ಸೇವೆ ಮಾಡಿದವರೊಬ್ಬರು ಅಪಘಾತದ ವಿವರ ತಿಳಿಸಿದ್ದರು. ಅಪ್ಪಚ್ಚಿಯಾಗಿದ್ದ ಲೂನ ಕೂಡ ಆಸ್ಪತ್ರೆ ಬಾಗಿಲಲ್ಲಿ ಇತ್ತು.

ವಿಚಾರ ತಿಳಿದೊಡನೆ ಸುಶೀಲಳ ಅಪ್ಪ ಅಮ್ಮ ಎಲ್ಲ ಬಂದರು. ಅತ್ತರು, ಗೋಳಾಡಿದರು. ಅಂತ್ಯ ಸಂಸ್ಕಾರಕ್ಕೆ ಏರ್ಪಾಡು ಮಾಡಿದರು. ಆಯ್ತು, ನಾಗೇಶ, ಸುಶೀಲ ಇವರುಗಳ ಕೇವಲ ಮೂರು ವರ್ಷಗಳ ದಾಂಪತ್ಯ ಅಂತ್ಯವಾಯಿತು. ಸುಶೀಲಳ ನೆನಪಿಗೆ ಒಂದು ಮಗುವೂ ಇಲ್ಲದಂತೆ, ಅವಳೀಗ ಬರೀ ನೆನಪಾಗಿ ಹೋದಳು ಅಷ್ಟೆ.

ಇಷ್ಟೆಲ್ಲ ಆಗಿ ಇಪ್ಪತ್ತು ದಿವಸಗಳಾಗಿವೆ. ಈಗ ಯಾವ್ದೋನೋ ಹೆಂಡ್ತೀನ ಕೊಡ್ತೀನಿ,

ಒಂದು ಲಕ್ಷ ಕೊಡು ಅಂತಿದಾನೆ. ದುಃಖದಲ್ಲಿ ಇರೋರ್‍ನ ಯಾವ ರೀತಿ ಬೇಕಾದರೂ ಎಕ್ಸ್‌ಪ್ಲಾಯ್ಟ್ ಮಾಡಬಹುದು ಅಂತಿರಬೇಕು.

ಹೋಗ್ಲಿ ಕೆಲಸಕ್ಕೆ ಬಾರದವನ ಫೋನ್ ಕರೆಗೆ ತಾನೇಕೆ ಮನಸ್ಸು ಕೆಡಿಸ್ಕೋಬೇಕು ಅಂದ್ಕೊಂಡು ಸುಮ್ಮನಾದ ನಾಗೇಶ.

* * * * *

ಮುಂದೆ ಒಂದು ವಾರದಲ್ಲಿ ದಿನಕ್ಕೊಂದರಂತೆ ಅದೇ ರೀತಿಯ ಫೋನ್ ಕರೆಗಳು ಬಂದಾಗ ನಾಗೇಶನ ನೆಮ್ಮದಿ ಕೆಟ್ಟೋಹೋಯಿತು. ಈ ರೀತಿಯ ಫೋನ್ ಕರೆ ಬರ್ತಿದೆ ಅಂದ್ರೆ ಯಾರೂ ನಂಬ್ತಾ ಇರ್‍ಲಿಲ್ಲ ಬೇರೆ. ಇದೊಳ್ಳೆ ಫಜೀತಿ ಆಯ್ತಲ್ಲ ಅಂತ ಪೇಚಾಡಿಕೊಂಡ.

ಆಫೀಸಿನಲ್ಲಿ ಎಲ್ಲರೂ ನಾಗೇಶನಿಗೆ ಬುದ್ಧಿಭ್ರಮಣೆಯಾಗಿದೆ ಅಂದ್ಕೊಂಡ್ರು. ಒಬ್ಬರಲ್ಲ ಒಬ್ಬರು ನಾಗೇಶನನ್ನ ಕುತೂಹಲದಿಂದ ಗಮನಿಸ್ತಿರೋರು. ಆಫೀಸಿಗೆ ಫೋನ್ ಬಂದಾಗ ಬಹಳ ಗಾಭರಿ ಆಗ್ತಿದ್ದ. ಒಂದ್ಸಾರಿ ಜಯಂತಿಗೆ ಹೇಳಿದ್ದ "ನಂಗೆ ಯಾವ ಫೋನ್ ಕಾಲೂ ಕೊಡ್ಬೇಡಿ. ಐ ಡೋಂಟ್ ವಾಂಟ್ ಟು ಟಾಕ್ ಟು ಎನಿಬಡಿ'' ಅಂತ. ಅದಕ್ಕೇ ರಘು ಮೂರ್‍ಸಾರಿ ಫೋನ್ ಮಾಡಿ ವಿಫಲನಾಗಿ ಆಫೀಸಿಗೇ ಹುಡುಕ್ಕೊಂಡು ಬಂದಿದ್ದ.

"ಏನ್ ಭಾವ ಫೋನ್ ರಿಸೀವೇ ಮಾಡಲ್ಲಾಂತ ಹೇಳಿದೀರಂತೆ. ಒಂದೇ ಒಂದು ಸಣ್ಣ ವಿಚಾರಕ್ಕೆ ಇಷ್ಟ್ ದೂರ ಬರ್‍ಬೇಕಾಯ್ತಲ್ಲ'' ಅಂದ ರಘು.

"ಯಾಕೆ ಫೋನ್ ರಿಸೀವ್ ಮಾಡಲ್ಲ ಗೊತ್ತಾ'' ಅಂದು ನಾಗೇಶ ಕಾರಣ ತಿಳಿಸಿದ.

ರಘು ಅಚ್ಚರಿ ಹೊಂದಿದ.

"ಏನ್ ಬಾವ ಸತ್ತೋಗಿರೋರ್‍ನ ತಂದ್‌ಕೊಟ್ರು ಒಂದು ಲಕ್ಷ ಕೇಳ್ತಿದಾನಾ. ಇದೆಲ್ಲ ಆಗೋ ಹಾಗಿದ್ರೆ ಸಿನಿಮಾ ನಟರು, ನಟಿಯರು, ರಾಜಕಾರಣಿಗಳು ಸತ್ತು ಸತ್ತು ಹುಟ್ಟಿದ್ರು.

ಐಶ್ವರ್‍ಯ ಹಾಗೂ ಅಧಿಕಾರದ ಬಯಕೆ ಇರುವವರೆಗೂ ಮಾನವನಿಗೆ ತೃಪ್ತಿ, ನೆಮ್ಮದಿಗಳು ದೊರಕಲಾರವು.

— ರೋಸೋ


ಇಂದು ನಾನು ಬದುಕಿಬಿಟ್ಟೆ. ನಾಳೆ ಒಂದು ಲೆಕ್ಕವೇ ಆಲ್ಲ ಎಂದು ತುಂಬು ಮನದಿಂದ ಹೇಳಬಲ್ಲವನೇ ಉತ್ತಮ ಮಾನವ.

— ಹೋರಸ್

ಮನುಷ್ಯನು ಹೆಚ್ಚು ವಿಷಯಗಳ ಬಗ್ಗೆ ನಾಚಿಕೆಪಟ್ಟಂತೆಲ್ಲ ಹೆಚ್ಚು ಹೆಚ್ಚು ಗೌರವ ಶಾಲಿಯಾಗುವನು.

— ಬರ್ನಾರ್ಡ್ ಶಾ

ಸಂಗ್ರಹ : ಸ್ವಾತಿ ಪಾವುತದ್ಕ



ಹುಟ್ಟಿ ಹುಟ್ಟಿ ಸಾಯ್ತಿದ್ರು. ಅಕ್ಕನ ಸಾವನ್ನು ನೀವು ತುಂಬಾ ಹಚ್ಕೊಂಡಿದೀರಂತ ಕಾಣುತ್ತೆ. ಅದಿಕ್ಕೆ ನಿಮ್ಮ ಮನಸ್ಸಿಗೆ ಏನೇನೋ ಅನಿಸ್ತಿದೆ'' ಅಂದು ರಘು ಸ್ವಲ್ಪ ಗಟ್ಟಿಯಾಗೇ ನಕ್ಕ.

ಆಫೀಸ್ನೋರೆಲ್ಲ ರಘೂನ ಗಮನಿಸಿದರು. ನಾಗೇಶ ಪೆಚ್ಚಾದ.

“ಅಷ್ಟೊಂದು ಜೋರಾಗಿ ನಗ್ಬೇಡಯ್ಯ. ನಾನು ಹೇಳ್ತಿರೋದು ನಿಜಾನಯ್ಯ. ಇಷ್ಟು ದಿನಕ್ಕೆ ಒಂದಿಪ್ಪತ್ತು ಫೋನಾದ್ರೂ ಬಂದಿದೆ. ಅಲ್ಲ ಫೋನ್ ಬಂದಾಕ್ಷಣ ನಾನು ಕೇರ್ ಮಾಡ್ತೀನಾ, ವಿಚಾರ ತಿಳಿಸ್ದೆ ಅಷ್ಟೆ.''

“ಹಾಗಲ್ಲ ಭಾವ, ಹುಟ್ಟಿದೋರು ಒಂದಲ್ಲ ಒಂದಿನ ಸಾಯಲೇಬೇಕು. ಕೆಲವರು ಬೇಗ, ಕೆಲವರು ನಿಧಾನವಾಗಿ. ಕೆಲವರು ಕಾಯಿಲೆಯಿಂದ, ಇನ್ನು ಕೆಲವರು ಅಪಘಾತದಿಂದ. ಹೀಗೆ ಸಾವೊಂದೇ ಇನ್ನೂ ವಿಜ್ಞಾನಿ ಭೇದಿಸಲಾಗದ ನೈಸರ್ಗಿಕ ವಿಸ್ಮಯ. ಅಂಥಾದ್ರಲ್ಲಿ ನೀವು ಅಕ್ಕನ ಸಾವನ್ನ ತಡ್ಕೊಳೋಕೆ ಆಗ್ತಿಲ್ಲ. ನಿಜ, ಆದರೆ ಅದು ಅನಿವಾರ್ಯ ಅಲ್ವೆ. ಈಗ ನಾವೆಲ್ಲ ದುಃಖ ಸಹಿಸ್ಕೊಂಡಿಲ್ವೆ.''

“ಅದೆಲ್ಲ ಸರಿ ಕಣೋ. ಆದ್ರೆ ಆ ಫೋನ್ ಕರೆ ನಿಜವಾಗ಼್ಲೂ ಬರ್ತಿದೆ ಕಣಯ್ಯ. ನಾನು ಸುಳ್ಳು ಹೇಳ್ತಿಲ್ಲ'' ಅಂತ ನಾಗೇಶ ಅನ್ನುತ್ತಿದ್ದಂತೆ ಜಯಂತಿ ಬಂದು,

“ಸಾರ್ ನಿಮಗೆ ಫೋನ್ ಬಂದಿದೆ'' ಅಂದಳು.

“ನೋಡಿ ನಿಮಗೆ ಎಷ್ಟ್ ಸಾರಿ ಹೇಳಿದೀನಿ, ನಂಗ್ಯಾವ್ದೂ ಫೋನ್ ಕೊಡ್ಬೇಡೀಂತ.''

“ಆದ್ರೆ ನಾನೇನ್ಮಾಡ್ಲಿ ಸಾರ್. ಪೋಲೀಸ್ ಸ್ಟೇಷನ್ನಿಂದ ಫೋನ್ ಬಂದಿದೆ. ಇನ್‌ಸ್ಪೆಕ್ಟರ್ ರಘುನಾಥ್ ಫೋನ್ ಮಾಡಿದಾರೆ ಅರ್ಜಂಟಾಗಿ ನಿಮ್ಹತ್ರ ಮಾತಾಡ್ಬೇಕಂತೆ.''

“ಆಂ ಪೋಲೀಸ್ ಸ್ಟೇಷನ್ನಿಂದಾನಾ'' ಅಂತ ಗಾಭರಿ ಹೊಂದಿದ ನಾಗೇಶ.

“ಹೋಗಿ ಭಾವ ಏನಾದ್ರೂ ಮುಖ್ಯವಾದ ವಿಚಾರ ಇರಬೇಕೂಂತ ಕಾಣುತ್ತೆ. ನಂಗೆ ಮಾಡಿದ ಹಾಗೆ ಅವರಿಗೆ ರೆಫ್ಯೂಸ್ ಮಾಡೋಕಾಗಲ್ಲ'' ಅಂದ ರಘು.

ನಾಗೇಶ ಬಂದು ರಿಸೀವರ್ ಎತ್ತಿ “ಹಲೋ'' ಅಂದು ಹಾಗೇ ನಿಂತಿದ್ದು ಒಂದೇ ನಿಮಿಷದಲ್ಲಿ ಫೋನ್ ಒಡೆದೇ ಹೋಗುವಂತೆ ರಿಸೀವರ್ ಕುಕ್ಕಿ“ರ್ಯಾಸ್ಕಲ್'' ಅಂದರಚಿದ. ನಾಗೇಶನ ಕಿರುಚುವಿಕೆಗೆ ಜಯಂತಿ, ರಘು ಜೊತೆಗೆ ಇಡೀ ಆಫೀಸೇ ಅಚ್ಚರಿಯಿಂದ ನೋಡಿತು.

“ಇರೋದೊಂದು ಫೋನು. ಅದ್ನೂ ಒಡೆದ್ ಹಾಕ್ತಿಯೇನಯ್ಯಾ.''

“ನಿನ್ ಕೋಪ ಫೋನ್ ಮೇಲೆ ಯಾಕೆ ತೀರಿಸ್ಕೋತೀಯ.''

“ರೀ ಜಯಂತಿ ಅವನಿಗ್ಯಾಕ್ರೀ ಫೋನ್ ಕೊಟ್ರಿ.''

ಹೀಗೆ ಒಬ್ಬೊಬ್ರು ಒಂದೊಂದು ಮಾತಾಡಿದ್ರು.

ಮುಖ ಕೆಂಪಗೆ ಮಾಡ್ಕೊಂಡು ಜಯಂತಿ ಕಡೆ ನೋಡಿ “ಯಾಕ್ರೀ ಬೊಗಳೆ ಬಿಡ್ತೀರ. ಪೋಲೀಸ್ ಸ್ಟೇಷನಿಸ್ಸಿಂದಾನಾ ಫೋನು. ಕಿವಿ ಕೇಳ್ದೆ ಇರೋರ್ನೆಲ್ಲ ಇಲ್ಲಿ ರಿಸೆಪ್ಷನಿಸ್ಟ್ ಅಂತ ಇಟ್ಕೊಂಡಿದೀವಲ್ಲ'' ಅಂದು ತನ್ನ ಸ್ಥಾನಕ್ಕೆ ಬಂದ.

ನಾಗೇಶ ಯಾವತ್ತೂ ಹೀಗೆ ಮಾತಾಡಿರ್ಲಿಲ್ವಲ್ಲ ಅಂತ ಜಯಂತಿ ಗಾಬರಿಯಿಂದ ಅವನನ್ನು ನೋಡಿದಳು. ರಘು ಆಸಕ್ತಿಯಿಂದ ಭಾವನನ್ನು ನೋಡಿದ.

“ಯಾರ್ದು ಭಾವ ಫೋನು.''

“ಅದೇ ಹಲ್ಕಾ ನನ್ನ ಮಗ. ಲಕ್ಷ ಕೊಡು ಹೆಂಡ್ತಿ ಕೊಡ್ತೀನಿ ಅಂತ.''

"ಭಾವ ಅವ್ನು ಇನ್ನೊಂದು ಸಾರಿ ಫೋನ್ ಮಾಡಿದ್ರೆ ಯಾರ ಹೆಂಡ್ತೀನ ಅಂತ ಕೇಳ್ಬಿಡಿ. ಯಾಕೇಂದ್ರೆ ಅವ್ನು ನಿಮ್ ಹೆಂಡ್ತೀನಂತೂ ತಂದ್ಕೊಡೋಕೆ ಆಗಲ್ಲ."

"ಅದ್ಹೇಳು ಮತ್ತೆ. ಅಲ್ಲ ಈ ಜಯಂತಿ ಪೋಲೀಸ್ ಸ್ಟೇಷನ್ನಿಂದ ಅಂತ ಸುಳ್ ಹೇಳಿ ಯಾಕೆ ಫೋನ್ ಕೊಟ್ಲು ಅಂತ" ಅಂದು ಜಯಂತಿ ಕಡೆ ನೋಡಿದ.

ಇದ್ದಕ್ಕಿದ್ದಂತೆ ಎದ್ದು ಹೋಗಿ ಅವಳ ಕೈ ಹಿಡಿದು ಅದುಮಿ, ಕುಲುಕಿ, "ಐ ಆಮ್ ಸಾರಿ, ಇನ್ಯಾವತ್ತೂ ಹೀಗೆ ಮಾಡಲ್ಲ. ಆದ್ರೆ ದಯವಿಟ್ಟು ಫೋನು..." ಅಂದ.

ಅವನಿಂದ ಕೈ ಬಿಡಿಸಿಕೊಳ್ಳಲು ಯತ್ನಿಸಿದಳು ಜಯಂತಿ, ಆದ್ರೆ ನಾಗೇಶನ ಹಿಡಿತ ಬಿಗಿಯಾಗಿತ್ತು.

"ಬಿಡಿ ಸಾರ್ ಕೈ ನೋಯುತ್ತೆ."

"ಬೇಜಾರ್ಮಾಡ್ಕೊಂಡಿಲ್ಲ ಅಂತ ಹೇಳಿ, ಕ್ಷಮ್ಸಿದೀನಿ ಅಂತ ಹೇಳಿ" ಅಂತ ಪೀಡಿಸಿದ.

ಜಯಂತಿ ಜೋರಾಗಿ ಕಿರುಚಿಕೊಂಡಳು. ಗಾಬರಿಯಿಂದ ಕೈ ಬಿಟ್ಟ ನಾಗೇಶ. ಕೆಲವರು ಜಯಂತಿಯ ಸಹಾಯಕ್ಕೆ ಧಾವಿಸಿದರು.

ಅದೇ ಸಮಯಕ್ಕೆ ಕ್ಯಾಬಿನ್‌ನಿಂದ ಹೊರಗೆ ಬಂದ ಬಿಪಿನ್‌ದಾಸ್ "ವಾಟ್ ಈಸ್ ಹ್ಯಾಪನಿಂಗ್" ಅಂದ್ರು.

ವಿಚಾರ ತಿಳಿದ ಮೇಲೆ ಅವರು ನಾಗೇಶನ ಕಡೆ ನೋಡಿದ್ರು. ನಾಗೇಶ "ಸಾರ್ ಅದು ಫೋನು... ಪೋಲೀಸ್ ಸ್ಟೇಷನ್ ಜಯಂತಿ..." ಅಂತ ತೊದಲಿದ.

ಬಿಪಿನ್‌ದಾಸ್ ಬೇಜಾರಿಂದ ಮತ್ತೆ ಕ್ಯಾಬಿನ್‌ಗೆ ಹೋದರು. ರಘು ನಾಗೇಶನ ಭಾವಮೈದುನ ಅಂತ ಗೊತ್ತಾದ ಮೇಲೆ ಅವನನ್ನು ಒಳಗೆ ಕರೆದರು.

"ಇತ್ತೀಚೆಗೆ ನಿಮ್ ಭಾವ ಹೇಗ್ಹೇಗೋ ಆಡ್ತಾರೆ. ಏನೋ ಮಾತಾಡ್ತಾರೆ. ಆಫೀಸಲ್ಲೂ ಹಾಗೆ. ಇನ್ನೊಂದಿಷ್ಟ್ ದಿನ ರಜ ಹಾಕಿ ರೆಸ್ಟ್ ತಗೋಳಿ ಅಂದ್ರೆ ಕೇಳ್ತಿಲ್ಲ. ನೀವ್ಯಾಕೆ ಅವರನ್ನು ಯಾರಾದರ್ರೂ ಒಳ್ಳೆ ಡಾಕ್ಟ್ರಿಗೆ ತೋರಿಸ್ಬಾರ್ದು" ಅಂತ ಕೇಳಿದರು.

"ನಂಗೂ ಹಾಗೇ ಅನ್ಸಿದೆ ಸಾರ್, ಅವರು ಏನೇನೋ ಮಾತಾಡುವಾಗ ಅಯ್ಯೋಪಾಪ ಅನ್ಸುತ್ತೆ. ಆದರೆ ಇವತ್ತು ನಾನು ಅವರ ವಿಚಿತ್ರವಾದ ನಡವಳಿಕೆ ನೋಡಿ ಬೇಜಾರು ಆಯ್ತು. ಗಾಬರಿಯೂ ಆಯ್ತು. ಒಂದು ವಿನಂತಿ ಸಾರ್."


"ಹೇಳಿ."

"ಅವರಿಗೆ ರಜ ಬೇಕಾದ್ರೆ ಕೊಡಿ. ಆದ್ರೆ ಯಾವುದೇ ಕಾರಣಕ್ಕೂ ಅವರನ್ನು ಕೆಲಸದಿಂದ ತೆಗೀಬೇಡಿ. ನಾನು ನಮ್ತಂದೆ ತಾಯಿಗೆ ಹೇಳಿ ಆದಷ್ಟು ಬೇಗ ಒಳ್ಳೆ ಡಾಕ್ಟ್ರಿಗೆ ತೋರಿಸ್ತೀನಿ."

"ನಮಸ್ಕಾರ ರೀ ಹನುಮಂತರಾಯರೇ."

"ಓಹೋ ನಮಸ್ಕಾರ, ಅದಿರಲಿ ನನ್ನ ಹೆಸರು ಹನುಮಂತರಾಯರು ಅಂತ ನಿಮ್ಗ್ಹೇಗೆ ಗೊತ್ತು?"

— ಶ್ರೀಕಾಂತ ರಾ. ಗುಳೇದ



"ಹಾಗೇ ಮಾಡಿ, ಈಗ್ಲೇ ನಾನು ಯಾವ ಎಕ್ಸ್‌ಟ್ರೀಮ್ ಸ್ಟೆಪ್ಸೂ ತಗೊಳಲ್ಲ. ಅವರು ಮೊದಲಿನ ಹಾಗಾದ್ರೆ ಸಾಕು. ಹೆಂಡ್ತಿಯ ಅನಿರೀಕ್ಷಿತ ಸಾವು ಸ್ವಲ್ಪ ಮೆಂಟಲ್ ಷಾಕ್ ಆಗಿರಬಹುದು."

"ನಾ ಬರ್ತೀನಿ ಸಾರ್" ಅಂದು ರಘು ಹೊರಗೆ ಬಂದ.

"ಏನಯ್ಯ ನಿಮ್ಮ ಸಾಹೇಬ್ರು ನಿನ್ನ ಬರಹೇಳಿದ್ದು" ಅಂತ ಭಾವಮೈದುನನ್ನು ಕೇಳಿದ ನಾಗೇಶ.

"ಏನಿಲ್ಲ ನಮ್ಮ ಆಫೀಸ್ ಮ್ಯಾನೇಜರ್ರು, ಇವರೂ ಸ್ನೇಹಿತರಂತೆ. ನಮ್ಮಾಫೀಸಿಗೆ ಬಂದಾಗ ಒಂದೆರಡು ಸಾರಿ ನೋಡಿದ್ರು, ಅದಿಕ್ಕೆ ಕರ್ದು ಮಾತಾಡಿಸಿದರು ಅಷ್ಟೆ ಅಂದ್ಹಾಗೆ ಭಾವ ರಾತ್ರಿ ನೀವು ಮನೆಗೆ ಬಂದು ಹೋಗಬೇಕಂತೆ. ಅಪ್ಪ ಹೇಳ್ಬಿಟ್ಟು ಬಾ ಅಂದಿದ್ರು."

"ಆಯ್ತು ಬರ್ತೀನಿ. ಏಳು ಗಂಟೆಗೆ ಬರ್ತಾರಂತೆ ಅಂತ ಹೇಳು."

"ಬನ್ನಿ ಪರವಾಗಿಲ್ಲ, ಅಲ್ಲೇ ಊಟ ಮಾಡ್ಕೊಂಡು ಬಂದ್ರಾಯ್ತು" ಅಂದು ರಘು ಹೊರಟ.

ಕೆಲಸದಲ್ಲಿ ಮಗ್ನನಾಗಲು ಯತ್ನಿಸಿದ ನಾಗೇಶ.

೨

ರಘು ಹೇಳಿದ ವಿಚಾರ ಕೇಳಿ ಕಾಂತಮ್ಮ, ಗುರುಬಸಪ್ಪ ಚಿಂತಾಕ್ರಾಂತರಾದರು. ಒಂದು ಜೀವ ಹೋಯ್ತು. ಅದರಿಂದಾಗಿ ಇನ್ನೊಂದು ಜೀವಕ್ಕೂ ತೊಂದರೆಯೇ ಅಂತ ಕಾಂತಮ್ಮ ತುಂಬ ಬೇಜಾರು ಮಾಡಿಕೊಂಡರು.

"ಅಲ್ಲ ನಾಗೇಶಂಗೆ ಯಾಕೆ ಹೀಗಾಯ್ತು" ಅಂತ ಚಿಂತಿಸಿದರು ಗುರುಬಸಪ್ಪ.

"ಯಾತಕ್ಕಾದ್ರೂ ಆಗ್ಲಿ, ನೀವು ಡಾಕ್ಟರನ್ನು ಬರಹೇಳಿ ಸರಿಯಾಗಿ ಪರೀಕ್ಷೆ ಮಾಡಿಸ್ಬೇಕು."

"ಮಾಡ್ಸೋಣ ಕಣೆ, ಅದಿಕ್ಕೆ ಸಾಮಾನ್ಯವಾದ ಯಾವ ಡಾಕ್ಟ್ರು ಆಗಲ್ಲ. ಒಬ್ಬ ಪ್ರಖ್ಯಾತ ಮನಶ್ಶಾಸ್ತ್ರಜ್ಞರೇ ಆಗ್ಬೇಕು. ಇರು ನಿಮ್ಮ ಚಿದಂಬರ್‌ಗೆ ಫೋನ್ ಮಾಡಿದ್ರೆ ಸಾಕು ಅವನ ಸ್ನೇಹಿತ ಒಬ್ಬ ಇದ್ದಾನೆ ಗುರುರಾಜ ಬಾದಾಮಿ ಅಂತ. ಅವರನ್ನು ಕರ್ಕೊಂಡು ಮನೇಗೇ ಬಂದ್ರೆ ಇಲ್ಲೇ ಪರೀಕ್ಷೆ ಮಾಡಿಸಬಹುದು" ಅಂದು ರಿಸೀವರ್ ಎತ್ತಿ ನಂಬರ್ ತಿರುಗಿಸಿದರು.

"ಸಂಜೆ ಏಳೂವರೆ ನಂತರ ಬರ್ತಾರಂತೆ. ಆಗಬಹುದಾ, ಈಗ ಸಮಾಧಾನಾನ" ಅಂತ ಹೆಂಡ್ತೀನ ಕೇಳಿದರು.

"ಏನಾದ್ರೂ ಸರಿ. ನಮ್ಮ ನಾಗೇಶ ಮೊದಲಿನ ಹಾಗಾದ್ರೆ ಸರಿ" ಅಂದರು ಕಾಂತಮ್ಮ.

"ನಿನ್ನ ಆತಂಕ ನಂಗೆ ಅರ್ಥ ಆಗುತ್ತೆ ಕಣೆ. ಮಗನೇ ಹೋದ್ಮೇಲೆ ಸೊಸೇನ ಯಾರಾದ್ರೂ ಕೇರ್ ಮಾಡ್ತಾರಾ. ಮಗಳೇ ಹೋದ್ಮೇಲೆ ಅಳಿಯನನ್ನು ಯಾರಾದ್ರೂ ಕೇರ್ ಮಾಡ್ತಾರಾ. ಆದ್ರೆ ನಿನ್ನ ವಿಚಾರದಲ್ಲಿ ಅಳಿಯನೂ ಅವನೇ ತಮ್ಮನೂ ಅವನೇ, ಅದಿಕ್ಕೇ ಅಲ್ವೇನೇ ಇಷ್ಟೊಂದು ಆತಂಕ. ಧೈರ್ಯವಾಗಿರು ನಿನ್ನ ನಾಗೇಶನಿಗೆ ಏನೂ ಆಗದೇ

ಇರೋಹಾಗೆ ನೋಡ್ಕೊಳೋ ಭಾರ ನನ್ದು.'' ಅಂದು ಹೆಂಡತಿ ಬೆನ್ನು ತಟ್ಟಿದರು.

ಒಬ್ಬಳೇ ಮುದ್ದಾದ ಮಗಳನ್ನು ಅಲ್ಲಿ ಇಲ್ಲಿ ಅಂತ ಯಾಕೆ ಕೋಡೋದೆಂದು ಸ್ವಂತ ತಮ್ಮನಿಗೇ ಕೊಟ್ಟು ಅದೇ ಊರಲ್ಲಿ ಸಂಸಾರ ಹೂಡಿಸಿದ್ದರು ಕಾಂತಮ್ಮ. ತುಂಬಿದ ಸಂಸಾರದಲ್ಲಿ ಅಕ್ಕ ತಮ್ಮ ಅನ್ಯೋನ್ಯವಾಗಿ ಬೆಳೆದಿದ್ದರು. ಈಗ ಅತ್ತೆ, ಅಳಿಯ ಸಂಬಂಧದಲ್ಲೂ ಚೆನ್ನಾಗೇ ಇದ್ದರು. ಮಗಳು ಅನಿರೀಕ್ಷಿತ ಅಪಘಾತಕ್ಕೆ ತುತ್ತಾಗಿದ್ದ ಸಂಕಟ ಇನ್ನು ಆರಿಲ್ಲದೇ ಇರುವಾಗ ಹೊಸದೊಂದು ಸಂಕಟವನ್ನು ಎದುರಿಸಲು ಆಕೆ ಸಿದ್ಧರಿರಲಿಲ್ಲ.

ಏಳು ಗಂಟೆಗೆ ಸರಿಯಾಗಿ ನಾಗೇಶ ಬಂದ.

"ಹೇಗಿದೀಯೋ ನಾಗೇಶ'' ಅಂತ ಅವನನ್ನು ತಬ್ಬಿ ಅತ್ತರು ಕಾಂತಮ್ಮ.

"ನೋಡಕ್ಕ'' ಅಂದು ಟೆಲಿಫೋನಿನ ಸಮಾಚಾರನ ಅಕ್ಕನಿಗೆ ತಿಳಿಸಿದ, ಹೀಗೆಲ್ಲಾದ್ರೂ ಉಂಟಾ ಅಂತ ಕೇಳಿದ.

"ಅದೆಲ್ಲ ನೀನು ಮನಸ್ಸಿಗೆ ಹಚ್ಕೋಬೇಡ ಕಣೋ ನಾಗೇಶ. ನೀನಾದ್ರೂ ಸುಖವಾಗಿರ್ಬೇಕು ಕಣೋ'' ಅಂದು ಅತ್ತರು ಕಾಂತಮ್ಮ.

ಏಳೂವರೆಗೆ ಬಂದ ವಾರ್ತಾ ಸಂಚಿಕೆಯಲ್ಲಿ ರಸ್ತೆ ಅಪಘಾತವೊಂದರ ದೃಶ್ಯ ತೋರಿಸಿದರು. ಹತ್ತಾರು ಮಂದಿ ಸತ್ತರೆಂದು ಹೇಳಿದರು. ಟೀವೀನೇ ನೋಡ್ತಾ ಕೂತ್ಬಿಟ್ಟ ನಾಗೇಶ. ಕೆಲವೇ ದಿನಗಳ ಹಿಂದೆ ಇಂಥದೇ ಘಟನೆ ನಡೆದಿತ್ತು.

"ಬನ್ನಿ ಬನ್ನಿ'' ಅಂದು ಸ್ವಾಗತಿಸಿದರು ಗುರುಬಸಪ್ಪ.

ಚಿಂತಾಕ್ರಾಂತನಾಗಿರುವ ನಾಗೇಶನನ್ನೇ ನೋಡಿಕೊಂಡು ಒಳಬಂದರು ಚಿದಂಬರ್ ಮತ್ತು ಗುರುರಾಜ ಬಾದಾಮಿ.

ಎಲ್ಲರಿಗೂ ಕಾಫಿ ಆಯಿತು.

ಬಾದಾಮಿ ವಿಷಯಕ್ಕೆ ಬಂದರು.

ಅದಕ್ಕೆ ಮುನ್ನ ಗುರುಬಸಪ್ಪ ನಾಗೇಶನನ್ನು ಎಲ್ಲರಿಗೂ ಪರಿಚಯ ಮಾಡಿಸಿದ್ದರು.

"ಎಲ್ಲಿ ಕೆಲಸ ಮಾಡ್ತಿದೀರ.'' ಬಾದಾಮಿ ನಾಗೇಶನನ್ನು ಕೇಳಿದರು.

ಪರಮಾತ್ಮನು ಮಾನವನನ್ನು ಸೃಷ್ಟಿಸಿ ಆಹಾರ ದೊರಕಿಸಲು ದುಡಿಯಬೇಕೆಂದು ಹೇಳಿದ. ದುಡಿಯದೇ ಉಣ್ಣುವವನು ಕಳ್ಳನೆಂದು ಹೇಳಿದ.

—ಮಹಾತ್ಮಗಾಂಧಿ

ಒಂದೇ ಜಿಗಿತಕ್ಕೆ ಯಾರಿಗೂ ಸ್ವರ್ಗ ಸಿಗಲಾರದು. ಸ್ವರ್ಗದ ನಿಚ್ಚಣಿಕೆಯನ್ನು ನಾವು ಪ್ರಯತ್ನದಿಂದ ಹತ್ತಬೇಕು.

— ಶ್ರೀ ಗೋವಿಂದ ಪೈ

ಸಂಗ್ರಹ : ಹ.ಗೋ.ಶಿ.



"ಕಮಲ್ ಇಂಜಿನಿಯರಿಂಗ್."

"ನಿಮ್ಮ ವೈಫು ಅಪಘಾತದಲ್ಲಿ ತೀರ್‍ಕೊಂಡು ಎಷ್ಟ್ ದಿವ್ಸ ಆಯ್ತು."

"ಹೆಚ್ಚು ಕಡಿಮೆ ಒಂದು ತಿಂಗಳು."

"ಆಕೆ ನಿಮ್ಮ ಪಾಲಿಗೆ ಇನ್ನಿಲ್ಲ ಅಂತ ಗೊತ್ತಾದಾಗ ನಿಮಗೆ ಏನನಿಸಿತು."

"ಏನನಿಸುತ್ತೆ? ದುಃಖ ಆಯ್ತು. ಇಂಥಾ ಸಾವು ಆಕೆಗೆ ಬರಬಾರ್ದಿತ್ತು ಅನಿಸ್ತು."

"ಆಮೇಲೆ."

ನಾಗೇಶ ಬಾದಾಮಿನ ದುರುಗುಟ್ಟಿ ನೋಡಿದ.

"ರೀ ಸ್ವಾಮಿ, ನೀವು ನಮ್ಮ ಮಾವನ ಗೆಸ್ಟು ಅಂತ ಇಷ್ಟ್ ಹೊತ್ತು ಸುಮ್ನೆ ಉತ್ತರ ಕೊಟ್ಟೆ ಆದೆಲ್ಲ ನನ್ನ ಪರ್ಸನಲ್ ವಿಚಾರ, ನಿಮಗ್ಯಾಕೆ ಹೇಳಿ" ಅಂದ ಗಟ್ಟಿಯಾಗಿ. ಅಷ್ಟರಲ್ಲಿ ಫೋನ ಶಬ್ದ ಮಾಡಿತು.

"ಎಕ್ಸ್‌ಕ್ಯೂಸ್ ಮಿ" ಅಂದು ಫೋನ್ ಬಳಿ ಹೋದರು ಗುರುಬಸಪ್ಪ.

"ಮಾವ ನನ್ನನ್ನು ಯಾರಾದ್ರೂ ಕೇಳಿದ್ರೆ ಇಲ್ಲ ಅಂತ ಹೇಳ್ಬಿಡಿ" ಅಂದ ನಾಗೇಶ.

ಗುರುಬಸಪ್ಪ ನಕ್ಕು "ಯಾವ ಫೋನು ರಿಂಗಾದ್ರು ಅದು ನಿಂಗೇ ಅನ್ನೋ ಗಾಬರಿ ಯಾಕೆ ಮಾತಾಡ್ತಾ ಇರು ಬರ್ತೀನಿ" ಅಂದು ರಿಸೀವರ್ ಎತ್ತಿ ಹಲೋ ಅಂದರು ಗುರುಬಸಪ್ಪ.

"ಯಾಕೆ ಫೋನ್ ರಿಂಗಾದ್ರೆ ಭಯಾನಾ."

ಚಿದಂಬರ ನಾಗೇಶನ್ನ ಕೇಳಿದ್ರು.

"ಭಯಾಂತಲ್ಲ, ಸುಮ್ನೆ ರಾಂಗ್ ನಂಬರ್‌ಗಳು ಬರುತ್ವೆ, ಬಾಯಿಗೆ ಬಂದಿದ್ದು ಮಾತಾಡ್ತಾರೆ ಅದಿಕ್ಕೆ."

ಬಾದಾಮಿ ನಕ್ಕರು.

"ಕ್ಷಮಿಸಿ, ನೀವು ಇಲ್ಲಿರೋದನ್ನು ಹುಡುಕಿ ನಿಮಗೆ ಯಾರಾದ್ರೂ ಫೋನ್ ಮಾಡಬಹುದು ಅನ್ನೋ ವಿಶೇಷವಾದ ಗಾಬರಿ ಯಾಕೇಂತ."

ಅದಕ್ಕೆ ನಾಗೇಶ ಉತ್ತರಿಸಲಿಲ್ಲ.

ಗುರುಬಸಪ್ಪ ಬಂದು,

"ನಿಮ್ಮ ಕೊಲೀಗ್ ಚಂದ್ರು ಅಂತೆ ಏನೋ ಮಾತಾಡ್ಬೇಕೂಂತ ಹೇಳ್ತಿದ್ದಾರೆ" ಅಂದ್ರು ನಾಗೇಶಂಗೆ.


ಚಂದ್ರುಗೆ ಹೇಳಿದ್ದೆ ಸಂಜೆ ನಮ್ಮ ಮಾವನ ಮನೆಗೆ ಹೋಗ್ಬೇಕೂಂತ. ಅದಕ್ಕೇ ಇಲ್ಲಿಗೆ ಮಾಡಿರ್‌ಬೇಕು. ಸದ್ಯಕ್ಕೆ ಅವನೊಬ್ಬನೇ ಹಿತೈಷಿ ನಂಗೆ, ಅಂದ್ಕೊಂಡು ಎದ್ದು ಬಂದು ರಿಸೀವರ್ ಎತ್ತಿ "ಹಲೋ" ಅಂದ.

ಮೂವರೂ ನಾಗೇಶನನ್ನು ಗಮನಿಸುತ್ತಿದ್ದರು.

ಅವನೇನೂ ಮಾತಾಡ್ತಿರಲಿಲ್ಲ. ಮುಖ ಕೆಂಪಾಯ್ತು, ಬೆವರಿತು, ಕೈಕಾಲು ನಡುಗಿತು ಆವೇಶದಿಂದ ರಿಸೀವರ್‌ನ ಕುಕ್ಕಿದ. ಅದು ನೆಲದ ಮೇಲೆ ಬಿದ್ದು ಒಡೆದೇ ಹೋಯಿತು.

"ಹಲ್ಕಾ ರ್‍ಯಾಸ್ಕಲ್ಸ್,ಮಾನ ಮರ್ಯಾದೆ ಒಂದೂ ಇಲ್ಲದ ಜನ. ಒಳ್ಳೆ ಬೇತಾಳಗಳ ತರ ಹಿಂದೆ ಬಿದ್ದಿದ್ದಾರೆ." ಅಂದರಚಿ ಕುರ್ಚೀಲಿ ಕಕ್ಕರಿಸಿ ಕಣ್ಣು ಮುಚ್ಚಿದ.

ಜೋರಾಗಿ ಫ್ಯಾನ್ ಹಾಕಿದರು ಗುರುಬಸಪ್ಪ. ಗುರುರಾಜ ಬಾದಾಮಿ ಹಾಗೂ



ಚಿದಂಬರ ನಾಗೇಶನನ್ನೇ ಕುತೂಹಲದಿಂದ ನೋಡಿದರು.

ದಿಢೀರನೆ ಕಣ್ಣುಬಿಟ್ಟ ನಾಗೇಶ.

"ಎಂಥಾ ಕೆಲಸ ಮಾಡಿದ್ರಿ ಮಾವ. ಫೋನ್ ಕೊಡ್ಬೇಡೀಂತ ಹೇಳಿದೀನಿ. ನೀವೂ ಹೀ
ಮೋಸ ಮಾಡ್ತೀರಾಂತ ಅಂದ್ಕೊಂಡಿರ್‍ಲಿಲ್ಲ'' ಅಂದ ಗಟ್ಟಿಯಾಗಿ,

"ಅಲ್ಲಪ್ಪ ನಿನ್ನ ಕೊಲೀಗ್ ಚಂದ್ರು...'' ಅಂತ ಗುರುಬಸಪ್ಪ ಅನ್ನುತ್ತಿದ್ದಂತೆ.

"ಕೊಲೀಗೂ ಅಲ್ಲ ಅವರಪ್ಪನೂ ಅಲ್ಲ. ಇನ್ನು ವಯಸ್ಸಾಗಿಲ್ಲ ನಿಮಗೆ ಆಗಲೇ ಕಿ
ಮಂದಾನಾ'' ಅಂದ.

"ಅಂದ್ರೆ ಫೋನ್ ಮಾಡಿದ್ದು ಯಾರು?''

"ಇನ್ಯಾರು ಅದೇ ಆ ಬೇಕೂಫ. ಲಕ್ಷ ಕೊಟ್ರೆ ಹೆಂಡ್ತಿ ಕೊಡ್ತೀನಿ ಅಂತ. ಅಲ್ಲ ಇವರಿಗೆ
ಹೇಳೋರು ಕೇಳೋರು ಯಾರೂ ಇಲ್ವೆ. ಪೋಲೀಸ್ನೋರೆಲ್ಲ ಏನು ನಿದ್ರೆ ಮಾಡ್ತಿದಾರೊ
ಹೇಗೆ'' ಅಂದು ಬಡಬಡಿಸಿದ ನಾಗೇಶ.

ಎಲ್ಲರೂ ನಾಗೇಶನನ್ನು ವಿಚಿತ್ರ ವ್ಯಕ್ತಿಯಂತೆ ನೋಡುತ್ತಿದ್ದರು. ಅವಮಾನಿತನಾದಂ
ನಾಗೇಶ,

"ಮಾವ 5 6 4 3 2 1 ನಂಬರ್ ತಿರುಗಿಸಿ. ಅದು ಚಂದ್ರು ಮನೇದು. ಈಗ್ತಾನೆ ಫೋನ
ಮಾಡಿದ್ದ ಅಂತ ಹೇಳಿದ್ರಲ್ಲ ಅವನ ನಂಬರ್ರೇ. ಫೋನ್ ಮಾಡಿ ಕೇಳಿ ಈಗ ರಿಂಗ್ ಮಾಡಿದು
ಅವನೇನಾಂತ'' ಅಂದ.

ಗುರುಬಸಪ್ಪನವರು ಅಲುಗಲಿಲ್ಲ.

"ಮಾಡಿ ಮಾವ ನಿಮಗೇ ಸತ್ಯ ಗೊತ್ತಾಗುತ್ತೆ'' ಅಂತ ಬಲವಂತಪಡಿಸಿದ ಮೇ
ಗುರುಬಸಪ್ಪನವರು ಚಂದ್ರುಗೆ ಫೋನ್ ಮಾಡಿ ಬಂದರು.

"ಅವನು 'ನಾನ್ ಫೋನ್ ಮಾಡಿರ್‍ಲಿಲ್ಲ' ಅಂದು ಹೇಳಿದ'' ಅಂದ್ರು.

ಅವರು ಹಾಗಂದಿದ್ದೇ ತಡ ದಿಗ್ವಿಜಯ ಹೊಂದಿದವನಂತೆ ನಾಗೇಶ "ನೋಡ್ದಾ
ಈಗ್ಲಾದ್ರೂ ಗೊತ್ತಾಯ್ತು'' ಅಂದ.

ಬಾದಾಮಿಯವರು "ಮಿಸ್ಟರ್ ನಾಗೇಶ್'' ಅನ್ನುತ್ತಿದ್ದ ಹಾಗೆ "ನೋಡಿ ಸಾರ್, ಇದ
ನನ್ನ ವೈಯಕ್ತಿಕ ವಿಚಾರ. ನೀವು ದಯವಿಟ್ಟು ತಲೆ ಹಕ್ಬೇಡಿ. ನಾನೇನಾದರೂ ನಿಮ್ಮ ಸಹಾಯ
ಯಾಚಿಸಿಕೊಂಡು ಬಂದ್ರೆ ಒಂದಲ್ಲ ನೂರು ಪ್ರಶ್ನೆ ಮಾಡಿ ಉತ್ತರ ಹೇಳ್ತೀನಿ, ಆದ್ರೆ ನಾಟ್ ನಾ
ಅಂದು ಕೋಣೆಯ ಕಡೆ ಹೆಜ್ಜೆ ಹಾಕಿ ಬಾಗಿಲಿನಲ್ಲಿ ನಿಂತಿದ್ದ ಕಾಂತಮ್ಮನಿಗೆ,

"ಅಕ್ಕ ತಿಳಿಸಾರು ಅನ್ನ ಮಾಡು, ಊಟ ಮಾಡ್ಕೊಂಡೇ ಹೋಗ್ತೀನಿ. ಅಲ್ಲೀವರೆಗೂ
ಒಂದು ನಿಮಿಷ ಮಲಗಿರ್‍ತೀನಿ'' ಅಂದು ಕೋಣೆಯೊಳಗೆ ಹೋದ.

ಗುರುಬಸಪ್ನೋರು "ಇವನ್ಯಾವತ್ತೂ ಹೀಗಿರ್‍ಲಿಲ್ಲ ಸಾರ್ ಮಗಳು ಹೋಗೇ ಹೋದ್ದು
ಇವನ್ನು ಹೀಗಾಗ್ಬಿಟ್ಟ'' ಅಂದರು.

"ಅದ್ಸರಿ ಗುರುಬಸಪ್ನೋರೇ ಫೋನ್ ಮಾಡ್ತಿರೋರು ಯಾರು, ಅದರಲ್ಲಿ ನಿಜಾಂ
ಎಷ್ಟಿದೆ ಅಂತ ಪತ್ತೆ ಮಾಡಬಹುದಲ್ವ'' ಅಂದರು ಚಿದಂಬರ.

"ಮಾಡಬಹುದು, ಆದರೆ ಅಪಘಾತದಲ್ಲಿ ಮುಖ, ಕೈ ಕಾಲು ಜಜ್ಜಿ ಹೋಗಿ ಮಾಂಸದ
ಮುದ್ದೆಯಾಗಿ ಬಿದ್ದಿದ್ದೋಳನ್ನು ಪೋಸ್ಟ್‌ಮಾರ್ಟಂ ಅಂತ ಇನ್ನಷ್ಟು ಕುಯ್ದು ಗಬ್ಬೆಬ್ಬಿಸಿದ್ದ ಅವ

ಶರೀರನ ನಾವೇ ಅಂತ್ಯ ಸಂಸ್ಕಾರ ಮಾಡಿದೀವಿ. ಇನ್ನು ಅವಳು ಹಿಂದಕ್ಕೆ ಬರೋದೂಂದ್ರೇನು. ಇದೇ ಒಂದು ನೆಪ ಹಾಕ್ಕೊಂಡು ಯಾರೋ ಫೋನ್ ಮಾಡಿರ್ತಾರಾ!'' ವಿವರಿಸಿದರು ಗುರುಬಸಪ್ಪ.

"ನಿಮ್ಮ ಅಳಿಯನಿಗೆ ಬುದ್ಧಿಭ್ರಮಣೆ ಆಗಿರಬಹುದೇ ಅನ್ನೋದನ್ನು ಕೂಲಂಕುಷವಾಗಿ ಪರೀಕ್ಷಿಸಿದರೆ ಈ ಫೋನ್ ಕರೆ ನಿಜವ್ವೋ ಸುಳ್ಳೋ ಗೊತ್ತಾಗುತ್ತೆ.''

"ಫೋನ್ ಕರೆ ಸುಳ್ಳು, ಬುದ್ಧಿ ಭ್ರಮಣೆ ನಿಜ'' ಅಂದರು ಗುರುಬಸಪ್ಪ.

"ಹಾಗಲ್ಲ ಸಾರ್, ಫೋನ್ ಯಾರು ಮಾಡ್ತಿದ್ದಾರೆ, ಏನು ಮಾತಾಡ್ತಿದ್ದಾರೆ. ಲಕ್ಷ ರೂಪಾಯಿ ಎಲ್ಲಿ ತಂದ್ಕೊಡು ಅಂತ ಹೇಳ್ತಿದ್ದಾರೆ. ಇವ್ರುಗಳನ್ನೆಲ್ಲ ವಿಚಾರಿಸಿದರೆ ನಿಜ ಗೊತ್ತಾಗೋಲ್ವೆ'' ಅಂತ ಚಿದಂಬರ ಅನ್ನುತ್ತಿದ್ದಂತೆ ಒಳಗಿಂದ ಬಂದ ನಾಗೇಶ.

"ನೀವುಗಳು ಯಾರೂ ಏನೂ ಮಾಡಬೇಡಿ. ನಾನು ಅವನನ್ನು ವಿಚಾರಿಸ್ಕೋತೀನಿ. ಸಮಯ ಬರ್‍ಲಿ ಅಂತ ಕಾಯ್ತಿದೀನಿ. ಅಲ್ಲ ಏನೋ ಹೀಗೊಂದು ಫೋನ್ ಬರ್‍ತಿದೆ ಅಂತ ಹೇಳಿದ್ದಕ್ಕೆ ನನಗೇ ಬುದ್ಧಿಭ್ರಮಣೆಯಾಗಿದೆ ಅಂತ ಶುರುಮಾಡ್ಬಿಟ್ರಾ. ಥ್ಯಾಂಕ್ಸ್ ಫಾರ್ ಯುವರ್ ಕಾಂಪ್ಲಿಮೆಂಟ್ಸ್'' ಅಂದು ಸಶಬ್ದವಾಗಿ ಕೈ ಜೋಡಿಸಿ ಅಡುಗೆ ಮನೆಗೆ ಹೋದ.

ಕಾಂತಮ್ಮ ತಮ್ಮನಿಗೆ ನಿಧಾನವಾಗಿ ಬಡಿಸಿದಳು.

"ದಿನಾ ರಾತ್ರೆ ಇಲ್ಲಿಗೇ ಊಟಕ್ಕೆ ಬಂದ್ಬಿಡು, ಅಲ್ಲಿ ಯಾಕೆ ಪರದಾಡ್ತೀಯ.''

"ಅಲ್ಲಕ್ಕ, ಭಾವ ನಂಗೆ ಹುಚ್ಚ ಅನ್ನೋ ಪಟ್ಟ ಕಟ್ಟಿದ್ದಾನೆ. ದಿನಾ ಇಲ್ಲಿಗೆ ಊಟಕ್ಕೆ ಬಂದ್ರೆ, ಅದಕ್ಕೊಂದು ಕಥೆ ಕಟ್ತಾನೆ. ಬೇಡ ನಾನೇನಾದ್ರೂ ಮಾಡ್ಕೋತೀನಿ ಬಿಡು. ಸುಮ್ನೆ ನನ್ನಿಂದ ಬೇರೆಯವರಿಗೆ ಯಾಕೆ ತೊಂದರೆ'' ಅಂದು ಬಿಸಿ ಬಿಸಿ ಸಾರು ಊಟ ಮಾಡಿ ಎದ್ದ.

ಚಿದಂಬರ, ಗುರುರಾಜ ಬಾದಾಮಿ ಇಬ್ಬರೂ ಹೊರಟು ಹೋಗಿದ್ದರು.

"ನಾ ಬರ್‍ತೀನಿ ಭಾವ, ಬರ್‍ತೀನಯ್ಯ ರಘು. ಅಕ್ಕ ನೀವೇನು ಯೋಚ್ನೆ ಮಾಡ್ಬೇಡ'' ಅಂದು ಹೊಸಿಲು ದಾಟಿದ ಅವನು ಹೋಗೋದನ್ನೇ ನೋಡುತ್ತ ಮೂವರೂ ನಿಂತಿದ್ದರು.

"ಡಾಕ್ಟರು ಏನಂದ್ರು.'' ಕಾಂತಮ್ಮ ಪ್ರಶ್ನಿಸಿದಳು.

"ಏನಂತಾರೆ, ಕೂಲಕುಷವಾಗಿ ಪರೀಕ್ಷೆ ಮಾಡ್ಬೇಕು, ಒಂದಿನ ಆಸ್ಪತ್ರೆಗೇ ಕರ್ಕೊಂಡ್ ಬನ್ನಿ ಅಂದ್ರು. ಈ ಮನುಷ್ಯ ಬರ್‍ತಾನ್ಯೇ.''

"ಹಾಗಲ್ಲ ಆಸ್ಪತ್ರೆ ಅಂದ್ರೆ ಬರಲ್ಲ. ಹೀಗೇ ಸ್ನೇಹಿತರ ಮನೆಗೆ ಅಂತ ಹೇಳಿ ಕರ್ಕೊಂಡ್ ಹೋಗ್ಬೇಕು'' ಅಂತ ರಘು ಸಲಹೆ ಮಾಡಿದ.

ಅಪರೂಪ

ಏನೆಲ್ಲ ಕಳೆದರೂ
ಬತ್ತಲಿಲ್ಲ ಆಸೆ ಜಲಧಿ
ಎಷ್ಟೆಲ್ಲ ಉಳಿಸಿದರೂ
ಸಿಕ್ಕಲಿಲ್ಲ ಮನಕೆ ನೆಮ್ಮದಿ!

— ದೊಡ್ಡರಂಗೇಗೌಡ



"ಹೌದ್ರೀ, ಹಾಗಾದ್ರೂ ಏನಾದರೂ ಮಾಡ್ಬೇಕು. ಇಲ್ದಿದ್ರೆ ಇವನ ಬದುಕೇ ಇನ್ನೊಂದ
ದಾರಿ ಆಗಿ ಹೋಗುತ್ತೆ'' ಅಂದು ಆತಂಕ ವ್ಯಕ್ತಪಡಿಸಿದರು ಕಾಂತಮ್ಮ.

ಮಗಳ ಬದುಕಿನ ದಿನಗಳನ್ನು ನೆನಪಿಸಿಕೊಂಡರು ಕಾಂತಮ್ಮ.

ಒಬ್ಬ ಮಗಳು ಒಬ್ಬ ಮಗನ ಪುಟ್ಟ ಸಂಸಾರ.

ಬೆನ್ನಲ್ಲಿ ಬಿದ್ದ ತಮ್ಮನಿಗೂ ಮಗಳಿಗೂ ಮೂರ್‍ನಾಲ್ಕು ವರ್ಷಗಳ ಅಂತರ.

ಮಗಳು ಬೆಳೆದು ದೊಡ್ಡೋಳಾದಾಗ ವಾಸ್ತವವಾಗಿ ಮದುವೆ ಯೋಚನೆ.

ಅದೇತಾನೇ ಇಂಜಿನಿಯರಿಂಗ್ ಮುಗಿಸಿ ಒಂದು ಕೆಲಸ ಹಿಡಿದು ತನ್ನ ಮನೆಗೆ
ಬಂದಿದ್ದ ತಮ್ಮ. ಅವರಿವರ ಮನೆಗೆ ಕೊಡೋ ಬದಲಿಗೆ ತಮ್ಮನಿಗೇ ಕೊಟ್ಟರೆ ಹೇಗೆಂ
ಆಸೆ.

ತಂದೆ ತಾಯಿಗೆ ಪತ್ರ ಬರೆದಳು.

ದೇವರ ಇಚ್ಛೆ ಇದ್ದ ಹಾಗೆ ಆಗ್ಲಿ ಅಂತ ಬರೆದರು ಅವರು. ಅನಿರೀಕ್ಷಿತವಾಗಿ ಬಂ
ಸಲಹೆ ನಾಗೇಶನಿಗೆ ಅಚ್ಚರಿ ಹುಟ್ಟಿಸಿತು.

ಸುಶೀಲ ಮಾವನನ್ನು ಒಳಗೊಳಗೇ ಮೋಹಿಸಿದಳು.

ಒಂದುದಿನ ಅವರಿಬ್ಬರೂ ಪತಿ ಪತ್ನಿಯರಾದರು.

ಬೇರೆ ಮನೆ ಮಾಡಿ ಸಂಸಾರ ಹೂಡಿಯಾಗಿತ್ತು. ಇದೆಲ್ಲ ಹೂವಿನ ಸರ ಎತ್ತಿದ ಹಾ
ನಡೆದುಹೋಯ್ತು.

ಇಷ್ಟು ವರ್ಷಗಳ ನಂತರ ಈಗ ದೊಡ್ಡ ಗಂಡಾಂತರವೊಂದು ಬಂದಿದೆ. ದೇವರೇ ಅ
ಹುಡುಗನಿಗೊಂದು ದಾರಿ ತೋರಿಸಬೇಕು ಅಂದುಕೊಂಡರು ಕಾಂತಮ್ಮ.

೩

ಆಫೀಸಿನಲ್ಲಿ ಕೆಲಸ ಎಂದಿನಂತೆ ಸಾಗಿತ್ತು. ಕೆಲವಾರು ಫೋನ್ ಸಂದೇಶಗಳು ಬಂದವ
ನಾಗೇಶನಿಗೆ.

ಯಾವುದೇ ಫೋನ್ ಬರಲಿ ವಿಷಯ ಏನಂತ ತಿಳಿದು ಚೀಟಿ ಬರೆದು ಕೊಡುತ್ತಿದ್ದಳು
ಜಯಂತಿ. ಅವಶ್ಯಕತೆ ಇದ್ದಾಗ ಮಾತ್ರ ನಾಗೇಶನೇ ಮತ್ತೆ ಫೋನ್ ಮಾಡ್ತಿದ್ದ. ಆದಿನ
ಗುರುಬಸಪ್ಪೋರು ಫೋನ್ ಮಾಡಿದ್ದರು. ವಿಷಯ ಏನಂತ ತಿಳಿಯಲು ನಾಗೇಶನೇ ಫೋನ್
ಮಾಡಿದ.

"ಏನ್ ಮಾವ ಫೋನ್ ಮಾಡಿದ್ರಂತೆ.''

"ಮಾಡಿದ್ದೆ, ಸಂಜೆ ಏನು ಕೆಲಸ ಇದೆ?''

ಪೆಚ್ಚಾಗಿ ನಕ್ಕ "ನಂಗೆಂಥಾ ಕೆಲಸ ಮಾವ. ಆಫೀಸು ಮನೆ, ಮನೆ ಆಫೀಸು ಇಷ್ಟೆ,
ಯಾಕೆ?''

"ಸಂಜೆ ಸ್ವಲ್ಪ ನಿಮ್ಮ ಮನೆ ಕಡೆ ಬರ್‍ತೀನಿ. ಅಲ್ಲಿಂದ ಒಂದು ರೌಂಡ್ ವಾಕಿಂಗ್

ಹೋಗೋಣ. ಹಾಗೇ ನನ್ನ ಸ್ನೇಹಿತ ಒಬ್ಬ ಇದ್ದಾನೆ. ಅವನನ್ನು ನೋಡ್ಕೊಂಡು ಬರೋಣ.''

"ವಾಕಿಂಗ್ ಬರ್ತೀನಿ, ಸ್ನೇಹಿತರ ಮನೆಗೆ ಬರೋಲ್ಲ.''

"ಹಾಗಲ್ಲ.''

"ಹೇಗಾದ್ರೂ ಇರ್ಲಿ. ನಾನು ಯಾರ ಮನೆಗೂ ಬರಲ್ಲ. ತೀರಾ ಆಪ್ತರು, ಆಪ್ತ ಸ್ನೇಹಿತರು ಬಿಟ್ರೆ ಇನ್ಯಾರೂ ನಮ್ಮ ಮನೆಗೆ ಬರೋದೂ ಬೇಡ.''

ಅಂದು ಮುಂದಿನ ಮಾತಿಗೆ ಅವಕಾಶ ಕೊಡದೇ ರಿಸೀವರ್ ಇಟ್ಟು ಬಂದ.

ವೈಯಕ್ತಿಕವಾಗಿ ನೋವುಂಡು ಹೀಗೆ ನಡ್ಕೊಳ್ತಿದ್ದನೇ ಹೊರತು ಕೆಲಸದ ವಿಚಾರದಲ್ಲಿ ಬಹಳ ಸರಿಯಾಗಿದ್ದ. ಸಿಗರೆಟ್ ಎಂದಿನಂತೆ ಸೇದ್ತಿದ್ದ. ಒಂದೆರಡು ಪೆಗ್ ಹಾಕಿಸಿ ನಾಗೇಶನ ಬಾಯಿ ಬಿಡಿಸೋಕೆ ಸ್ನೇಹಿತರು ಮಾಡಿದ ಯತ್ನ ವಿಫಲವಾಯ್ತು.

ಸಂಜೆ ಒಬ್ಬನೇ ಮನೆಗೆ ಬಂದ. ಬಾಗಿಲಿನಲ್ಲಿ ಪತ್ರವೊಂದು ಕಾಯ್ತಿತ್ತು. ಅಕ್ಷರಗಳನ್ನು ಗುರುತು ಹಿಡೀಲಿಲ್ಲ. ಒಳಗೆ ಬಂದು ಸೋಫಾದಲ್ಲಿ ಒರಗಿ ಕಾಗದ ಓದಿದ.

"ಹಲೋ ಬ್ರದರ್.

ಏನಾಶ್ಚರ್ಯ, ಅಷ್ಟ್ ಫೋನ್ ಮಾಡಿದೀನಿ ನಿಂಗೆ ಒಂದ್ಸಾರಿನಾದ್ರೂ ಸರಿಯಾಗಿ ಮಾತಾಡ್ದ್ಯ! ಏನಾಯ್ತು, ಲಕ್ಷ ರೂಪಾಯಿ ಹೊಂದಿಸಿದ್ಯಾ. ಅಲ್ಲ ನಂಬೋದೇ ಕಷ್ಟ ಅಲ್ಲ. ಇದು ನಂಬಲೇಬೇಕು. ಮೊದ್ಲು ಲಕ್ಷ ರೂಪಾಯಿ ಹೊಂದಿಸ್ಕೊ. ಆಮೇಲೆ ಮಿಕ್ಕಿದ್ದು, ಹಾ! ಇವತ್ತು ರಾತ್ರಿ ಹತ್ ಗಂಟೆಗೆ ಸರಿಯಾಗಿ ಫೋನ್ ಮಾಡ್ತೀನಿ. ಆಗ ನಾನೊಬ್ನೇ ಮಾತಾಡಲ್ಲ, ನಿನ್ ಹೆಂಡ್ತೀನೂ ಮಾತಾಡ್ತಾಳೆ. ಆಗ್ಲಾದ್ರೂ ನಂಬ್ಕೆ ಬರುತ್ತಲ್ಲ. ಫೋನಲ್ಲಿ ನಿನ್ ಹೆಂಡ್ತಿ ಜೊತೆ ಮಾತಾಡಿದ್ಮೇಲೆ ಮುಂದಿನ್ದು ಡಿಸೈಡ್ ಮಾಡೋಣ. ಸೋ ವೈಟ್ ಮಾಡು ರಾತ್ರಿ ಹತ್ತು ಗಂಟೆಗೆ.''

ಹಣೆಯ ತುಂಬ ಮೂಡಿದ್ದ ಬೆವರು ಹನಿಗಳನ್ನು ಒರೆಸಿಕೊಂಡ.

ಇದೇನಪ್ಪ ಇದು ಹೊಸ ವರಸೆ ತೆಗೆದಿದ್ದಾನೆ. ಫೋನಲ್ಲಿ ಸುಶೀಲ ಮಾತಾಡ್ತಾಳಂತೆ. ದೇವಲೋಕಕ್ಕೇನಾದ್ರೂ ಎಸ್. ಟಿ. ಡಿ. ಕನಕ್ಟ್ ಮಾಡ್ತಾನ್ಯೇ, ಯಾವೋಳ್ನೋ ಕರ್ಕೊಂಡ್ ಬಂದು ಮಾತಾಡಿಸ್ತಾನೆ ಅಷ್ಟೆ. ಆದ್ರೆ ತಾನು ಅವಳ ಧ್ವನಿ ಗುರುತು ಹಿಡೀಬಹುದಲ್ಲ.


ಆಜ್ಞಾಪಾಲನೆಯಲ್ಲಿ ಆನಂದ ಪಡೆಯ ಬಲ್ಲವನೇ, ಮುಂದೆ ನಾಯಕತ್ವವನ್ನೂ ಸರಿಯಾಗಿ ನಿರ್ವಹಿಸಬಲ್ಲ.

– ಸ್ವಾಮಿ ವಿವೇಕಾನಂದ

ಮಾನವನ ಮನಸ್ಸನ್ನು ಶಸ್ತ್ರಾಸ್ತ್ರಗಳಿಂದ ಗೆಲ್ಲಲಿಕ್ಕಾಗದು, ಆತ್ಮಬಲದಿಂದ ಮಾತ್ರ ಗೆಲ್ಲಲು ಸಾಧ್ಯ.

– ಕೌಟಿಲ್ಯ

ಸಂಗ್ರಹ : ಶಿವರಾಜ್ ಬಿ. ಜಂಗಳೆ



ಥತ್ತೇರಿ ಅಂದು ಸೋಫಾ ಗುದ್ದಿದ. ಅವನ ಮಾತೆಲ್ಲ ಕೇಳಿಸ್ಕೊಂಡು ಲಕ್ಷ ರೂಪಾಯಿ ಹೊಂದಿಸಿ ತಗೊಂಡು ಹೋಗಿ ಕೊಟ್ರೆ ಯಾವ್ದೋಳೋ ಗೂಬೇನ ತಳ್ಳಿ ಇವಳೇ ನಿನ್ ಹೆಂಡ್ತಿ ಕರ್ಕೊಂಡ್ ಹೋಗು ಅಂದ್ರೆ. ದುಡ್ಡಿನಾಸೆಗೆ ಏನು ಬೇಕಾದರೂ ಮಾಡಬಹುದು. ಇವನಿಗೆ ಇನ್ಯಾರೂ ಸಿಗಲಿಲ್ವೆ.

ಗಂಟೆ ನೋಡಿದ ಎಂಟೂವರೆ.

ಇನ್ನು ಒಂದೂವರೆ ಗಂಟೆ ಕಾಯಬೇಕಲ್ಲ ಅಂತ ಮನಸ್ಸು ಪರಿತಪಿಸಿತು.

ಇಷ್ಟ್ ದಿನ ಫೋನ್ ಯಾಕಾದ್ರೂ ಬರುತ್ತೋ ಅಂತ ಅನಿಸ್ತಿತ್ತು. ಇವತ್ತು ಯಾವಾಗ ಫೋನ್ ಬರುತ್ತೋ ಅನಿಸ್ತಿದೆ.

ಕುತೂಹಲದಿಂದ ಇದ್ದಿದ್ರಿಂದ ಹಸಿವೆಯ ಪರಿವೆ ಇರಲಿಲ್ಲ.

ಹತ್‌ಗಂಟೆ ಅಂದದ್ದು ಒಂಭತ್ತೂವರೆಗೇ ಫೋನ್ ಬಂತು.

ಆತುರದಿಂದ ರಿಸೀವರ್ ಎತ್ತಿ 'ಹಲೋ' ಅಂದ.

ಅತ್ತ ಕಡೆಯಿಂದ ಕಾಂತಮ್ಮ ಮಾತಾಡ್ತಿದ್ರು.

"ನಾಗೇಶ ಇವತ್ಯಾಕೋ ಊಟಕ್ಕೆ ಬರ್ಲಿಲ್ಲ, ಆಗ್ಲಿಂದ ಕಾಯ್ತಿದೀನಿ."

"ಇವತ್ತು ಆಫೀಸಿಂದ ಬರುವಾಗ ತಿಂಡಿ ತಿಂದ್ಕೊಂಡು ಬಂದೆ ಹಸಿವಿಲ್ಲ."

"ಒಂದು ತುತ್ತು ಮಜ್ಜಿಗೆ ಅನ್ನನಾದ್ರೂ ತಿನ್ನುವಂತೆ ಬಾರೋ ನಾನೂ ಊಟ ಮಾಡ್ದೆ ಕಾಯ್ತಿದೀನಿ."

"ಬೇಡಕ್ಕ ನೀನು ಊಟ ಮಾಡಿ ಮಲ್ಕೊ. ಆಮೇಲೆ ಇನ್ನೊಂದ್ ವಿಚಾರ ಗೊತ್ತಾ."

"ಏನದು, ಏನಪ್ಪ ಹೊಸ ವಿಚಾರ."

ತುಟಿ ಕಚ್ಚಿಕೊಂಡ, ಬಾಯಿ ಬಿಡಬಾರ್ದಿತ್ತು ಅನಿಸ್ತು.

"ಏನಿಲ್ಲಕ್ಕ, ನಾಳೆ ಬರ್ತಿನಲ್ಲ- ಆಗ ಹೇಳ್ತೀನಿ" ಅಂದ.

"ಪರವಾಗಿಲ್ಲ ಅದೇನು ಹೇಳೋ." ಒತ್ತಾಯಿಸಿದಳು ಕಾಂತಮ್ಮ.

"ಅಂಥಾ ಅರ್ಜೆಂಟೆಂದು ಅಲ್ಲ ನಾಳೆ ಹೇಳ್ತೀನಿ. ನಿದ್ದೆ ಬರ್ತಿದೆ ಗುಡ್‌ನೈಟ್" ಅಂದು ರಿಸೀವರ್ ಇಟ್ಟ.

ಯಾರಿಗೂ ಈಗಲೇ ಏನೂ ಹೇಳೋದು ಬೇಡಾಂತ ಅನಿಸಿತು.

ಹತ್ತುಗಂಟೆಗೆ ಸರಿಯಾಗಿ ಫೋನ್ ಬಂತು ಮತ್ತೆ ಉದ್ವೇಗದಿಂದ,

"ಹಲೋ, ನಾನು ನಾಗೇಶ್ ಮಾತಾಡ್ತಿರೋದು" ಅಂದ

"ನಾನಯ್ಯ ಚಂದ್ರು ಮಾತಾಡ್ತಿರೋದು."

ಚಂದ್ರು ಧ್ವನಿ ಗುರುತಿಸಿ ನಿರಾಸೆ ಹೊಂದಿದ.

"ಚಂದ್ರು ಒಂದು ಅರ್ಜೆಂಟ್ ಫೋನ್‌ಕಾಲ್ ಎಕ್ಸ್‌ಪೆಕ್ಟ್ ಮಾಡ್ತಿದೀನಿ. ಈಗ ಡಿಸ್‌ಕನೆಕ್ಟ್ ಮಾಡು ಆಮೇಲೆ ನಾನೇ ಮಾಡ್ತೀನಿ ಇಲ್ದಿದ್ರೆ ಬೆಳಿಗ್ಗೆ ಮಾತಾಡು" ಅಂದು ಚಂದ್ರು ಮಾತಿಗೆ ಕಾಯದೇ ರೀಸೀವರ್ ಕುಕ್ಕಿದ.

ಹತ್ತು ಗಂಟೆ ಹತ್ತು ನಿಮಿಷವಾಯ್ತು.

"ಛೇ, ಅವನು ಫೋನ್ ಟ್ರೈಮಾಡಿ ಎಂಗೇಜ್ ಆಗಿತ್ತೂಂತ ಸುಮ್ನಾದ್ನೋ ಏನೋ. ಈ ಚಂದ್ರೂಗೆ ಬೇರೆ ಟೈಮೇ ಇರ್ಲಿಲ್ವೆ ಫೋನು ಮಾಡೋಕೆ" ಅಂತ ಗೊಣಗಿಕೊಂಡ.

ಸೋಫಾ ಒರಗಿ ಕೂತು ಫೋನ್‌ಕಾಲ್ ನಿರೀಕ್ಷೆ ಮಾಡಿದ. ಹನ್ನೊಂದೂವರೆವರೆಗೂ ಮೂರು ಸಿಗರೆಟ್ ಸೇದಿ ಪುಸ್ತಕ ಓದ್ತಾ ಕಾಲ ಕಳೆದ.

ಅವನಿಗೆ ಯಾವಾಗ ನಿದ್ದೆ ಬಂತೋ ಅರಿವಿಲ್ಲ.

ಎಚ್ಚರವಾದಾಗ ಫೋನ್‌ಗಂಟೆ ಬಾರಿಸ್ತಿತ್ತು.

ಕಣ್ಣೊರೆಸಿಕೊಂಡು ದಡಕ್ಕನೆ ಎದ್ದು ರಿಸೀವರ್ ಎತ್ತಿ ಹಲೋ ಹಲೋ ಅಂದ.

ಯಾರೂ ಮಾತಾಡಲಿಲ್ಲ. ಆದರೆ ಬೆಲ್ ಬಾರಿಸುತ್ತಿತ್ತು. ಆಮೇಲೆ ಅನಿಸಿತು ಬೆಲ್ ಫೋನಿನದಲ್ಲ ಕಾಲಿಂಗ್‌ಬೆಲ್ ಅಂತ.

ಹೋಗಿ ಬಾಗಿಲು ತೆಗೆದ.

ಅರ್ಧ ಲೀಟರ್ ಹಾಲು ಹಿಡಿದು ನಿಂತಿದ್ದಳು ಮೀನಾಕ್ಷಿ.

ಪಾತ್ರೆ ತಂದು ಹಾಲು ಹಾಕಿಸಿಕೊಂಡ.

"ಅಯ್ನೋರ ನಿದ್ದೆ ಜಾಸ್ತೀಂತ ಕಾಣುತ್ತೆ" ಅಂದಳು.

ಮಾತನಾಡದೇ ಬಾಗಿಲು ಹಾಕಿಕೊಂಡು ಬಂದ.

ಎಂಥಾ ಕೆಲಸ ಆಯ್ತು, ಹಾಗೇ ನಿದ್ದೆ ಮಾಡ್ಬಿಟ್ನಲ್ಲ. ಫೋನ್ ರಿಂಗ್ ಆಯ್ತೋ ಏನೋ, ಮತ್ತೆ ಯಾವಾಗ ಫೋನ್ ಮಾಡ್ತಾನೋ. ತಕ್ಷಣ ನೆನಪಾಗಿ ಕಾಗದ ತೆಗೆದ ನೋಡಿದ. ಹೌದು ಅವನು ಬರೆದಿರೋ ಪ್ರಕಾರ ಹಿಂದಿನ ರಾತ್ರಿಯೇ ಫೋನ್ ಮಾಡಬೇಕಿತ್ತು.

ಅನಾಸಕ್ತನಂತೆ ಹಾಲು ಹಾಕಿಸಿಕೊಂಡಿದ್ದ ಪಾತ್ರೇನ ಸ್ಟೌ ಮೇಲಿಟ್ಟು ಸ್ವಿಚ್ ಹಾಕಿದ.

ಮುಖ ತೊಳ್ಕೊಂಡು ಬಂದು ಕಾಫಿ ಮಾಡಿದ.

ಕಿಲಕಿಲ ನಗುತ್ತ ಸುಶೀಲ ಹೇಳಿದ್ದಳು.

"ನಾನು ಮೂವತ್ತು ದಿನ ಕಾಫಿ ಮಾಡಿದ್ದಕ್ಕಿಂತ ನೀವು ಮೂರು ದಿನ ಕಾಫಿ ಮಾಡೋದೇ ರುಚಿ" ಅಂತ.

"ಈ ಥರ ಪೂಸಿ ಹೊಡೆದು ಕಾಫೀನ ದಿನಾ ನನ್ನ ಕೈಲೇ ಮಾಡ್ಸೋ ಯೋಚನೆ ಮಾಡ್ಬೇಡಮ್ಮ. ಹಾಗೆಲ್ಲ ಎಕ್ಸ್‌ಟ್ರಾ ಕೆಲಸ ಮಾಡಿಸ್ಕೊಂಡ್ರೆ ಕಾಂಪ್ಲಿಮೆಂಟ್ಸ್ ಕೊಡಬೇಕಾಗುತ್ತೆ."

"ಕೊಡೋಣ, ಕಾಂಪ್ಲಿಮೆಂಟ್ಸ್‌ಗೇನು ಬರ. ಆದ್ರೆ ಲೆಕ್ಕ ಹಾಕಿಟ್ಕೊಂಡಿರಿ ಒಟ್ಟಿಗೇ ಕೊಡ್ತೀನಿ" ಅಂದಿದ್ದಳು.


ಒಂದು ಲೋಟ ಕಾಫಿ ಹಿಡಿದು ಹಾಲ್‌ಗೆ ಬಂದು ಟೀಪಾಯ್ ಮೇಲೆ ಲೋಟ ಇಟ್ಟು ಸಿಗರೆಟ್ ಹಚ್ಚಿದ.

ಇನ್ನೊಂದ್ ಕಾಗದ ಬರೀತಾನೋ ಅಥವಾ ಹಾಗೇ ಫೋನ್ ಮಾಡ್ತಾನೋ. ಹೇಗೇಂತ

"ಏನ್ ಸಾರ್ ಕಳೆದ ಸಲ ನಾನು ಕೊಟ್ಟಿದ್ದ 'ಗಾಳಿಗೆ ಹಾರಿ ಹೋಗಿದೆ' ಎಂಬ ಕಾದಂಬರಿ ಪ್ರಕಟಿಸಿದಿರಾ?"

"ಕ್ಷಮಿಸಿ ಸಾರ್, ಅದು ಗಾಳಿಗೆ ಹಾರಿ ಹೋಗಿಬಿಟ್ಟಿದೆ."

— ಬಿ. ಜಿ. ಗಾಣಿಗೇರ



ಕಾಯೋದು ಅಂತ ಚಿಂತಿಸಿದ.

ಒಂಬತ್ತು ಗಂಟೆಗೆ ಚಂದ್ರು ಬಂದ.

"ನ್ಯಾರದ್ದಯ್ಯ ಫೋನು ಎಕ್ಸ್‌ಪೆಕ್ಟ್ ಮಾಡ್ತಿದ್ದೆ" ಅಂದ. ನಾಗೇಶ್ ಅವನಿಗೂ ಕಾಫಿ ಮಾಡಿ ತಂದುಕೊಟ್ಟು ಕೇಳಿದ.

"ಹೇಳು ಅದೇನು ಅಷ್ಟ್ ಹೊತ್ನಲ್ಲಿ ಫೋನ್ ಮಾಡಿದ್ಯಲ್ಲ."

"ಏನೋ ಮಾತಾಡೋಣಾಂತ ಫೋನ್ ಮಾಡಿದ್ದೆ. ಅಲ್ದೆ ನಿಂಗೆ ಊಟ ಮಾಡು, ನಿದ್ದೆ ಮಾಡು ಅಂತ ಜ್ಞಾಪಿಸೋ ಜವಾಬ್ದಾರಿ ನಂಗಿನ್ನು ಹೋಗಿಲ್ವಲ್ಲ" ಅಂದ ಚಂದ್ರು.

ಕಾಫಿ ಆದ ಮೇಲೆ "ನಾ ಬರ್ತೀನಯ್ಯ" ಅಂದು ಎದ್ದ ಚಂದ್ರು.

"ಏನು ಬಂದಿದ್ದು."

"ಇಲ್ಲಿ ಲಾಯರ ಮನೆಗೆ ಬಂದಿದ್ದೆ, ಹಾಗೇ ಒಂದು ಇಣುಕಿ ಹಾಕ್ಕೊಂಡು ಹೋಗೋಣಾಂತ ಬಂದೆ. ಆಫೀಸಿಗೆ ಬರ್ತೀಯಲ್ಲ."

"ಬರ್ತೀನಿ ಬರ್ತೀನಿ ಇನ್ನೇನು ಸ್ನಾನಕ್ಕೆ ಹೊರಟೆ." ಅಂದು ಉತ್ಸಾಹ ತೋರಿದ ನಾಗೇಶ.

ಆಫೀಸಿಗೆ ಹೋದೊಡನೆ ಜಯಂತಿಗೆ ಹೇಳಿದ.

"ಇವತ್ತು ನಂಗೆ ಯಾವ ಫೋನು ಬಂದ್ರು ಕೊಡಿ" ಅಂದ.

"ಇವತ್ತು ಮಾತ್ರಾನಾ ಅಥವಾ ಇನ್ಮೇಲಿಂದಾನಾ" ಅಂತ ಕೇಳಿದಳು ಜಯಂತಿ.

"ಇವತ್ತು ಕೊಡಿ, ನಾಳೆ ಬೇಕಾದ್ರೆ ಹೇಳ್ತೀನಿ" ಅಂದ.

ಅವತ್ತಿನ ನಾಗೇಶನ ಸ್ಥಿತೀನ ಯಾರಾದರೂ ಗಮನಿಸಬಹುದಿತ್ತು. ಫೋನ್ ರಿಂಗ್ ಆದಾಗೆಲ್ಲ ಜಯಂತಿ ಕಡೆ ನೋಡ್ತಿದ್ದ.ಒಂದೊಂದ್ಸಾರಿ ನಂಗಾ ಅಂತ ಕೇಳ್ತಿದ್ದ. ಬಂದು ಗಂಟೆಗೊಂದ್ಸಾರಿ ನಂಗ್ಯಾವ್ದೂ ಫೋನ್ ಬರ್ಲಿಲ್ವ ಅಂತ ಕೇಳ್ತಿದ್ದೆ. ಇಲ್ಲ ಸಾರ್ ಬಂದ್ರೆ ಕರೀತೀನಿ ಅಂತ ಜಯಂತಿ ಹೇಳಿ ಹೇಳಿ ಸುಸ್ತಾದ್ಲು. ಅಷ್ಟೇ ಅಲ್ದೆ ಜಯಂತಿ ಯಾರ ಬಳೀನೋ "ನೋಡಿ ಸಾರ್, ಇಷ್ಟ್ ದಿವಸ ಫೋನ್ ಕೊಡ್ಬೇಡಿ ಅಂತಿದ್ರು, ಇವತ್ತು ಕೊಡಿ ಅಂತಾರೆ. ಯಾರಿಗೆ ಫೋನ್ ಬಂದ್ರೂ ನಂಗಾ ನಂಗಾ ಅಂತ ಕೇಳ್ತಿದ್ದಾರೆ" ಅಂತ ಅವಳ ಕಷ್ಟ ಹೇಳ್ಕೊಂಡ್ಳು.

ಮಧ್ಯಾಹ್ನ ಊಟಕ್ಕೂ ಹೋಗ್ಲಿಲ್ಲ ನಾಗೇಶ. ತಿರುಗಿ ಅವನು ಫೋನ್ ಮಾಡ್ತಾನೋ ಇಲ್ವೋ ಅನಿಸಿತು. ಫೋನ್‌ನಲ್ಲಿ ಹೆಂಡ್ತಿ ಮಾತಾಡ್ತಾಳೋ ಅಥವಾ ಇನ್ಯಾರು ಮಾತಾಡ್ತಾರೋ ಕೇಳಬಹುದಿತ್ತಲ್ಲ. ಬಂದಿದ್ದ ಒಂದು ಅವಕಾಶ ತಪ್ಪೇ ಹೋಯ್ತೋ ಏನೋ ಗೊತ್ತಾಗ್ಲಿಲ್ವಲ್ಲ ಅಂತ ಪರಿತಪಿಸಿದ.

ಸಂಜೆ ಮನೆಗೆ ಹೊರಡುವಾಗ ಬಹಳ ಬೇಸರದಿಂದಿದ್ದ. ಜಯಂತಿಗೆ "ಏನ್ರೀ ಫೋನ್ ಕೊಡ್ಲೇ ಇಲ್ವಲ್ಲ ನೀವು" ಅಂದ. ಅದಕ್ಕೆ ಅವಳು "ನಾನೇನ್ಮಾಡ್ಲಿ ಸಾರ್. ಯಾವ್ದೂ ಫೋನ್ ಬರ್ಲೇ ಇಲ್ವಲ್ಲ" ಅಂದು ಕೊರಳು ಕೊಂಕಿಸಿದಳು.

ಚಂದ್ರು ಅವನ ಜೊತೇಲೇ ಹೊರಟ.

"ಏನು ಪ್ರೋಗ್ರಾಂ ಚಂದ್ರು."

"ಏನಿಲ್ಲ, ಯಾಕೆ."

"ವಿಸ್ಕಿ ಕುಡಿಯೋಣ ಅನ್ಸಿದೆ. ಹೀಗೇ ಮನೆಗೆ ಹೋಗೋಣ ಬಾ."

"ಒಂದ್ಕೆಲ್ಸ ಮಾಡ್ತಾ."

"ಏನು?''

"ನಾನು ಮನೆಗೆ ಹೋಗಿ ಬರ್ತೀನಿ. ಮನ್ಲಿ ಹೇಳಿದ ಹಾಗೂ ಆಗುತ್ತೆ. ಮತ್ತೆ ನನ್ನ ಫ್ರೆಂಡ್‌ಗೆ ಏಳು ಗಂಟೆಗೆ ಬರ್ತೀನೀಂದಿದ್ದೆ. ಅವನನ್ನು ನೋಡ್ಕೊಂಡು ನಿಮ್ಮನೆಗೆ ಸರಿಯಾಗಿ ಎಂಟಕ್ಕೆ ಬರ್ತೀನಿ, ನಿಧಾನವಾಗಿ ತಗೊಳೋಣಂತೆ'' ಅಂದ ಚಂದ್ರು.

"ಹಾಗೇ ಮಾಡು'' ಅಂದು ಮನೆಯತ್ತ ಹೊರಟ.

ಇವತ್ತು ಏನಾದರೂ ಪೋಸ್ಟ್ ಬಂದಿದೆಯೇ ಅಂತ ಮನೆ ಬಾಗಿಲ ಬಳಿ ಹುಡುಕಿದ ಯಾವ ಪೋಸ್ಟು ಕಾಣಲಿಲ್ಲ.

ಪಕ್ಕದ ಮನೆಗೆ ಹೋಗಿ "ನನ್ದಾ ಯ್ವಾದ್ರೂ ಪೋಸ್ಟ್ ನಿಮ್ಮನೆಗೆ ಹಾಕಿದ್ದಾರಾ'' ಅಂತ ಕೇಳಿ ಇಲ್ಲ ಅನಿಸ್ಕೊಂಡು ಬಂದ.

ಎದುರು ಮನೇಲಿ ಕೇಳಿದಾಗ,

"ನಿಮ್ಮನೆ ಲೆಟರು ನಮ್ಮನ್ಲಿ! ನಿಮಗೇನಾದರೂ...'' ಅಂತ ಅಣಕವಾಡಿದರು ಅವರು.

"ಹಾಗಲ್ಲ, ಒಂದೊಂದ್ಸಾರಿ ಈ ಪೋಸ್ಟ್ ಮ್ಯಾನು...'' ಅಂತ ರಾಗ ಎಳೆದು ಮನೆಗೆ ಬಂದ.

ಒಂದು ದೊಡ್ಡ ಬಾಟಲು ವಿಸ್ಕಿ ಇತ್ತು. ಸುಶೀಲ ಕೂಡ ಇದಕ್ಕೇನು ಅಡಚಣೆಯುಂಟು ಮಾಡ್ತಿರ್ಲಿಲ್ಲ. ಫ್ರಿಜರ್ ತೆಗೆದು ಐಸ್‌ಟ್ರೇಗೆ ನೀರು ಹಾಕಿಟ್ಟು ಎರಡು ಗ್ಲಾಸು ಬೆರೆಸಿಟ್ಟ. ಅಂಗಡಿಗೆ ಹೋಗಿ ಒಂದಿಷ್ಟು ತಿಂಡಿ ತಂದಿಟ್ಟ.

ಇಷ್ಟೆಲ್ಲ ಮಾಡೋ ಹೊತ್ತಿಗೆ ಏಳೂ ಮುಕ್ಕಾಲಾಯಿತು. ಬಾಲ್ಕನೀಲಿ ಎರಡು ಕುರ್ಚಿ ಇಟ್ಟು ಟೇಬಲ್ ರೆಡಿ ಮಾಡಿದ.

ವಿಪರೀತ ಬೇಸರವಾಗಿದ್ರಿಂಧ ಮೊದಲು ಒಂದು ಪೆಗ್ ಹಾಕಿಕೊಂಡು ಕುಡಿದ.

ಒಂದು ಸಿಗರೆಟ್ ಸೇದಿ ಮುಗಿಸೋದ್ರಲ್ಲಿ ಚಂದ್ರು ಬಂದ.

"ಬಾರಯ್ಯ ಸರಿಯಾಗಿ ಎಂಟು ಗಂಟೆಗೆ ಬಂದೆ'' ಅಂದ.

"ಹೇಳಿದ್ಮೇಲೆ ತಪ್ಪಿಸ್ಕೊಳೋಕಾಗುತ್ತೇನಯ್ಯ'' ಅಂದು ಚಂದ್ರು ಬ್ಯಾಗಿಂದ ಒಂದು

ಅರ್ಧ ಬಾಟಲ್ ವಿಸ್ಕಿ ತೆಗೆದಿಟ್ಟ.

"ಇದ್ಯಾಕಯ್ಯ ತಂದೆ, ಮನ್ಲೇ ಇತ್ತಲ್ಲ."

"ಪರವಾಗಿಲ್ಲ ಬಿಡು" ಎಂದು ಎರಡು ಗ್ಲಾಸ್‌ಗೂ ಒಂದೊಂದು ಪೆಗ್ ಹಾಕಿ ಎರಡೆರಡು ಆಸ್ ತುಂಡು ಹಾಕಿದ.

"ಈಗ್ಲೇ ಟೇಸ್ಟ್ ನೋಡಿರೋ ಹಾಗಿದೆ" ಅಂದ ಚಂದ್ರು.

"ಹೌದೋ, ವಿಪರೀತ ಬೇಜಾರಾಗ್ತಿತ್ತು. ನೀನು ಬರೋ ಮುಂಚೆ ಒಂದು ಪೆಗ್ ಹಾಕ್ದೆ."

"ಪಾಪ ನಿನ್ನ ವೈಫ್ ಇದ್ದಾಗ ಬಜ್ಜಿ, ಪಕೋಡ ಎಲ್ಲ ಮಾಡ್ಕೊಡ್ತಿದ್ರು. ತುಂಬ ಒಳ್ಳೇ ಹೆಂಗಸರು ಕಣಯ್ಯ" ಅಂದು ಗ್ಲಾಸ್ ಎತ್ತಿ 'ಚಿಯರ್ಸ್' ಅಂದ ಚಂದ್ರು.

"ಚಿಯರ್ಸ್" ಅಂದವನು ಒಂದೇ ಗುಟುಕಿಗೆ ಅಷ್ಟನ್ನೂ ಕುಡಿದ ನಾಗೇಶ.

"ಯಾಕೋ ಅಷ್ಟು ಫಾಸ್ಟು, ಬೀ ಸ್ಲೋ, ನಾನು ತುಂಬ ಫ್ರೀಯಾಗಿದೀನಿ ಇವತ್ತು" ಅಂದ.

"ಪರವಾಗಿಲ್ಲ ಬಿಡು" ಅಂದು ಇನ್ನೊಂದು ಪೆಗ್ ಏರಿಸಿದ.

ಇತ್ತೀಚೆಗೆ ತನ್ನ ಮನೋಭಾವ ಹೇಗಿದೆ. ಜನ ಹೇಗೆ ಮಾತಾಡ್ಕೋತಾರೆ ಮುಂತಾದವುಗಳ ಬಗ್ಗೆ ಮಾತಾಡಿದ. ನಾನು ಯಾರಿಗೂ ಕೇರ್ ಮಾಡಲ್ಲ. ನಾನು ಯಾರೂಂತ ಒಂದಲ್ಲ ಒಂದಿನ ತೋರಿಸ್ತೀನಿ ಅಂತ ಏನೇನೋ ಮಾತಾಡ್ತೋನು ಇದ್ದಕ್ಕಿದ್ದಂತೆ "ಚಂದ್ರು ಜಯಂತಿ ಹೇಗೆ" ಅಂತ ಕೇಳಿದ.

"ಹೇಗೇಂದ್ರೆ."

"ಅಂದ್ರೆ ಹೇಗೇಂತ. ಹೇಗೇಂದ್ರೆ ಅವಳು ಹೇಗಾದ್ರೂನೂ ಉಂಟಾ ಅಥವಾ..."

ಕೊನೇ ಪಫ್ ಎಳೆದು ಹೊಗೆಯುಗುಳಿ ತುಂಡನ್ನು ಟ್ರೇಯಲ್ಲಿ ಹೊಸಕಿ,

"ಏನಪ್ಪ ನಾನು ಅವಳನ್ನು ಆ ದೃಷ್ಟೀಲಿ ನೋಡಿಲ್ಲ. ಷಿ ಈಸ್ ಎ ಗುಡ್ ಗರ್ಲ್. ನಾಟ್ ಓನ್ಲಿ ದಟ್ ಬಟ್ ಆಲ್ಸೋ ಬ್ಯೂಟಿಫುಲ್" ಅಂದ ಚಂದ್ರು.

"ಅವಳನ್ನು ನೋಡಿದ್ರೆ ಹೇಳಬಹುದು ಬ್ಯೂಟಿಫುಲ್ ಅಂತ. ಸುಮ್ನೆ ಕೇಳ್ದೆ ಅಷ್ಟೆ" ಅಂದ ನಾಗೇಶ ಸಿಗರೆಟ್ ಹಚ್ಚಿದ.

ಮಾತಾಡುತ್ತ ಎರಡು ಬಾಟಲೂ ಖಾಲಿಯಾದಾಗ ಸಾಕಷ್ಟು ತಗೊಂಡಿದಾನೆ ಅಂತ ಖಾತರಿಯಾಯ್ತು.

ನಾಗೇಶ ತನ್ನ ವಾಚ್ ನೋಡಿಕೊಂಡ. ಕಣ್ಣು ಹೊಸಕಿಕೊಂಡ,ಆದರೂ ಕಾಣಲಿಲ್ಲ.

"ಚಂದ್ರ ಟೈಮೆಷ್ಟೋ" ಅಂತ ಕೇಳಿದ.

"ಹತ್ ಗಂಟೆಗೆ ಐದು ನಿಮಿಷ ಇದೆ" ಅಂತ ಚಂದ್ರು ಹೇಳುತ್ತಿದ್ದಂತೆ ಗಾಬರಿಯಿಂದ ಎದ್ದ. ಎದ್ದೋನು ಬಿದ್ದ, ಬಿದ್ದೋನು ಎದ್ದ, ತೂರಾಡಿಕೊಂಡು ಮನೆಯೊಳಕ್ಕೆ ಬಂದ.

ಹಿಂಬಾಲಿಸಿ ಬಂದ ಚಂದ್ರು.

"ಯಾಕಷ್ಟು ಅರ್ಜಂಟು, ನಿಧಾನಕ್ಕೆ ಬರ್‍ಬಾರ್ದೇ" ಅಂದ.

"ಜಯಂತಿ ಫೋನ್ ಮಾಡ್ತಾಳೆ ಗಲಾಟೆ ಮಾಡ್ಬೇಡ" ಅಂದ.

ಚಂದ್ರು ಬೆದರಿದ. ಮೊದಲೇ ನಾಗೇಶನ ಸ್ಥಿತಿ ಹಾಗಿತ್ತು. ಈಗ ವಿಸ್ಕಿ ಬೇರೆ ಕುಡಿದ್ದಾನೆ. ಕಪಿಗೆ ಹೆಂಡ ಕುಡಿಸ್ದಂಗೇನಾದ್ರೂ ಆಯ್ತೇ ಅಂತ ಯೋಚಿಸಿ,

"ಅಲ್ಲ ಕಣಯ್ಯ" ಅನುತ್ತಿದ್ದಂತೆ,

"ಬದ್ಮಾಷ್, ಗಲಾಟೆ ಮಾಡ್ಬೇಡಾಂತ ಹೇಳಿದೀನಿ ಮತ್ತೆ ಮಾತಾಡ್ತೀಯ. ಇನ್ನೇನಾದ್ರೂ ಬಾಯಿ ತೆಗೆದ್ರೆ ಸಾಯಿಸಿಬಿಡ್ತೀನಿ. ಅದರ್‌ವೈಸ್ ಗೆಟ್ ಲಾಸ್ಟ್" ಅಂತ ಅರಚಿದ.

ನಾಗೇಶ ಯಾವತ್ತೂ ಇಷ್ಟು ಆವೇಶದಿಂದ ಮಾತಾಡಿರ್ಲಿಲ್ಲ. ಚಂದ್ರು ಬಾಯಿ ಮುಚ್ಕೊಂಡ. ಹತ್ತು ಗಂಟೆಗೆ ಸರಿಯಾಗಿ ಫೋನ್ ಶಬ್ದ ಮಾಡಿತು.

ಚಂದ್ರು ನಾಗೇಶನ ಮುಖ ನೋಡಿದ. ನಾಗೇಶ, ಚಂದ್ರು ಮುಖ ನೋಡಿದ.

ನಾಗೇಶ ರಿಸೀವರ್ ಎತ್ತಿ 'ಹಲೋ' ಅಂದ.

ಚಂದ್ರು ತಲೆಮೇಲೆ ಕೈ ಹೊತ್ತ.

"ಹೇಳಿ ಹೇಳಿ ನಾನೇ ನಾಗೇಶ ಮಾತಾಡೋದು. ಹೌದು ನನ್ನೆ ಯಾಕೆ ಫೋನ್ ಮಾಡ್ಲಿಲ್ಲ."

"ನಿಮ್ಮನ್ನು ಸ್ವಲ್ಪ ಕಾಯ್ಸೋಣ ಅನಿಸಿತ್ತು. ನಿಮ್ಮ ಹೆಂಡ್ತಿಗೆ ಯಾವ ಅಪಾಯನೂ ಆಗಿಲ್ಲ. ಲಕ್ಷ ರೆಡಿ ಮಾಡ್ಕೊಂಡ್ರೆ ಈ ಕೂಡ್ಲೇ ಅವಳನ್ನು ನಿಮ್ಮ ಬಳಿಗೆ ಕಳಿಸ್ತೀನಿ."

ಅತ್ತ ಕಡೆಯಿಂದ ಮಾತು ಕೇಳಿಸ್ತಿತ್ತು.

"ಅದ್ಸರಿ ನನ್ ಹೆಂಡ್ತಿ ಹತ್ರ ಮಾತಾಡಬಹುದು ಅಂದಿದ್ರಿ."

"ತಗೋಳಿ ಮಾತಾಡಿ."

"ಹಲೋ ಹಲೋ ಯಾರು ಮಾತಾಡೋದು."

"ನಾನೇರೀ ಸುಶೀಲ ಮಾತಾಡೋದು. ನನ್ನನ್ನು ಇವರು ಕೂಡಿ ಹಾಕಿದ್ದಾರೆ. ಬೇಗ ಲಕ್ಷ ರೂಪಾಯಿ ತಗೊಂಡು ಬಂದು ನನ್ನನ್ನು ಬಿಡಿಸ್ಕೊಂಡು ಹೋಗಿ, ಪ್ಲೀಸ್ ಬೇಗ ಬನ್ನಿ."

"ಅಲ್ಲ ನೀನು ಸತ್ ಹೋದ್ಯಲ್ಲ. ಅಲ್ಲಿಗೆ ಹೇಗೆ ಹೋದೆ, ಯಾಕೆ ಹೋದೆ."

"ನಾನು ಹೋಗ್ಲಿಲ್ಲಾರೀ ಬೇಗ ಬನ್ನಿ. ನಿಮ್ಮನ್ನು, ಅಪ್ಪ, ಅಮ್ಮನ್ನು ನೋಡ್ಬೇಕು ಅನ್ಸಿದೆ."

"ಈಗ಼್್ಲೇ ಬಂದ್ ಬಿಡ್ತೀನಿ. ಅದ್ಸರಿ ನೀನು ಎಲ್ಲಿದೀಯ."

"ನಾನು...." ಲೈನ್ ಕಟ್ ಆಯ್ತು.

ನಾಗೇಶ ಗಾಬರಿಯಿಂದ "ಹಲೋ ಹಲೋ" ಅಂದ.

"ಕೇಳಿಸ್ಕೊಂಡ್ಯಾ ನಿನ್ ಹೆಂಡ್ತಿ ಧ್ವನೀನ, ಬೇಗ ಬಂದ್ಯೋ ಸರಿ ಇಲ್ದಿದ್ರೆ." ಮತ್ತೆ ಲೈನ್ ಕಟ್ ಆಯ್ತು.

ನಿರಾಸೆಯಿಂದ ಬಂದು ಚಂದ್ರುವಿನ ಪಕ್ಕ ಕೂತ ನಾಗೇಶ.

ವ್ಯತ್ಯಾಸ

ಅವಳು ದೃಢಕಾಯಳಾಗಿದ್ದಾಗ
ಅವನು ನರಪೇತಲ
ಅವಳು ಪಡುವಲಕಾಯಾದಾಗ
ಅವನು ಕುಂಬಳಕಾಯಿ!

— ದೊಡ್ಡರಂಗೇಗೌಡ



"ನಾನು ಹೇಳಿದ್ರೆ ಯಾರೂ ನಂಬೋಲ್ಲ. ಈಗ್ತಾನೇ ನನ್ ಹೆಂಡ್ತಿ ಜೊತೆ ಮಾತಾಡ್ದೆ. ಏನಾದ್ರೂ ಮಾಡಿ ಲಕ್ಷ ಹೊಂದಿಸ್ಬೇಕಲ್ಲ. ಏನಯ್ಯ ಮಾಡೋದು. ನೀನೇನಾದ್ರೂ ಹೆಲ್ಪ್ ಮಾಡ್ತೀಯ. ನಾಳೆ ಬಾಸ್‌ನ ಅಡ್ವಾನ್ಸ್ ಕೇಳ್ಬೇಕು'' ಅಂದೂ ಇದೂ ಅಂತ ಏನೇನೋ ಮಾತಾಡ್ದ. ಕುತೂಹಲದಿಂದ, ಗಾಬರಿಯಿಂದ ನಾಗೇಶನನ್ನೇ ನೋಡ್ತಾ ಕೂತಿದ್ದ ಚಂದ್ರು. ಏನೇನೋ ಮಾತಾಡಿದ, ಕಿರುಚಿದ. ಇಷ್ಟೆಲ್ಲ ಮುಗಿಯೋ ಹೊತ್ತಿಗೆ ಹನ್ನೆರಡು ದಾಟಿತ್ತು.

ಚಂದ್ರು ನಾಗೇಶನ ಹತ್ತಿರ ಹೋಗಿ ಭುಜ ಹಿಡಿದು,

"ನಾ ಬರ್ಲೇನಯ್ಯ'' ಅಂದ.

"ಹೊರಡು ನಿಂಗೆ ಹೊತ್ತಾಯ್ತು, ನಾನಿನ್ನು ಲಕ್ಷ ಹೊಂದಿಸೋ ವಿಚಾರ ಯೋಚ್ನೆ ಮಾಡ್ಬೇಕು'' ಅಂದ.

ನಿಟ್ಟುಸಿರುಬಿಟ್ಟು ಹೊರಟ ಚಂದ್ರು.

*   *   *   *   *

ಬಿಪಿನ್‌ದಾಸ್ ಒಂದು ಕಾಂಟ್ರಾಕ್ಟ್‌ನ ಫೈನಲೈಸ್ ಮಾಡೋದ್ರಲ್ಲಿ ಮಗ್ನರಾಗಿದ್ದರು.

"ನಮಸ್ಕಾರ ಸಾರ್'' ಅನ್ನುತ್ತ ಒಳಿ ಪ್ರವೇಶಿಸಿದ ನಾಗೇಶ.

"ಬನ್ನಿ ನಾಗೇಶ.''

"ಒಂದು ಸಹಾಯ ಆಗ್ಬೇಕಿತ್ತು ಸಾರ್.''

"ಸಹಾಯ ಏನು ಹಾಗೆ ಕೇಳ್ತಿದ್ದೀರ ಕೂತ್ಕೊಳಿ.''

"ನಂಗೆ ಸ್ವಲ್ಪ ಅಡ್ವಾನ್ಸ್ ಬೇಕಿತ್ತು.''

"ಎಷ್ಟು?''

"ಎಷ್ಟೂಂದ್ರೆ ಏನ್ ಹೇಳ್ತಿ ಸಾರ್, ನಾನು ಒಟ್ಟು ಒಂದು ಲಕ್ಷ ರೂಪಾಯಿ ಹೊಂದಿಸ್ಬೇಕು. ನೀವು ಎಷ್ಟು ಸ್ಯಾಂಕ್ಷನ್ ಮಾಡಿದ್ರೂ ನಂಗೆ ಅನುಕೂಲವೇ.''

"ಲಕ್ಷ ರೂಪಾಯಿ ಹೊಂದಿಸ್ಬೇಕೇ, ಏಕೆ?''

"ಅದೇ ಸಾರ್, ನನ್ ಹೆಂಡ್ತೀನ ಬಿಡಿಸ್ಕೊಂಡು ಬರ್ಬೇಕಲ್ಲ'' ಅಂತ ನಾಗೇಶ ಹೇಳುತ್ತಿದ್ದಂತೆ 'ಬಿಟ್ಟ ಕಣ್ಣು ಬಿಟ್ಟಂತೆ, ಬಿಟ್ಟ ಬಾಯಿ ಬಿಟ್ಟಂತೆ' ಅನ್ನುವಂತೆ ಬಿಪಿನ್‌ದಾಸ್ ನಾಗೇಶನನ್ನೇ ನೋಡಿ ಕೈಲಿ ಹಿಡಿದಿದ್ದ ಪೆನ್ನು ಮೇಜಿನ ಮೇಲೆ ಹಾಕಿದರು.

"ಏನ್ ಹೇಳ್ತಿದೀರ ನೀವು.''

"ಅದೇ ಸಾರ್ ಯಾವೋನೋ ಒಬ್ಬ ಫೋನ್ ಮಾಡ್ತಿದ್ದ ಅಂತ ಹೇಳಿದ್ನಲ್ಲ. ಅವನು ನೆನ್ನೆ ರಾತ್ರೆ ಫೋನ್ ಮಾಡಿದ್ದ. ಸಾರ್ ನನ್ ಹೆಂಡ್ತಿನೂ ಮಾತಾಡಿದ್ಲು, ಪಾಪ ಅವಳನ್ನು ಆದಷ್ಟು ಬೇಗ ಬಿಡಿಸ್ಕೊಂಡ್ ಬರಬೇಕು.''

"ಅಂದ್ರೆ ನಿಮ್ಮ ವೈಫು..''

"ಸತ್ತಿಲ್ಲ ಸಾರ್, ಅವಳ ಧ್ವನಿ ಗುರುತಿಸ್ದೆ ನಾನು.''

"ಅಂದ್ರೆ ಅವತ್ತು ಅಪಘಾತದಲ್ಲಿ ಸತ್ತಿದ್ದು, ಸಂಸ್ಕಾರ ಮಾಡಿದ್ದು?''

"ಒಂದೂ ಅರ್ಥ ಆಗ್ತಿಲ್ಲ ಸಾರ್, ಅದಕ್ಕೆ ಸಾರ್ ಆದಷ್ಟು ಬೇಗ ಹಣ ಹೊಂದಿಸ್ಕೊಂಡ್ ಹೋಗ್ಬೇಕು.''

ಏನು ಮಾತಾಡ್ಬೇಕೋ ಅರಿವಾಗದೇ ಬಿಪಿನ್‌ದಾಸ್ ಹಾಗೇ ಕೂತಿದ್ದು ನಂತರ

ಹೇಳಿದರು.

"ಆಯ್ತು ನಾಗೇಶ, ಸ್ವಲ್ಪ ಯೋಚ್ನೆ ಮಾಡೋಕೆ ಅವಕಾಶ ಕೊಡಿ. ಈಗ ನೀವು ಹೋಗಿ."

ಖುಷಿಯಿಂದ ಹೊರಗೆ ಬಂದ ನಾಗೇಶ ಚಂದ್ರು ಬಳಿ ಹೋದ.

"ಬಾಸ್‌ಗೆ ಹೇಳಿದೀನಿ, ಏರ್ಪಾಡು ಮಾಡ್ತೀನೀಂತ ಹೇಳಿದ್ದಾರೆ. ಅಂದ್ಹಾಗೆ ಚಂದ್ರು ಅವನು ಮತ್ತೆ ೦ಯಾವತ್ತು ಫೋನ್ ಮಾಡ್ತಿನೀಂತ ಹೇಳಿದ್ದಾನಾ."

"ನಂಗೇನಯ್ಯ ಗೊತ್ತು, ಫೋನ್‌ನಲ್ಲಿ ಮಾತಾಡಿದ್ದು ನೀನು, ನಿಂಗೇ ಜ್ಞಾಪ್ಕ ಇರ್ಬೇಕು."

"ನೆನ್ನೆ ಸ್ವಲ್ಪ ಕುಡಿದಿದ್ದು ಜಾಸ್ತಿಯಾಗಿತ್ತಲ್ವೆ."

"ಅಂದ್ಮೇಲೆ ಫೋನ್‌ನಲ್ಲಿ ಮಾತಾಡಿದ್ದು ನಿನ್ ಹೆಂಡ್ತಿನೇಂತ ಹೇಗೆ ಹೇಳ್ತೀಯ."

"ಏನಯ್ಯ ಎರಡು ವರ್ಷ ಅವಳ ಜೊತೆ ಸಂಸಾರ ಮಾಡಿದೀನಿ. ಅವಳ ಧ್ವನಿ ಗುರುತು ಹಿಡಿಯೋಕೆ ಆಗಲ್ವೆ. ಅದಿರ್ಲಿ ನೀನು ಸ್ವಲ್ಪ ದುಡ್ಡಿಗೆ ಏರ್ಪಾಡು ಮಾಡಯ್ಯ."

ಇವರು ಮಾತಾಡುತ್ತಿದ್ದಂತೆ ಜವಾನ ಬಂದು ಚಂದ್ರುಗೆ "ಸಾಹೇಬ್ರು ಕರೀತಿದ್ದಾರೆ" ಅಂದ.

ಚಂದ್ರು ಸಾಹೇಬರ ಕೋಣೆಗೆ ಹೋದಂತೆ ಇಡೀ ಆಫೀಸಿನ ದೃಷ್ಟಿ ನಾಗೇಶನ ಮೇಲೆ ಬಿದ್ದಿತ್ತು.

"ರೀ ಚಂದ್ರು ಏನ್ರೀ ಅದು ನಿಮ್ಮ ಸ್ನೇಹಿತನದ್ದು."

"ನಂಗೂ ಗೊತ್ತಾಗ್ತಿಲ್ಲ ಸಾರ್, ನೆನ್ನೆ ರಾತ್ರಿ ಹತ್ತುಗಂಟೆಗೆ ನಾನೂ ಅವನ ಮನೇಲೇ

ಏನೂ ಅರಿಯದವನನ್ನು ಸುಲಭವಾಗಿ ಮೆಚ್ಚಿಸಬಹುದು. ಹೆಚ್ಚು ತಿಳಿದವನನ್ನು ಇನ್ನೂ ಸುಲಭವಾಗಿ ಮೆಚ್ಚಿಸಬಹುದು. ಅಲ್ಪ ಜ್ಞಾನದಿಂದ ಗರ್ವಿತನಾದವನನ್ನು ಬ್ರಹ್ಮನೂ ಮೆಚ್ಚಿಸಲಾರ.

— ಭರ್ತೃಹರಿ

ಯೋಚನೆ ಮಾಡುತ್ತಿರುವಾಗ ಅವಕಾಶ ನಮ್ಮ ಕೈ ತಪ್ಪಿಹೋಗಬಹುದು.

— ಪಿ. ಸೈರಸ್


ನಿಜವಾದ ದೊಡ್ಡ ಮನುಷ್ಯನಾರೂ 'ಅವಕಾಶ ಇಲ್ಲ' ಎಂದು ದೂರುವುದಿಲ್ಲ.

— ಎಮರ್‌ಸನ್

ಒಂದು ಬಾಗಿಲು ಮುಚ್ಚಿದೆ, ಆದರೆ ಇನ್ನೊಂದು ಪೂರ್ತಿ ತೆರೆದಿದೆ.

— ರಷ್ಯಾದ ಗಾದೆ

ಸಂಗ್ರಹ : ಉ. ಕ. ರಾ.



ಇದ್ದ. ಫೋನ್ ಬಂದಿದ್ದು ಸರಿ, ಅವನು ಮಾತಾಡ್ದ. ನಂತರ ಹೆಂಡ್ತಿ ಜೊತೆ ಮಾತಾಡ್ದೆ ಅಂದ."

"ಅವಾಗ ಚಂದ್ರು ಸ್ಥಿತಿ ಹೇಗಿತ್ತು."

"ಏಳೆಂಟು ಪೆಗ್ ಹಾಕಿದ್ದಾಂತ ಕಾಣುತ್ತೆ."

"ಸರಿ ಬಿಡಿ, ಹಿ ವಾಸ್ ನಾಟ್ ಇನ್ ಹಿಸ್ ಸೆನ್ಸಸ್ ಅಂತ ಕಾಣುತ್ತೆ. ಅಲ್ಲಪ್ಪ ಇವನು ಹೀಗೇ ಮಾಡ್ಕೊಂಡು ಹೋದ್ರೆ ಎಲ್ಲಿಗೆ ಕೊನೆ ಮುಟ್ಟುತ್ತೆ. ನಿಮಗೆ ಅವರ ಅಕ್ಕ ಭಾವ ಗೊತ್ತಿದ್ರೆ ಒಬ್ಬ ಸೈಕ್ಯಾಟ್ರಿಸ್ಟ್‌ಗಾದ್ರೂ ತೋರ್ಸೋಕ್ಕೆ ಹೇಳೀಪ್ಪ.

"ಈ ತರ ಕೇಸ್ ಇದೊಂದೇ ನಾನು ಗಮನಿಸಿರೋದು."

"ನಂಗೂ ಏನು ಮಾಡ್ಬೇಕೂಂತ ಗೊತ್ತಾಗ್ತಿಲ್ಲ. ಇದೊಂಥರ ವಿಚಿತ್ರ ಕೇಸು ಸಾರ್, ಅಲ್ದೆ ಅವನು ಹೇಳೋದನ್ನು ನಾವು ನಂಬ್ಲಿಲ್ಲ ಅಂದ್ರೆ ಅವನಿಗೆ ಕೋಪ ಬಂದ್ಬಿಡುತ್ತೆ. ನಂಗೆ ನೆನ್ನೆ ಚೆನ್ನಾಗಿ ಬಯ್ದ್‌ಬಿಟ್ಟ ಸಾರ್."

"ಬಟ್ ▫ ನೀಡ್ ಯುವರ್ ಹೆಲ್ಪ್ ಚಂದ್ರು, ಹೀಗೇ ಬಹಳ ದಿನ ನಡೆಯೋದು ಕಷ್ಟವಾಗುತ್ತೆ. ಅಲ್ಲ ನಾವು ಹಣದ ಸಹಾಯ ಮಾಡಬಹುದು. ಆದ್ರೆ ಅದು ಉಪಯೋಗಕ್ಕೆ ಬರುತ್ತೇಂತ ಏನು ಗ್ಯಾರಂಟಿ. ಸ್ವಲ್ಪ ಯು ಬಿ ಆಫ್ಟರ್ ಹಿಮ್" ಅಂದರು.

ಯೋಚನೆಯಿಂದ ಚಂದ್ರು ಆಚೆ ಬಂದ. ನಾಗೇಶ ಖುಷಿಯಿಂದ ಕೆಲಸ ಮಾಡ್ತಿದ್ದ. ಅವನು ಮಧು ಜೊತೆ ಕಾಫಿಗೆ ಹೋದಾಗ ಜಯಂತಿ ಚಂದ್ರು ಬಳಿ ಬಂದು,

"ಏನ್ರೀ ಅವರು ಹೆಂಡ್ತಿ ಜೊತೆ ಮಾತಾಡಿದ್ರಂತೆ. ಲಕ್ಷ ಕೊಟ್ಟು ಅವರ್ನ ಬಿಡಿಸಿಕೊಂಡು ಬರಬೇಕಂತೆ, ಏನ್ರೀ ಇದು ವಿಚಿತ್ರ" ಅಂದಳು.

"ಯಾರ್ಗೂ ಏನೂ ಗೊತ್ತಾಗ್ತಿಲ್ಲ. ಸ್ವಲ್ಪ ಅನುಕಂಪ ತೋರಿಸ್ಬೇಕು ಅಷ್ಟೆ. ಈಗ್ಲೇ ನೀವು ಏನೂ ತೀರ್ಮಾನ ತಗೋಬೇಡಿ."

"ನಾನೇನು ತೀರ್ಮಾನ ತಗೊಳ್ಳಿ. ಈಚೀಚೆಗೆ ಅವರು ನನ್ನ ತಂಟೆಗೆ ಬರ್ದಿದ್ರೆ ಸಾಕು ಅನ್ಸಿದೆ" ಅಂದು ಅವಳ ಸ್ಥಾನಕ್ಕೆ ಹೋದಳು.

೪

ಅಕ್ಕನ ಮನೆಗೆ ಓಡೋಡಿ ಬಂದ ನಾಗೇಶ.

"ಅಕ್ಕಾ ಅಕ್ಕಾ" ಅಂತ ಕೂಗುತ್ತ ಕೂಗುತ್ತ ಬಂದ.

ಬಾಗಿಲಿಗೆ ಬಂದ ಕಾಂತಮ್ಮ.

"ಏನಾಯ್ತೋ ನಾಗೇಶ. ಯಾಕೆ ಹೀಗೆ ಓಡಿ ಬಂದೆ ಏನು ವಿಷಯ" ಅಂದು ಅವನನ್ನು ಒಳಗೆ ಕರೆದುಕೊಂಡು ಹೋದಳು.

ತುಂಬ ಖುಷಿಯಿಂದ,

"ಅಕ್ಕಾ ಅವಳು ಸಿಕ್ಕಿಬಿಟ್ಲು. ನೆನ್ನೆ ರಾತ್ರಿ ನಾನೇ ಅವಳ ಜೊತೆ ಮಾತಾಡ್ದೆ. ಎಷ್ಟು ಆತಂಕ ಅಂತೀಯ" ಅಂದ.

"ಯಾರು ಸಿಕ್ಕಿದ್ರು, ಯಾರ ಹತ್ರ ಮಾತಾಡ್ದೆ."

"ಇನ್ನ್ಯಾರು ಸುಶೀಲ. ನಾವೆಲ್ಲ ತಿಳ್ಕೊಂಡಿರೋ ಹಾಗೆ ಅವಳು ಸತ್ತಿಲ್ಲ. ಬದುಕಿದ್ದಾಳೆ. ಅದಿಕ್ಕೆ ಈಗ ಒಂದು ಲಕ್ಷ ಹೊಂದಿಸೋ ಏರ್ಪಾಡು ಮಾಡಿದೀನಿ. ಭಾವ ಒಂದಿಷ್ಟು ದುಡ್ಡು ಕೊಟ್ರೆ" ಅನ್ನುತ್ತಿದ್ದೋನು ಹಾಗೇ ಮಾತು ನಿಲ್ಲಿಸಿದ ನಾಗೇಶ.

ಚಿದಂಬರ, ಗುರುರಾಜ ಬಾದಾಮಿ ಕುತೂಹಲದಿಂದ ನಾಗೇಶನನ್ನೇ ನೋಡುತ್ತಿದ್ದರು. ಕಾಂತಮ್ಮ ಏನು ಹೇಳಬೇಕೋ ತಿಳಿಯದೇ ಗಂಡನ ಮುಖಾನೇ ನೋಡ್ತಾ ನಿಂತರು.

"ಕೂತ್ಕೊಬಾ, ವಿಚಾರ ಮಾಡೋಣಂತೆ. ಇವತ್ತು ಆಫೀಸಿಗೆ ಹೋಗಿದ್ಯಾ."

"ಹೋಗಿದ್ದೆ. ನಮ್ಮ ಆಫೀಸರ್‌ಗೂ ಹೇಳಿದೀನಿ. ಅವರೂ ಹಣ ಕೊಡ್ತೀನಿಂತ ಹೇಳಿದಾರೆ" ಅಂತ ಖುಷಿಯಿಂದ ಬೀಗುತ್ತ.

ಗುರುರಾಜ ಬಾದಾಮಿ ನಾಗೇಶನ ಹತ್ತಿರ ಬಂದು,

"ತಪ್ ತಿಳ್ಕೊಬೇಡಿ. ಒಬ್ಬ ಫ್ರೆಂಡಾಗಿ ಹೇಳ್ತಿದೀನಿ ನಿಮಗೆ ಫೋನ್ ಮಾಡ್ತಿರೋನು ಮೋಸ ಮಾಡೋಲ್ಲ ಅಂತ ಏನು ಗ್ಯಾರಂಟಿ. ಹೀಗೇ ಏಕಾಏಕಿ ಒಂದು ಲಕ್ಷ ರೂಪಾಯಿ ತಗೊಂಡು ಹೋಗಿ ಅವನಿಗೆ ಕೊಟ್ರೆ ಹೇಗೆ" ಅಂದರು.

"ಮತ್ತಿನ್ನೇನು ಮಾಡು ಅಂತೀರ. ನನ್ಹತ್ರ ಲಕ್ಷ ರೂಪಾಯಿ ಇಲ್ಲ. ನನ್ ಹೆಂಡ್ತೀನ ಸಾಯಿಸಿಬಿಡು ಅಂತ ಹೇಳ್ಬೇಕಾ."

"ಹಾಗಲ್ಲ ಇದರಲ್ಲಿ ನಂಬಿಕೆ ಬೇರೆ, ವ್ಯವಹಾರ ಬೇರೆ. ಬರೀ ಒಂದು ಫೋನ್ ಕಾಲ್‌ನಿಂದ ನೀವು ಇಷ್ಟು ನಂಬಿಕೆ ಇಟ್ಕೊಂಡು ಅಷ್ಟೊಂದು ಹಣ..."

"ಹೌದು ನಂಗೆ ಹೆಂಡ್ತಿ ಮುಖ್ಯ, ಹಣ ಅಲ್ಲ."

"ಅದ಼್ರಿ, ಆದ್ರೆ ಅವನು ಹಣ ತಗೊಂಡು ನಿಮಗೆ ನಿಮ್ ಹೆಂಡ್ತೀನ ಕೊಡ್ದೇ ಹೋದ್ರೆ."

"ಅದ್ಹೇಗೆ ಸಾಧ್ಯ ಬಲಗೈಲಿ ಹೆಂಡ್ತಿ, ಎಡಗೈಲಿ ಹಣ."

"ನಿಮ್ಮ ಐಡಿಯಾಗಳೇನೋ ಸರಿ, ಇದರಲ್ಲಿ ನೀವು ಬೇಗ ಯಾರ್ದಾದ್ರೂ ಸಹಾಯ ಪಡ್ಕೊಂಡ್ರೆ ಒಳ್ಳೇದು."

"ಹೇಳಿ ಯಾರ ಸಹಾಯ ಪಡೆಯೋದು."

"ನಿಮ್ಮ ಅಭ್ಯಂತರವಿಲ್ಲದಿದ್ರೆ ನಾನು ಸಹಾಯ ಮಾಡ್ತೀನಿ. ಆದರೆ ನಮ್ಮ ಕೆಲಸ ಸಾಧನೆ ಆಗೋವರೆಗೂ ನೀವು ನಾನು ಹೇಳಿದ ಹಾಗೆ ಕೇಳಬೇಕು."

ಮೇಷ್ಟ್ರು : ಬಂಜರು ಭೂಮಿ ಎಂದರೇನು?

ವಿದ್ಯಾರ್ಥಿ : ಯಾವ ಜಾಗದಲ್ಲಿ ಏನೂ ಬೆಳೆಯುವುದಿಲ್ಲವೋ ಅದಕ್ಕೆ ಬಂಜರು ಭೂಮಿ ಎನ್ನುತ್ತಾರೆ.

ಮೇಷ್ಟ್ರು : ಅದಕ್ಕೆ ಉದಾಹರಣೆ?

ವಿದ್ಯಾರ್ಥಿ : ನಮ್ಮ ತಂದೆಯ ಬೋಳು ತಲೆ.

– ಎಚ್. ಎಸ್. ಸಿಂಧೋಗಿ



ನಾಗೇಶ ಖುಷಿಯಿಂದ,

"ನೀವು ಸಹಾಯ ಮಾಡ್ತೀರ ಮಿಸ್ಟರ್ ಬಾದಾಮಿ. ಹಾಗಿದ್ರೆ ಬಹಳ ಸಂತೋಷ. ನೀವು ಹೇಳಿದ ಹಾಗೆ ನಾನು ಕೇಳೋಕೆ ತಯಾರು'' ಅಂದ.

"ನಾನು ಏನು ಮಾಡಿದ್ರೂ ನಿಮ್ಮ ಒಳ್ಳೇದಕ್ಕೆ. ನೀವು ನನ್ನ ಮೇಲೆ ಅನುಮಾನ ಪಡಬೇಡಿ. ನಾನು ಅನೇಕ ವಿಚಾರಗಳನ್ನು ಕೇಳ್ತೀನಿ, ತಪ್ ತಿಳ್ಕೊಬೇಡಿ.''

"ಹಾಗೇನಿಲ್ಲ ಮಿಸ್ಟರ್ ಬಾದಾಮಿ, ಒಂದ್ನಿಮಿಷ ಬಂದೆ'' ಅಂದು ಮನೆಯೊಳಗೆ ಹೋದ ನಾಗೇಶ.

"ಮೊದ್ಲು ಅವರು ನನ್ನ ಜೊತೆ ಬರ್ಲಿ ಆಮೇಲೆ ಏನು ಮಾಡ್ಬೇಕೋ ಮಾಡ್ತೀನಿ'' ಅಂದ್ರು ಬಾದಾಮಿ.

"ಅಲ್ಲ ಸಾರ್, ಸ್ವಲ್ಪ ಕೂಲಂಕುಷವಾಗಿ ಪರೀಕ್ಷೆ ಮಾಡ್ಬಿಡಿ. ಅದೇನಾಗಿದೆ ಯಾಕೆ ಹೀಗೆ ನಡ್ಕೊತಾ ಇದ್ದಾನೆ ಅಂತ. ಎಷ್ಟೇ ದುಡ್ಡು ಖರ್ಚಾದ್ರೂ ಪರವಾಗಿಲ್ಲ'' ಅಂದರು ಗುರುಬಸಪ್ಪ.

* * * * *

"ಬನ್ನಿ ಬನ್ನಿ" ಅಂತ ಸ್ವಾಗತಿಸಿದರು ಡಾ. ಮನೋಹರ್.

ಗುರುರಾಜ ಬಾದಾಮಿ ನಾಗೇಶ ಬಳಿ ಬಂದರು.

"ಇವರು ನಾಗೇಶ ಅಂತ, ನಾನಾಗ್ಲೇ ಫೋನಲ್ಲಿ ತಿಳಿಸಿದ್ನಲ್ಲ'' ಅಂದರು ಬಾದಾಮಿ ನಾಗೇಶನನ್ನು ಮನೋಹರ್‌ಗೆ ಪರಿಚಯ ಮಾಡಿಕೊಡ್ತಾ. ಕೈ ಕುಲುಕಿದ ಮನೋಹರ್.

"ಏನ್ ತಗೋತೀರಾ ಕಾಫಿನೋ...''

"ಕಾಫಿ ತಗೋತೀನಿ, ಅಂದ್ಹಾಗೆ ಸಿಗರೆಟ್ ಸೇದಬಹುದಾ.''

"ಓ ಧಾರಾಳವಾಗಿ'' ಅಂದು ಆ್ಯಶ್ ಟ್ರೇ ಕೊಟ್ಟರು ಡಾ. ಮನೋಹರ್.

ಕಾಫಿ ಗುಟುಕರಿಸುತ್ತ ಸಿಗರೆಟ್ ಸೇದಿದ ನಾಗೇಶ.

"ಅಂದ್ಹಾಗೆ ಮಿಸ್ಟರ್ ನಾಗೇಶ. ನಿಮ್ಮ ವಿಚಾರ ಬಾದಾಮಿ ತಿಳಿಸಿದ್ದಾರೆ. ಈಗ ನೀವೇನು ಮಾಡ್ಬೇಕೂಂತಿದೀರ.''

"ನಾನು ಇನ್ನೇನ್ಸಾರ್ ಮಾಡೋಕಾಗುತ್ತೆ. ಡು ಐ ಹ್ಯಾವ್ ಎನಿ ಆಪ್ಷನ್, ಹೇಗಾದ್ರೂ ಮಾಡಿ ಒಂದು ಲಕ್ಷ ರೂಪಾಯಿ ಹೊಂದಿಸ್ಬೇಕು. ಹೆಂಡ್ತೀನ ಬಿಡುಗಡೆ ಮಾಡಿಸಿಕೊಂಡು ಬರ್ಬೇಕು'' ಅಂದು ನಕ್ಕ.


ನಾಗೇಶ ಮಾತಾಡುತ್ತಿದ್ದಾಗ ಮನೋಹರ್ ಅವನನ್ನೇ ಕುತೂಹಲದಿಂದ ನೋಡಿದರು.

ನಾಗೇಶ ಹೇಳಿದ.

"ಸಾರ್ ನಿಮಗೆ ಇಂಥಾ ಪರಿಸ್ಥಿತಿಗಳನ್ನು ಎದುರಿಸಿ ಸಾಕಷ್ಟು ಅನುಭವ ಇದೇಂತ ಬಾದಾಮಿ ಹೇಳಿದ್ರು. ಆದಕ್ಕೆ ನಿಮ್ಹತ್ರ ಕರ್ಕೊಂಡ್ ಬಂದಿದ್ದಾರೆ. ಲಕ್ಷ ರೂಪಾಯಿ ನಾನು ಹೊಂದಿಸ್ತೀನಿ. ಈ ವಿಚಾರದಲ್ಲಿ ಹೇಗೆ ಮುಂದುವರೀಬೇಕೂಂತ ನೀವು ತಿಳಿಸಿಕೊಟ್ರೆ ತುಂಬ ಉಪಕಾರ ಮಾಡಿದ ಹಾಗಾಗುತ್ತೆ ಹಾಗೂ ಗಂಡ ಹೆಂಡಿರನ್ನು ಒಂದು ಮಾಡಿದ ಪುಣ್ಯ ಬರುತ್ತೆ.''

"ಅದಿಕ್ಕೇನಂತೆ. ಆದ್ರೆ ಅದಕ್ಕೆ ಮುಂಚೆ ನಿಮಗೆ ಕೆಲವು ಪ್ರಶ್ನೆಗಳನ್ನು ಕೇಳ್ತೀನಿ.''

"ಕೇಳಿ ಸಾರ್.''



"ನಿಮ್ಮ ಹೆಂಡ್ತಿಗೆ ಅಪಘಾತ ಆಗಿದ್ದು ಯಾವಾಗ."

"ನಾಳೆಗೆ ಸರಿಯಾಗಿ ಒಂದು ತಿಂಗಳು."

"ಸ್ವಲ್ಪ ವಿವರವಾಗಿ ತಿಳಿಸ್ತೀರ."

"ಅದೇ ಅವಳು ಲೂನಾದಲ್ಲಿ ಅಮ್ಮನ ಮನೆಗೆ ಹೋಗ್ತಿದ್ಲು. ಎದುರಿಗೆ ಬಂದ ವಾಹನ ಇವಳ ಲೂನಕ್ಕೆ ಡಿಕ್ಕಿ ಹೊಡೆದು, ಇವಳು ಸ್ಪಾಟ್ ಡೆತ್, ಲೂನ ಅಪ್ಪಚ್ಚಿ. ನಂಗೆ ವಿಚಾರ ತಿಳಿಯೋ ಹೊತ್ತಿಗೆ ಯಾರೋ ಇವಳನ್ನು ಆಸ್ಪತ್ರೆಗೆ ಸೇರಿಸಿದ್ರು, ಎಲ್ಲ ಮುಗಿದಿತ್ತು. ಅಷ್ಟೊತ್ಗೆ ಅವರಪ್ಪ, ಅಮ್ಮ, ರಘು ಎಲ್ಲ ಬಂದಿದ್ರು. ಸರಿ ಇಷ್ಟೆಲ್ಲ ಆದ್ಮೇಲೆ ಪೋಸ್ಟ್ ಮಾರ್ಟಂ ಅಂತ ಬೇರೆ ಹೇಳಿ ಕುಯ್ದ್ ಹಾಕಿದ್ರು. ಆಮೇಲೆ ಅದನ್ನೇ ಗೋಣಿಚೀಲದಲ್ಲಿ ಹಾಕಿ ಹೊಲಿದು ಕೊಟ್ಟದ್ರು. ತಗೊಂಡು ಹೋಗಿ ಸಂಸ್ಕಾರ ಮಾಡಿದ್ದಾಯ್ತು."

"ಇದಿಷ್ಟೂ ನಡೆದದ್ದು ತಾನೇ."

"ಹೌದು ಸಾರ್ ನಡೆದದ್ದು."

"ಹಾಗಿದ್ಮೇಲೆ ಸತ್‌ಹೋಗಿರೋ ನಿಮ್ ಹೆಂಡ್ತೀನ ಅವನು ತಂದುಕೊಡ್ತೀನಿ ಅಂದ್ರೆ ಹೇಗೆ ನಂಬ್ತೀರ. "

"ನಂಬಲೇಬೇಕು ಸಾರ್, ಯಾಕೇಂದ್ರೆ ನಾನು ಅವಳ ಜೊತೆ ಮಾತಾಡಿದೀನಿ. ಪಾಪ ತುಂಬ ಅಳ್ತಿದ್ಲು ಸಾರ್. ಸಮಾಧಾನ ಮಾಡ್ಕೋ ಬೇಗ ಬಂದ್ಬಿಡ್ತೀನಿ ಅಂತ ಹೇಳಿದ್ದೀನಿ."

"ಎಲ್ಲಿಂದ ಮಾತಾಡಿದ್ರು."

"ಅದು ಗೊತ್ತಿಲ್ಲ ಸಾರ್. ಅಲ್ಲ ಸಾರ್ ಲಕ್ಷ ರೂಪಾಯಿ ತಗೊಂಡ್ಬಾ ಅಂತ ಹೇಳಿದೋನು ಇದೆಲ್ಲ ವಿವರ ಕೊಟ್ಟಿರ್ತಾನಾ. ಅದೂ ಅಲ್ದೆ ನಾನೇನಾದ್ರೂ ಪೋಲೀಸಿನೋರು ಪತ್ತೇದಾರರು ಅಂತ ಹೋದ್ರೆ ನನ್ ಹೆಂಡ್ತೀನ ಸಾಯಿಸಿಬಿಡ್ತಾನಂತೆ ಸಾರ್. ಅದಿಕ್ಕೆ ನಾನು ಯಾರ್ಗೂ ಹೇಳಿಲ್ಲ. ನೀವೇ ಹೇಳಿ ಸಾರ್ ಲಕ್ಷ ಹೆಚ್ಚೋ, ಹೆಂಡ್ತಿ ಹೆಚ್ಚೋ" ಅಂತ ಕಣ್ಣುಗಳನ್ನರಳಿಸಿ ಕೇಳಿದ.

ಮನೋಹರ್ "ಹೆಂಡ್ತಿ ಇದ್ರೆ ಲಕ್ಷ ಹೆಚ್ಚು, ಲಕ್ಷ ಇದ್ರೆ ಹೆಂಡ್ತಿ ಹೆಚ್ಚು" ಅಂತ ಮನೋಹರ್ ಅಂದಾಗ ಬಾದಾಮಿ, ನಾಗೇಶ ಇಬ್ಬರೂ ನಕ್ಕರು.

"ಮುಂದಕ್ಕೆ ಹೇಳಿ" ಅಂದರು ಮನೋಹರ್.

"ಮುಂದಕ್ಕೆ ಇನ್ನೇನು ಹೇಳ್ಲಿ ಸಾರ್ ಎಲ್ಲರಿಗೂ ಹೇಳಿದೀನಿ. ಲಕ್ಷ ರೂಪಾಯಿ ಹೊಂದಿಸ್ಕೊಂಡು ಅವನು ಫೋನ್ ಮಾಡ್ದಾಗ ಎಲ್ಲಿ ಬರ್ಬೇಕು ಹೇಳು ಅಂತ ಕೇಳಿ ತಿಳ್ಕೊಂಡು ಅಲ್ಲಿ ತಗೊಂಡ್ ಹೋಗಿ ಕೊಟ್ಟು ಸುಶೀಲನ್ನ ಕರ್ಕೊಂಡ್ ಬರ್ಬೇಕು."

"ಇದರಲ್ಲೇನೋ ಮೋಸ ಇದೆ ಅನ್ಸೋಲ್ವೆ ನಿಮಗೆ."

"ಮೋಸ, ಅದ್ಹೇಗೆ ಸಾಧ್ಯ ಸಾರ್."

"ಅಲ್ಲ ಈಗೀಗ ಇಂಥಾ ಗುಂಪುಗಳು ಜಾಸ್ತಿಯಾಗಿ ಜನರಿಂದ ಹಣ ಸುಲಿಗೆ ಮಾಡ್ತಿದ್ದಾರೆ. ಲಕ್ಷನೂ ಕೈ ಬಿಟ್ಟು ಹೆಂಡ್ತಿನೂ ಕೈಗೆ ಸಿಗದೇ ಹೋದ್ರೆ."

"ಇಲ್ಲ ಹಾಗಾಗೋದು ಖಂಡಿತಾ ಸಾಧ್ಯವಿಲ್ಲ."

"ಒಂದು ನೇರವಾದ ಪ್ರಶ್ನೆ ಕೇಳ್ಲಾ."

"ಕೇಳಿ ಸಾರ್."

"ನಿಮ್ ಹೆಂಡ್ತಿ ಬದುಕಿರೋದು ಹೇಗೆ ಸಾಧ್ಯ ಅಂತ."

"ಹೇಗೆ ಸಾಧ್ಯ ಅಂದ್ರೆ ನಾನೂ ನಂಬಿರ್ಲಿಲ್ಲ ಸಾರ್, ಆದ್ರೆ ಮೊನ್ನೆ ಅವಳತ್ರನೇ ಮಾತಾಡಿದ್ಮೇಲೆ ನಂಬ್ದೆ."

"ಆಕೆ ಧ್ವನಿ ಗುರುತು ಹಿಡಿದ್ರಾ."

"ಏನ್ಸಾರ್ ಮರೆಯೋಕೆ ಆಗುತ್ತ."

"ನಿಮ್ಮನ್ನು ಯಾರಾದರೂ ಎಕ್ಸ್‌ಪ್ಲಾಯ್ಟ್ ಮಾಡ್ತಿದ್ದಾರೆ ಅನಿಸೋಲ್ವ."

"ಏನ್ಸಾರ್ ಹೀಗೆ ಕೇಳ್ತೀರ. ನನ್ನನ್ನು ಯಾರು ಸಾರ್ ಎಕ್ಸ್‌ಪ್ಲಾಯ್ಟ್ ಮಾಡೋಕಾಗುತ್ತೆ. ಅಷ್ಟು ಸುಲಭ ಅಂದ್ಕೊಂಡ್ರಾ."

"ಅಪಘಾತ ಆಯ್ತೂಂತೀರ, ಸ್ಪಾಟ್ ಡೆತ್ ಅಂತೀರ. ಪೋಸ್ಟ್‌ಮಾರ್ಟಂ ಆಯ್ತು ಅಂದ್ರಿ, ಸಂಸ್ಕಾರನೂ ಮಾಡ್ದೆ ಅಂದ್ರಿ. ಅಂದ್ಮೇಲೆ ಆಕೆ ಮತ್ತೆ ಬದುಕಿ ಬರೋದು ಹೇಗೆ ಸಾಧ್ಯ ಅಂತ ಸೂಕ್ಷ್ಮವಾಗಿ ಚಿಂತನೆ ಮಾಡಿ."

"ಇಲ್ಲೇ ನೋಡಿ ನಂಗೂ ನಿಮಗೂ ಇರೋ ವ್ಯತ್ಯಾಸ. ಆಕೆ ನನ್ನ ಹೆಂಡ್ತಿ, ನಾನು ನಂಬ್ತೀನಿ. ಆಕೆ ನಿಮ್ಮ ಹೆಂಡ್ತಿ ಅಲ್ಲ, ಅದಕ್ಕೆ ನೀವು ನಂಬ್ತಿಲ್ಲ ಅಲ್ವೆ" ಅಂದು ನಾಗೇಶ ಬಾದಾಮಿಯ ತೊಡೆ ತಟ್ಟಿ ನಕ್ಕ.

ಮನೋಹರ್ ಬೆರಗಾದರು.

ಬಾದಾಮಿ ಕುತೂಹಲದಿಂದ ನಾಗೇಶನನ್ನು ನೋಡಿದರು.

ಮುಂದೇನು ಮಾಡಬೇಕೆನ್ನೋದರ ಬಗ್ಗೆ ಮನೋಹರ್ ಯೋಚಿಸುತ್ತಿದ್ದರು.

ಬಾದಾಮಿ ಮನೋಹರ್‌ಗೆ ಸೂಚನೆ ನೀಡಿದರು.

ಸ್ವಲ್ಪ ಸಮಯದ ನಂತರ.

ಮನೋಹರ್ ನಾಗೇಶನನ್ನು "ಬನ್ನಿ ಸ್ವಲ್ಪ ನಮ್ಮ ರೂಂಗೆ ಹೋಗೋಣ" ಅಂತ ಕರ್ಕೊಂಡ್ ಹೋದ್ರು.

ಬಾದಾಮಿ ಒಂದು ಸಿಗರೆಟ್ ಹಚ್ಚಿ ಕೂತರು.

ಐದು ನಿಮಿಷ ಕಳೆದಿರಬಹುದು.

ರಭಸದಿಂದ ಹೊರಗೆ ಬಂದ ನಾಗೇಶ. ತುಂಬಾ ಕೋಪದಿಂದ ಇದ್ದ. ಬಾದಾಮಿಯವರ ಕಡೆ ರೋಷದಿಂದ ನೋಡಿದ.

"ರೀ ನನ್ನನ್ನು ಏನಂದ್ಕೊಂಡಿದೀರ. ಅಲ್ಲಾರೀ ಏನೋ ಸಲಹೆ ಕೊಡ್ತೀರ ಅಂತ ಬಂದ್ರೆ ಹುಚ್ಚರನ್ನು ನೋಡೋ ಡಾಕ್ಟ್ರ ಹತ್ರ ಕರ್‍ಕೊಂಡ್ ಬಂದಿದ್ದೀರ. ನಂಗೆ ನಿಮ್ಮ ಸಹಾಯ ಬೇಡ್ರೀ. ಹಾಗೇ ನಾನೊಬ್ನೇ ಪ್ರಯತ್ನಪಟ್ಟು ನನ್ ಹೆಂಡ್ತೀನ ಕರ್‍ಕೊಂಡ್ ಬರ್ತೀನಿ'' ಅಂದು ಅರಚುತ್ತ ಹೊರಬಂದ.

ಬಾದಾಮಿ ಅಚ್ಚರಿಯಿಂದ ಕೂತುಬಿಟ್ಟರು.

ಹೊರಗೆ ಬಂದ ಮನೋಹರ್,

"ಯಾಕೋ ಈ ಕೇಸ್ ತುಂಬ ಡೇಂಜರಸ್, ಇನ್ನು ಪ್ರಾರಂಭ ಮಾಡಿರ್‍ಲಿಲ್ಲ ಆಗ್ಲೇ ಹೊರಗೆ ಓಡಿ ಬಂದ. ಈ ಕೇಸ್‌ನೇನಾದ್ರೂ ಕ್ಯೂರ್ ಮಾಡ್ಲೇ ಬೇಕೂಂತಿದ್ರೆ ಆಸ್ಪತ್ರೆಗೆ ಸೇರಿಸಿಬಿಡಬೇಕು. ಅದು ಬಿಟ್ಟು ಬೇರೆ ದಾರಿ ಇಲ್ಲ'' ಅಂದರು.

"ನಂಗೂ ಏನ್ ಮಾಡ್ಬೇಕೋ ಗೊತ್ತಾಗ್ತಿಲ್ಲ ಸಾರ್, ಅವರ ಮಾವ ಗುರುಬಸಪ್ಪೋರ್‍ನ ಕೇಳ್ತೀನಿ. ಅದರ್ ವೈಸ್ ಹಿ ಲುಕ್ಸ್ ನಾರ್ಮಲ್. ಇದೊಂದ್ ವಿಚಾರದಲ್ಲಿ ಹಿ ವಾಂಟ್ಸ್ ಅಸ್ ಟು ಬಿಲೀವ್ ಹಿಮ್.''

"ಒಂದ್ ವೇಳೆ ಆಸ್ಪತ್ರೆಗೆ ಕರ್‍ಕೊಂಡ್ ಹೋಗೋದಾದ್ರೆ ಹೇಳಿ ನಾನು ಡಾಕ್ಟ್ರಿಗೆ ಫೋನ್ ಮಾಡಿ ಹೇಳ್ತೀನಿ. ಏನಾಗಿದೆ ಅನ್ನೋದನ್ನು ಬೇಕಾದ್ರೆ ಕೂಲಂಕುಷವಾಗಿ ಪರೀಕ್ಷೆ ಮಾಡಬಹುದು'' ಅಂದರು ಮನೋಹರ್.

"ನಾ ಬರ್ತೀನಿ ಸಾರ್'' ಅಂದು ಬಾದಾಮಿ ಹೊರಟರು.

* * * * *

ಚಂದ್ರು ಮನೆಗೆ ಬಂದಾಗ ಮನೆ ಕತ್ತಲೆಯಿಂದ ಕೂಡಿತ್ತು. ಜೊತೇಲಿ ಬಂದಿದ್ದ ಆನಂದ.

"ಏನಯ್ಯ ದೀಪಾನೂ ಹಾಕ್ಕೊಳ್ದೆ ಕೂತಿದ್ದಾನೆ'' ಅಂದ.

"ಸ್ವಲ್ಪ ಇರು'' ಅಂದು ಒಳಗೆ ಎರಡು ಹೆಜ್ಜೆ ಇಟ್ಟು"ನಾಗೇಶ ನಾಗೇಶ'' ಅಂತ ಕರೆದ ಚಂದ್ರು.

ಮೂಲೆಯಿಂದ "ಬಾರಯ್ಯ'' ಅನ್ನೋ ಧ್ವನಿ ಕೇಳಿಸ್ತು.

ಮನೆ ಪರಿಚಯ ಇದ್ದಿದ್ರಿಂದ ದೀಪ ಹಾಕಿದ ಚಂದ್ರು. ಮೂಲೆಯೊಂದರಲ್ಲಿ ಕುರ್ಚೀಲಿ ಕೂತಿದ್ದ ನಾಗೇಶ.

"ಯಾಕೋ ಕತ್ತಲೇಲಿ ಕೂತಿದ್ದೆ'' ಅಂತ ಕೇಳಿದ.

"ಏನು ಬಿಡೋ, ಬದುಕೇ ಕತ್ತಲೇಲಿ ಕೂತಿದೆ. ಸ್ವಲ್ಪ ಹೊತ್ತು ಕತ್ತಲೆ ಇದ್ರೆ ಏನಂತೆ.'' ಅಂದು ಆನಂದನ ಕಡೆ ನೋಡಿ "ಇವನು ಬೇರೆ ಬಂದಿದ್ದಾನೆ, ಹುಚ್ಚ ಹೇಗಿದ್ದಾನೇಂತ ನೋಡ್ಕೊಂಡು ಹೋಗೋಣಾಂತನಾ'' ಅಂತ ಕೇಳಿದ.

ಆನಂದ ನಾಗೇಶನ ಭುಜದ ಸುತ್ತ ಕೈ ಹಾಕಿ,

"ಯಾಕೋ ಹೀಗಂತೀಯ, ನಿನ್ನನ್ನು ಯಾರೋ ಹುಚ್ಚ ಅಂದೋರು.''

"ಬಾಯಿಬಿಟ್ಟು ಅನ್ನೋದು ಬೇರೇಬೇಕಾ, ನೀವೆಲ್ಲ ನನ್ನನ್ನು ನೋಡ್ತಿರೋ ದೃಷ್ಟಿ ಸಾಲ್ದಾ.''

ಚಂದ್ರು "ಯಾಕೋ ನಾಗೇಶ ಇವತ್ತು ಹೇಗ್ಹೇಗೋ ಮಾತಾಡ್ತಾ ಇದೀಯ. ಯಾರು ಏನಂದ್ರೋ" ಅಂತ ಸಂತೈಸಿದ.

"ಅಲ್ಲಯ್ಯ ಅವರ್‍ಯಾರೋ ನನಗೆ ಸಹಾಯ ಮಾಡ್ತೀನೀಂದ್ರು, ನೋಡಿದ್ರೆ ಸೈಕ್ಯಾಟ್ರಿಸ್ಟ್ ಹತ್ರ ಕರ್‍ಕೊಂಡ್ ಹೋಗಿದ್ದಾರೆ."

"ಹೌದಾ."

"ಹೂ, ಅವನು ನನ್ನನ್ನು ಹುಚ್ಚ ಅಂತನೇ ತಿಳ್ಕೊಂಬಿಟ್ಟ ಸದ್ಯ ಕೈ ಕಾಲು ಕಟ್ಟಿ ಹಾಕಿರ್ಲಿಲ್ಲ. ನೋಡ್ರಯ್ಯ ಒಂದ್ ವಿಚಾರ. ನಾನೇನೋ ಹೇಳ್ದೆ ಅಂತಿಟ್ಕೊ ಅದನ್ನು ನಿಮಗೆ ಇಷ್ಟ ಇದ್ರೆ ನಂಬಿ ಇಲ್ದಿದ್ರೆ ಬಿಟ್‌ಬಿಡಿ. ನನ್ನನ್ನು ಯಾಕೆ ಅವಹೇಳನ ಮಾಡ್ತೀರ, ಹುಚ್ಚ ಅನ್ನೋ ಬಿರುದು ಕೊಡ್ತೀರ."

ಚಂದ್ರು ನಾಗೇಶನ ಬೆನ್ನ ಮೇಲೆ ಕೈ ಹಾಕಿ,

"ಆ ಥರ ಸ್ಟೇಟ್‌ಮೆಂಟ್ ಜನರಲೈಸ್ ಮಾಡ್ಬೇಡ. ಯಾರೋ ಒಬ್ರು ಇಬ್ರು ಹಾಗಂದ್ರ ಅಂತ ನೀನು ಬೇಜಾರು ಮಾಡ್ಕೋಬೇಡ. ನಾವೆಲ್ಲ ನಿನ್ ಜೊತೆ ಇಲ್ವ" ಅಂದ.

"ಈಗ ನೀನೇನು ಡಿಸೈಡ್ ಮಾಡಿದೀಯಾ" ಅಂತ ಆನಂದ ಕೇಳಿದ "ಡಿಸೈಡ್ ಮಾಡೋದೇನಯ್ಯ ಮಾಡಿರೋದನ್ನ ಇಂಪ್ಲಿಮೆಂಟ್ ಮಾಡ್ಬೇಕು ಅಷ್ಟೆ."

"ಅಂದ್ರೆ."

"ಒಂದು ಲಕ್ಷ ಹೊಂದಿಸೋದು ಹೆಂಡ್ತೀನ ಕರ್‍ಕೊಂಡ್ ಬರೋದು."

"ಅದ್ಸರಿ ನಾಗೇಶ ನಿಮ್ಮ ಮಾವನೂ ಅವರೇ, ಭಾವನೂ ಅವರೇ. ಅಕ್ಕನೂ, ಅತ್ತೆನೂ ಇಬ್ರೂ ಅವರೇ. ಅವರು ಇದಕ್ಕೆ ಸಹಾಯ ಮಾಡಲ್ವೆ."

"ಸಹಾಯನಾ, ಸದ್ಯ ತೊಂದ್ರೆ ಮಾಡ್ತಿರೋದನ್ನು ನಿಲ್ಸಿದ್ರೆ ಸಾಕು. ಅವರೇ ತಾನೇ ನನ್ನನ್ನು ಸೈಕ್ಯಾಟ್ರಿಸ್ಟ್ ಹತ್ರ ಕಳಿಸಿದ್ದು."


ಟೆಲಿಫೋನ್ ಶಬ್ದ ಆಯ್ತು. ಆನಂದ ರಿಸೀವರ್ ಎತ್ತಲು ಹೋದ. ಬೇಡ ಅಂತ ಸಂಜ್ಞೆ ಮಾಡಿ ತಾನೇ ತಗೊಂಡು "ಹಲೋ" ಅಂದ. ಮತ್ತೊಂದು ಕ್ಷಣದಲ್ಲಿ ಗಟ್ಟಿಯಾಗಿ,

"ನಾನೇ ನಾಗೇಶ ಮಾತಾಡೋದು ಹೌದು ಹೌದು ಡಿಸೈಡ್ ಮಾಡಿದೀನಿ. ಒಂದು ಲಕ್ಷ ತಂದ್ಕೊಡ್ತೀನಿ. ಸ್ವಲ್ಪ ತಡ್ಕೊಳೀಪ್ಪ ಪ್ಲೀಸ್, ಇಲ್ಲ ಇಲ್ಲ ನಾನ್ಯಾರಿಗೂ ಹೇಳಿಲ್ಲ. ಅದಿರ್‍ಲಿ ನನ್ ಹೆಂಡ್ತಿ ಹೇಗಿದಾಳಪ್ಪ, ಸ್ವಲ್ಪ ಚನ್ನಾಗಿ ನೋಡ್ಕೊಳಿ. ಅವಳಿಗೆ ನಿಂಬೆಹಣ್ಣು ಉಪ್ಪಿನಕಾಯೀಂದ್ರೆ

ಆನಂಗನಾಟ

ಬೀದಿಯಲ್ಲಿ ಹೋಗುವಾಗ
ಒಂದು ದಿನ
ಆಕಸ್ಮಿಕ ಅಪ್ಸರೆ ಎದುರಾಗಿ
ನಾನು ನನ್ನ ವಿಶ್ವಾಮಿತ್ರ ಮನ
ಆಗೋದೆ, ಥೇಟ್ ಕೋಡಂಗಿ?

— ದೊಡ್ಡರಂಗೇಗೌಡ



ಇಷ್ಟ. ಊಟಕ್ಕೆ ಅದನ್ನೇ ಬಡಿಸಿ. ಇನ್ನೊಂದ್ಕೆಲ್ಸ ಏನಂದ್ರಿ, ಆಯ್ತು ಆಯ್ತು ನೀವು ಹೇಳಿದ ಹಾಗೇ ಆಗ್ಲಿ. ರಾಕ್ ಮೆಮೋರಿಯಲ್ ನಂಗೆ ಗೊತ್ತು. ಆಮೇಲೆ ನನ್ ಹೆಂಡ್ತಿ ಏನಾದ್ರೂ ನೀವು ಅವಳನ್ನು ಚನ್ನಾಗಿ ನೋಡ್ಕೊಂಡಿದ್ರಿ ಅಂತ ಸರ್ಟಿಫಿಕೇಟ್ ಕೊಟ್ರೆ ಇನ್ನೈದು ಸಾವಿರ ಎಕ್ಸ್‌ಟ್ರಾ ಕೊಡ್ತೀನಿ ಸರೀನಾ.''

ಆನಂದ, ಚಂದ್ರು ಮುಖ ನೋಡಿಕೊಂಡರು.

"ಒಂದ್ಸಾರಿ ನನ್ ಹೆಂಡ್ತಿ ಹತ್ರ ಮಾತಾಡ್ತೀನ್ರಪ್ಪ ಪ್ಲೀಸ್, ಏನು ನಿದ್ದೆ ಮಾಡ್ತಿದ್ದಾಳಾ. ಬೇಡಿ ಬೇಡಿ ಎಬ್ಬಿಸ್ಬೇಡಿ, ಅವಳಿಗೆ ಸ್ವಲ್ಪ ನಿದ್ರೆ ಜಾಸ್ತಿ. ಮಾಡ್ಲಿ ಮಾಡ್ಲಿ, ಅವಳಿಗೆ ಹೇಳಿ ನಾನು ಚನ್ನಾಗಿದೀನಿ ಆದಷ್ಟು ಬೇಗ ಒಂದು ಲಕ್ಷ ಹೊಂದಿಸ್ಕೊಂಡು ಬರ್ತೀನಿಂತ ಹೇಳಿ. ಆಮೇಲೆ ನಿಮ್ಮ ನಂಬರ್ ಕೊಡಿ ನಾನೇ ಫೋನ್ ಮಾಡ್ತೀನಿ. ನೀವೇ ಮಾಡ್ತೀರ, ದಿನಕ್ಕೊಂದ್ಸರಿ ಮಾಡಿ. ನನ್ ಹೆಂಡ್ತೀಗೆ ಕೊಡಿ ಅದಿಕ್ಕೆ ಬೇಕಾದ್ರೂ ಎಕ್ಸ್‌ಟ್ರಾ ಕೊಡ್ತೀನಿ, ಹಲೋ ಹಲೋ'' ಅಂದು ತೀರಾ ನಿರಾಸೆಯಿಂದ ನಾಗೇಶ ರಿಸೀವರ್ ನೋಡಿ ಕುಕ್ಕಿದ.

ಆನಂದನ ದೃಷ್ಟಿ ಅತ್ತ ಹರಿದಾಗ ಟೆಲಿಫೋನ್ ವೈರ್ ಕಟ್ಟಾಗಿರೋದು ಕಾಣಿಸಿತು. ಚಂದ್ರೂಗೂ ತೋರಿಸಿದ.

ಚಂದ್ರೂಗೆ ಅಚ್ಚರಿಯಾಯ್ತು.

ಇಷ್ಟ್ ಹೊತ್ತು ಅವನು ಯಾರ ಹತ್ರ ಮಾತಾಡ್ತಿದ್ದ ಅಂತ ಕೇಳೋದು ಹೇಗೆ ಅಂದ್ಕೊಂಡ. ಅಷ್ಟ್ರಲ್ಲಿ ನಾಗೇಶನೇ,

"ಅದೇ ಕಣಯ್ಯ ಹೆಂಡ್ತೀನಿಟ್ಕೊಂಡು ಲಕ್ಷ ಕೇಳ್ತಿದ್ದಾನಲ್ಲ ಅವನು ಒಳ್ಳೆ ಮನುಷ್ಯ ಕಣಯ್ಯ, ಟೈಮ್ ಕೊಟ್ಟಿದ್ದಾನೆ. ಬೇರೆಯವರಾಗಿದ್ರೆ ಇಷ್ಟೊತ್ತಿಗೆ ಡಮಾರ್ ಅನಿಸಿಬಿಟ್ಟಿರೋರು. ಕಳ್ಳರಲ್ಲೂ, ದರೋಡೆಕಾರರಲ್ಲೂ ಕೆಲವರು ಒಳ್ಳೆಯವರಿರ್ತಾರೆ ಅನ್ನೋದಿಕ್ಕೆ ಇವನೇ ಸಾಕ್ಷಿ'' ಅಂದ.

ಆನಂದ "ನಾಗೇಶ ಅಲ್ನೋಡು, ಟೆಲಿಫೋನ್ ವೈರ್ ಕಟ್ ಆಗಿದೆ. ಇಷ್ಟ್ ಹೊತ್ತೂ ಯಾರ ಹತ್ರ ಮಾತಾಡ್ತಿದ್ದೆ'' ಅಂತ ಮೂಲೆ ತೋರಿಸಿದ.

ಕುರ್ಚಿಗೆ ಸಿಕ್ಕ ವೈರ್ ಕಟ್ ಆಗಿತ್ತು. ಆತಂಕದಿಂದ ಪುನಃ ರಿಸೀವರ್ ತೆಗೆದು ಕಿವಿಗಿಟ್ಟುಕೊಂಡ. ಏನೂ ಶಬ್ದ ಬರಲಿಲ್ಲ. ವೈರ್ ಕಟ್ ಆಗಿದ್ದು ಯಾವಾಗಾಂತ ಗೊತ್ತಾಗ್ಲಿಲ್ಲ.

ನಾಗೇಶ ಇಬ್ಬರತ್ತಲೂ ಅಚ್ಚರಿಯಿಂದ ನೋಡಿದ.

ಚಂದ್ರು, ಆನಂದ ಇವನತ್ತಲೇ ನೋಡುತ್ತಿದ್ದರು.

"ಒಟ್ನಲ್ಲಿ ನಾನು ಮಾತಾಡುವಾಗ ತೊಂದ್ರೆ ಆಗ್ಲಿಲ್ಲ. ನನ್ ಹೆಂಡ್ತಿ ಮಲಗಿದ್ಲಂತೆ, ನಾನೇ ಎಬ್ಬಿಸ್ಬೇಡ ಅಂದೆ. ನಿದ್ದೆ ಮಾಡ್ತಿದ್ದಾಳೆ ಅಂದ್ರೆ ಊಟ ಆಗಿರ್ಬೇಕು. ಊಟ ಆಗಿದೇಂದ್ರೆ ಸ್ವಲ್ಪ ನೆಮ್ಮದಿಯಿಂದ ಇರ್ಬೇಕು ಅಲ್ವೇನಯ್ಯ'' ಅಂದ.

ಅವರಿಬ್ಬರೂ ಮಾತಾಡಲಿಲ್ಲ.

ಆನಂದ ಚಂದ್ರು ಕಿವೀಲಿ,

"ಇದು ಸ್ಕ್ರೂ ಲೂಸು ಕೇಸೇ, ವೈರ್ ಕಟ್ ಆಗಿದೆ ರಿಸೀವರ್ ಹಿಡ್ಕೊಂಡು ಅವನತ್ರ ಮಾತಾಡ್ದೆ, ಇವನತ್ರ ಮಾತಾಡ್ದೆ ಅಂದ್ರೆ ನಂಬೋಕ್ಕೆ ಆಗುತ್ತ'' ಅಂದ.

ಚುರುಕು ಕಿವಿಯ ನಾಗೇಶ,

"ಹೌದಯ್ಯ ಹೌದು, ನಂಗೆ ಹುಚ್ಚು ಹಿಡಿದಿದೆ. ಏನ್ ಮಾಡ್ತೀಯ ನಾನು ಹುಚ್ಚನೇ ಕಣಯ್ಯ. ಈ ಹುಚ್ಚನ ಮನೆಗೆ ಬಂದಿರೋನು ನೀನೆಂಥಾ ಹುಚ್ಚ ಹೇಳು. ಎಲ್ರೂ ನಿನ್ನ ಹಾಗೇ ಥಿಂಕ್ ಮಾಡೋದು. ನಿನ್ ಕೆಲಸ ಆಗಿದ್ರೆ ಹೊರಡು ಇಲ್ಲಿಂದ'' ಅಂದ.

"ಹಾಗಲ್ಲ ಕಣೋ'' ಅಂತ ಆನಂದ ವಿವರಿಸೋಕೆ ಪ್ರಯತ್ನ ಮಾಡ್ದಾಗ "ಏನೂ ಬೇಕಿಲ್ಲಯ್ಯ. ಈ ಹುಚ್ಚನ ಜೊತೆ ನಿಮ್ದೇನು ವ್ಯವಹಾರ ಹೊರಡಿ ಇಲ್ಲಿಂದ'' ಅಂದ ನಾಗೇಶ.

ಚಂದ್ರು, ಆನಂದ ಒಂದು ಕ್ಷಣ ಸುಮ್ಮನೆ ಕೂತರು.

"ನೀವು ಹೀಗೇ ಕೂತಿದ್ರೆ ಕುತ್ತಿಗೆ ಹಿಡಿದು ಹೊರಗೆ ದಬ್ಬಬೇಕಾಗುತ್ತೆ ಪ್ಲೀಸ್ ಗೆಟ್ ಔಟ್'' ಅಂತ ಗಟ್ಟಿಯಾಗಿ ಕಿರುಚಿದ.

ಚಂದ್ರು ಪರಿಸ್ಥಿತೀನ ಅರ್ಥ ಮಾಡ್ಕೊಂಡು ಅಲ್ಲಿಂದ ಎದ್ದ. ಆನಂದ ಹಿಂಬಾಲಿಸಿದ. ಅವರಿಬ್ಬರೂ ಹೋದದ್ದೇ ತಡ ರಪಾರೆಂದು ಬಾಗಿಲು ಹಾಕಿದ. ನಾಗೇಶ.

* * * * *

ಬೆಳಿಗ್ಗೆ ಆಫೀಸಿಗೆ ಬಂದಾಗ ನಾಗೇಶ ಗಂಭೀರವಾಗಿದ್ದ. ಹಿಂದಿನ ದಿನ ಏನೂ ನಡೆದೇ ಇಲ್ಲ ಅನ್ನುವಂತೆ ಆನಂದ "ಗುಡ್ ಮಾರ್ನಿಂಗ್ ನಾಗೇಶ್'' ಅಂದ. ನಾಗೇಶನೂ ಗುಡ್ ಮಾರ್ನಿಂಗ್ ಹೇಳಿದ.

ನಾಗೇಶ ಎಂದಿನಂತೆ ಕೆಲಸದಲ್ಲಿ ಮಗ್ನನಾಗಿದ್ದರೂ ಎಲ್ಲರಿಗೂ ಅವನಲ್ಲೇನೋ ವಿಚಿತ್ರ ಕಾಣಿಸುತ್ತಿತ್ತು.

ಮಧ್ಯಾಹ್ನ ಒಂದು ಸಣ್ಣ ಚೀಟಿ ನೋಡಿ ತುಂಬ ಕೋಪ ಬಂತು.

"ರೀ ಜಯಂತಿ ಬನ್ರೀ ಇಲ್ಲಿ'' ಅಂದ.

ಕೆಂಪು ಸೀರೆಯುಟ್ಟಿದ್ದ ಜಯಂತಿ ಮುಖ ಕೆಂಪಗೆ ಮಾಡ್ಕೊಂಡು ಬಂದು ಅವನ ಮುಂದೆ ನಿಂತಳು.

"ಏನ್ರೀ ಇದು'' ಅಂದು ಚೀಟಿ ತೋರಸಿದ.

"ಅದೇ ಸಾರ್ ಫೋನ್ ಮೆಸೇಜ್.''

"ಮೆಸೇಜ್ ಯಾಕ್ರೀ, ಫೋನ್ ಯಾಕ್ರೀ ಕೊಡ್ಲಿಲ್ಲ. ನಾನೇನು ಸತ್ ಹೋಗಿದ್ನೇನ್ರೀ.''

ನಾಗೇಶ ಕಿರುಚಿದ್ದಕ್ಕೆ ಇಡೀ ಆಫೀಸೇ ಅತ್ತ ಗಮನ ಹರಿಸಿತು. ಒಂದಿಬ್ಬರು ಜಯಂತಿಯ


ನಮ್ಮ ಹಣೆ ಬರಹವನ್ನು ನಾವೇ ಬರೆದುಕೊಳ್ಳುತ್ತೇವೆ. ಆದರೆ ಅದು ಗೊತ್ತಿಲ್ಲದೆ ನಾವು ಅದಕ್ಕೆ ದೈವ ಎನ್ನುತ್ತೇವೆ.

– ಶ್ರೀ ಅರವಿಂದರು

ಜೀವನವು ಒಂದು ಸಾಧನೆ, ಸತ್ಸಾಧನೆಯಿಂದ ಅದು ಸುಂದರವಾಗುತ್ತದೆ.

– ಅನುಭವಿಕ

ಸಂಗ್ರಹ : ಪರಶುರಾಮ ತಳವಾರ



ಸಹಾಯಕ್ಕೆ ಬಂದರು. "ಏನಾಯ್ತು" ರಾಮ್‌ದೇವ್ ಕೇಳಿದರು.

"ಷಿ ಈಸ್ ಬಿಹೇವಿಂಗ್ ಟೂ ಮಚ್. ನಾನು ಇಲ್ಲೇ ಇದೀನಿ ಫೋನ್ ಕೊಡೋದು ಬಿಟ್ಟು ಮೆಸೇಜ್ ಬರ್ಕ್ಕೊಟ್ಟಿದ್ದಾಳೆ" ಅಂತ ಕಿರುಚಿದ.

"ಒಂದ್ಸಾರಿ ಫೋನ್ ಕೊಡೂಂತಾರೆ, ಇನ್ನೊಂದ್ಸಾರಿ ಕೊಡ್ಬೇಡಾಂತಾರೆ. ನಾನೇನು ಮಾಡ್ಲಿ ಸಾರ್. ಈ ಫೋನ್ ಬಂದಾಗ ಅವರು ಸೀಟಲ್ಲಿರ್ಲಿಲ್ಲ."

"ಸೀಟನಲ್ಲಿರ್ದೆ ಮರದ ಮೇಲಿದ್ನೇನ್ರೀ. ಮಾತಾಡೋಕ್ಕೆ ಒಂದು ಲಕ್ಷಣ ಬೇಕು, ಹೋಗ್ರೀ ನಿಮ್ ಕೆಲಸ ನೋಡ್ರೀ."

ಚಂದ್ರು ಹತ್ತಿರ ಬಂದು, "ಒಂದು ಫೋನ್ ಮೆಸೇಜ್‌ಗೆ ಯಾಕೋ ಇಷ್ಟೊಂದು ರಾದ್ಧಾಂತ ಮಾಡ್ತೀಯ, ಏನೋ ಮರ್ತಿರ್ತಾಳೆ" ಅಂದ.

"ಹೌದಪ್ಪ ಹೌದು. ತಳ್ಳಗೆ, ಬೆಳ್ಳಗೆ ದುಂಡು ದುಂಡಗೆ ಇದ್ದಾಳೇಂತ ಅವಳಿಗೆ ಸಪೋರ್ಟ್ ಮಾಡು. ನಂಗೆ ಹುಚ್ಚ ಅಂತ ಬಿರುದು ಕೊಟ್ಟು ನೆಗ್ಲೆಕ್ಟ್ ಮಾಡು, ನಿನ್ನ ಸ್ನೇಹ ಯಾರಿಗೆ ಬೇಕು ಹೋಗಯ್ಯ."

"ನಿಂಗೆ ಬೇಡ್ದಿದ್ರೂ ನಂಗೆ ಬೇಕಯ್ಯ, ಐ ವಾಂಟ್ ಯುವರ್ ಫ್ರೆಂಡ್‌ಶಿಪ್. ಈಚೀಚೆಗೆ ನೀನು ಎಲ್ಲರ ದೃಷ್ಟಿಗೂ ಬೀಳ್ತಿದೀಯ" ಅಂತ ಸಮಾಧಾನ ಮಾಡಿದ ಚಂದ್ರು.

ಜವಾನ ಬಂದು ನಾಗೇಶನನ್ನು ಸಾಹೇಬರು ಕರೀತಿದಾರೆ ಅಂತ ತಿಳಿಸಿದ.

ನಾಗೇಶ ಕ್ರಾಪು ಸರಿ ಮಾಡಿಕೊಂಡು ಸಾಹೇಬರ ಕೋಣೆಗೆ ಹೋದ.

೫

ರಾಮ್ ಅಂಡ್ ರಾಮ್ ಡಿಟೆಕ್ಟೀವ್ ಏಜೆನ್ಸಿ ಅನ್ನೋ ಬೋರ್ಡ್ ನೋಡುತ್ತಾ ಒಂದು ಹರಕು ಪೈಜಾಮ, ಜುಬ್ಬ ತೊಟ್ಟ ಭಿಕ್ಷುಕ ನಿಂತಿದ್ದ.

ಬಾಯಲ್ಲಿದ್ದ ಸಿಗರೇಟು ಬಿಸಾಕಿ ಕಾಲಲ್ಲಿ ಹೊಸಕಿದ ಹವಾಯ್ ಚಪ್ಪಲಿ ಶಬ್ದ ಮಾಡಿಸಿಕೊಂಡು ನಡೆದ.

ಗೇಟ್‌ನಲ್ಲಿ ನಿಂತಿದ್ದ ಸಮವಸ್ತ್ರದವನು ಭಿಕ್ಷುಕನನ್ನೇ ನೋಡಿದ.

ಗೇಟ್ ಬಳಿ ನಿಂತು ಅವನನ್ನು ತಡೆದ.

"ಏಯ್ ನಿಂತ್ಕೊ ಅಲ್ಲಿ. ಭಿಕ್ಷೆ ಬೇಡೋಕೆ ನೇರವಾಗಿ ಒಳಗೆ ಹೋಗ್ತಿದ್ಯಲ್ಲ."

"ಭಿಕ್ಷೆ ಬೇಡೋಕೆ ಅಲ್ಲಪ್ಪ. ಗಣೇಶ್ ರಾಮ್ ಅವರನ್ನ ನೋಡ್ಬೇಕಿತ್ತು."

"ಅವರ್ಹತ್ರ ನಿಂಗೇನು ಕೆಲಸ."

"ಕೆಲಸ ಇದೆ. ಅವರಿಂದ ಒಂದು ಸಹಾಯ ಆಗ್ಬೇಕು. ಅದಿಕ್ಕೆ ಬಂದೆ, ಭಿಕ್ಷೆ ಬೇಡೋಕಲ್ಲಪ್ಪ" ಅಂದು ಜೋಬಿನಿಂದ ತನ್ನ ಕಾರ್ಡ್ ತೆಗೆದು ತೋರಿಸಿದ.

ಕಾರ್ಡು ಓದ್ಕೊಂಡು ವಾಚ್‌ಮನ್ ಅಚ್ಚರಿಯಿಂದ "ಮತ್ತೆ ಈ ವೇಷ" ಅಂದ.

"ಅನಿವಾರ್ಯ, ವೇಷ ಹಾಕ್ಕೋಬೇಕು. ಒಂದ್ಕೆಲಸ ಮಾಡು. ನಾನಿಲ್ಲೇ ನಿಂತಿರ್ತೀನಿ. ನೀನು

ಗಣೇಶ್‌ರಾಮ್‌ಗೆ ಹೋಗಿ ಕಾರ್ಡು ತೋರಿಸಿ ಅವರ ಪರ್ಮಿಷನ್ ತಗೊಂಡ್ಬಾ. ಒಂದು ವೇಳೆ ಅವರು ಬಿಸಿಯಾಗಿದ್ರೆ ನಾನು ಯಾವಾಗ ಬಂದು ಅವರನ್ನ ನೋಡಬಹುದು ಕೇಳ್ಕೊಂಡ್ಬಾ'' ಅಂದ.

ವಾಚ್‌ಮನ್ ಒಳಗೆ ಹೋಗಿ ಬಂದು,

"ಹೋಗಿ, ಈಗ್ಲೇ ನೋಡ್ತಾರಂತೆ'' ಅಂದ.

"ತುಂಬಾ ಥ್ಯಾಂಕ್ಸ್'' ಅಂದು ಅವರು ಒಳಗೆ ಹೋದ.

ಗಣೇಶ್‌ರಾಮ್ ಫೋನ್ ಅಟೆಂಡ್ ಮಾಡಿ ಒಂದು ಫೈಲ್‌ನತ್ತ ಗಮನ ಹರಿಸಿದ್ರು.

"ನಮಸ್ಕಾರ ಸಾರ್.''

ಗಣೇಶ್‌ರಾಮ್ ತಲೆಎತ್ತಿ "ನಮಸ್ಕಾರ ನಾಗೇಶ್ ಬನ್ನಿ ಬನ್ನಿ'' ಅಂದರು.

ನಾಗೇಶ ಒಳಗೆ ಹೋಗಿ ಗಣೇಶ್‌ರಾಮ್ ತೋರಿಸಿದ ಕುರ್ಚೀಲಿ ಕೂತ.

ಗಣೇಶ್‌ರಾಮ್ ನಗುತ್ತಾ "ನಿಮ್ ವೇಷ ಚನ್ನಾಗಿದೆ. ನನ್ಹತ್ರ ಎಷ್ಟೋ ಜನ ಸಮಸ್ಯೆಗಳನ್ನ ತಗೊಂಡು ಬರ್ತಾರೆ. ಆದ್ರೆ ಈ ಥರ ವೇಷ ಮರೆಸ್ಕೊಂಡು ಬರೋರ್‍ನ ನೋಡಿಲ್ಲ. ಇರ್ಲಿ ವಿಷಯಕ್ಕೆ ಬನ್ನಿ. ನನ್ನಿಂದ ಏನು ಸಹಾಯ ಆಗ್ಬೇಕು'' ಅಂತ ಕೇಳಿದರು.

"ನನ್ ಹೆಂಡ್ತೀನ ಹುಡುಕ್ಕೊಡಬೇಕು ಸಾರ್.''

"ಆಗ್ಲಿ ಧಾರಾಳವಾಗಿ. ನಾವಿರೋದೇ ಹುಡುಕೋ ಕೆಲಸ ಮಾಡೋಕೆ. ಪ್ರಾಬ್ಲಮ್ ಏನೂಂತ ಹೇಳಿ. ನಿಮ್ ಹೆಂಡ್ತಿ ಯಾವಾಗಿಂದ ಕಾಣಿಸ್ತಿಲ್ಲ. ಏನು ತಾಪತ್ರಯ, ಹಾಗೇಅವರ ಫೋಟೋ ಏನಾದ್ರೂ ತಂದಿದೀರ.''

"ಫೋಟೋ ತಂದಿಲ್ಲ'' ಅಂದು ಪೂರಾ ವೃತ್ತಾಂತವನ್ನು ತಿಳಿಸಿದ ನಾಗೇಶ.

ಗಣೇಶ್‌ರಾಮ್ ತದೇಕಚಿತ್ತದಿಂದ ನಾಗೇಶನನ್ನು ನೋಡಿ ಅವನು ಹೇಳಿದ್ದನ್ನು ನೋಡಿ ಅಚ್ಚರಿ ಹೊಂದಿದರು.

"ಅಂದ್ರೆ ನಿಮ್ ಹೆಂಡ್ತಿ ಅಪಘಾತದಲ್ಲಿ ಸತ್‌ಹೋದ್ರೆ. ಅವರನ್ನ ನೀವೇ ಸಂಸ್ಕಾರ ಮಾಡಿದ್ರಾ. ಮತ್ತೆ ಆಕೆ ಬದುಕಿರೋದಾದ್ರೂ ಹೇಗೆ ಸಾಧ್ಯ'' ಅಂತ ಪ್ರಶ್ನಿಸಿದರು.

"ಅದೇ ನಂಗೂ ಅರ್ಥ ಆಗ್ಲಿಲ್ಲ ಸಾರ್. ಆದ್ರೆ ಫೋನಲ್ಲಿ ಅವಳ ಧ್ವನಿ ಕೇಳಿದಾಗ ಮಾತ್ರ ನಂಬಲೇಬೇಕಾಯ್ತು.''

"ಓಕೆ. ಸ್ವಲ್ಪ ಪ್ರಾಕ್ಟಿಕಲ್ ಆಗಿ ಯೋಚ್ನೆ ಮಾಡೋಣ. ಆಕ್ಸಿಡೆಂಟ್ ಹೇಗಾಯ್ತು?''

"ರಾಜು ರಾತ್ರಿ ಹೊತ್ತು ಸೂರ್ಯ ಯಾಕೆ ಕಾಣ್ಸಲ್ಲಾ?''

"ಚಂದ್ರನೇ ತಿಂಗಳಿಗೊಂದು ಸಲ ಅಮಾವಾಸ್ಯೆ ಅನ್ನೋ ನೆಪ ಹೇಳಿ ಡ್ಯೂಟಿ ಟೈಮ್ನಲ್ಲೇ ಆಬ್ಸೆಂಟ್ ಆಗೋವಾಗ ಬೆಳಗ್ಗಿನಿಂದ ಸಂಜೆವರ್ಗೂ ಡ್ಯೂಟಿ ಮಾಡೋ ಸೂರ್ಯ ರಾತ್ರಿ ಹೇಗೆ ಕಾಣಿಸಕ್ಕಾಗುತ್ತೆ ಸಾರ್.''

—ವಿ. ಎಸ್. ಶ್ರೀನಿವಾಸ ಪ್ರಸನ್ನ



"ಹೆಂಗೇಂತ್ಲೇ ನಂಗೊತ್ತಿಲ್ಲ. ಅವಳು ನಡೆಸ್ತಿದ್ದ ಲೂನ ಇನ್ನೊಂದು ವಾಹನಕ್ಕೆ ಡಿಕ್ಕಿ ಹೊಡೀತಂತೆ. ನಂಗೆ ವಿಚಾರ ತಿಳಿದಾಗ ಅವಳ ಶರೀರವನ್ನು ಆಸ್ಪತ್ರೆಗೆ ಸಾಗಿಸಿದ್ದರು. ಪೋಸ್ಟ್‌ಮಾರ್ಟಂ ಆಯ್ತು. ಶರೀರ ತಗೊಂಡ್ ಹೋಗಿ ಸಂಸ್ಕಾರ ಮಾಡಿದ್ದಾಯ್ತು.''

"ಮತ್ತೆ ಈಗ ಆಕೆ ಬದುಕಿರೋದು ಹೇಗೆ ಸಾಧ್ಯ?''

"ಅದನ್ನ ಪತ್ತೆ ಮಾಡಿ ಅಂತ ನಿಮ್ಮನ್ನ ರಿಕ್ವೆಸ್ಟ್ ಮಾಡ್ಕೊಳೋಕೆ ಬಂದಿದೀನಿ.''

"ಒಂದ್ನಿಮಿಷ ಬಂದೆ'' ಅಂದು ಹೊರಗೆ ಬಂದು ರಿಸೆಪ್ಷನಿಸ್ಟ್ ರೀಟಳನ್ನು ಕರೆದು,

"ರೀಟ ಈ ಫೋನ್ ನಂಬರ್‌ಗೆ ಡಯಲ್ ಮಾಡಿ ನಾಗೇಶ ಅನ್ನೋ ವ್ಯಕ್ತಿ ಅಲ್ಲಿ ಕೆಲಸ ಮಾಡ್ತಿದಾರಾ, ಮಾಡ್ತಿದ್ರೆ ಅವರ ಸ್ಥಿತಿಗತಿ ಹೇಗಿದೆ ಅಂತ ವಿಚಾರಿಸಿ. ಆಸ್ಕ್ ದೆಮ್ ಟು ಕೀಪ್ ಆಲ್ ದ ಮ್ಯಾಟರ್ ಕಾನ್ಫಿಡೆನ್‌ಷಿಯಲ್'' ಅಂದ್ರು.

"ಓಕೆ ಸಾರ್'' ಅಂದಳು ರೀಟ.

ಮತ್ತೆ ಒಳಗೆ ಬಂದ ಗಣೇಶ್‌ರಾಮ್ "ಹೇಳಿ'' ಅಂದರು.

"ಆಮೇಲೆ ಆ ಫೋನ್ ವಿಚಾರ ಸಾರ್. ಎರಡು ದಿನಕ್ಕೆ ಒಂದ್ಸಾರಿ ಫೋನ್ ಮಾಡ್ತಾನೆ. ಲಕ್ಷ ರೆಡಿ ಮಾಡ್ದ್ಯ ಅಂತ ಕೇಳ್ತಾನೆ. ನಂಗೆ ಸ್ವಲ್ಪ ಟೈಮೂ ಕೊಟ್ಟಿದಾನೇನ್ನಿ. ಆಮೇಲೆ ಅವನು ನಂಗೆ ಹೆದರ್ಸಿದಾನೆ, ಪೋಲೀಸು, ಪತ್ತೇದಾರರು ಅಂತ ಹೋದೀಯ ಅಂತ. ಅದಿಕ್ಕೆ ಈ ವೇಷ ಹಾಕ್ಕೊಂಡ್ ಬಂದೆ'' ಅಂದ ನಾಗೇಶ.

ರೀಟ ಹೈಹೀಲ್ಡ್ ಶಬ್ದ ಮಾಡಿಕೊಂಡು ಬಂದಳು. ಬಿಳುಪಾದ ಅವಳ ಹೊಕ್ಕಳಿನ ಭಾಗವನ್ನು ರೆಪ್ಪೆಯಾಡಿಸದೆ ನೋಡಿದ ನಾಗೇಶ.

ಗಣೇಶ್‌ರಾಮ್‌ಗೆ ಒಂದು ಚೀಟಿ ಕೊಟ್ಟಳು. ಅದರಲ್ಲಿ 'ನಾಗೇಶ್ ಅನ್ನೋರು ಆ ಆಫೀಸಲ್ಲಿ ಕೆಲಸ ಮಾಡ್ತಿದಾರೆ. ಒಂದು ತಿಂಗಳಿನ ಹಿಂದೆ ಅವರ ಹೆಂಡತಿ ಅಪಘಾತದಲ್ಲಿ ತೀರ್ಕೊಂಡಿದಾರೆ. ಅದೇ ಗುಂಗಿನಲ್ಲಿರೋ ನಾಗೇಶ ಇತ್ತೀಚೆಗೆ ಮಾನಸಿಕವಾಗಿ ಅಸ್ವಸ್ಥರಾಗಿದ್ದಾರೆ. ಲಕ್ಷ ಕೊಟ್ರೆ ಹೆಂಡ್ತಿ ಸಿಕ್ತಾಳೆ ಅಂತ ಹೇಳ್ತಿರ್ತಾರೆ' ಅಂತ ಬರೆದಿತ್ತು.

ಅದನ್ನು ಓದಿಕೊಂಡ ಗಣೇಶ್‌ರಾಮ್ "ಓ.ಕೆ. ರೀಟ, ಆಮೇಲೆ ನಾಗೇಶ್‌ಗೆ ಕಾಫಿನೋ, ಕೂಲ್ ಡ್ರಿಂಕ್ಸೋ ತಂದ್ಕೊಡು'' ಅಂದರು.

"ಸಿಗರೇಟ್'' ಅಂದು ಗಣೇಶ್‌ರಾಮ್ ಮುಂದೆ ಪ್ಯಾಕ್ ಹಿಡಿದ ನಾಗೇಶ.

ಸಿಗರೇಟ್ ಸೇದಿ ಹೊಗೆ ಬಿಡ್ತಾ "ಹೇಳಿ ನಾನು ಯಾವ ರೀತಿ ಸಹಾಯ ಮಾಡಬಹುದು'' ಅಂತ ಗಣೇಶ್‌ರಾಮ್ ಕೇಳಿದರು.

"ಏನಾದ್ರೂ ಮಾಡಿ ನಂಗೆ ನನ್ನ ಹೆಂಡ್ತೀನ ದೊರಕಿಸಿಕೊಡಿ ಸಾರ್. ನಾನು ಲಕ್ಷ ರೂಪಾಯಿ ಹೊಂದಿಸ್ತೀನಿ. ನೀವೇ ಹೇಳಿ ಲಕ್ಷ ಹೆಚ್ಚೋ, ಹೆಂಡ್ತಿ ಹೆಚ್ಚೋ.''

"ನಿಮಗೆ ಫೋನು ಮಾಡ್ದೋನು ಏನು ಹೇಳ್ದ.''

"ಅದೇ ಒಂದು ಲಕ್ಷ ಕೊಟ್ರೆ ಹೆಂಡ್ತೀನ ಕೊಡ್ತೀನಿ. ಮತ್ತೆ ಆ ಹಣಾನ ರಾಕ್ ಮೆಮೋರಿಯಲ್ ಹತ್ರ ತಂದ್ಕೊಡ್ಬೇಕು ಯಾರ್ಗೂ ಹೇಳ್ಬಾರ್ದು ಅಂತ ಮೊದಲನೇ ದಿನ ಹೇಳಿದ್ದ. ಅವತ್ತು ಅವನು ಹೇಳಿದ್ದನ್ನು ಔಟ್‌ರೈಟ್ ಆಗಿ ರಿಜೆಕ್ಟ್ ಮಾಡಿದ್ದೆ. ಆದ್ರೆ ಅವನು ಎರಡು ದಿನಕ್ಕೊಂದ್ಸಾರಿ ಫೋನ್ ಮಾಡಿ ಅದೇ ವಿಚಾರ ಹೇಳ್ತಿದ್ದ. ನನ್ ಹೆಂಡ್ತೀನ ಅವನು ಹಿಡಿದಿಟ್ಕೊಂಡಿದಾನೆ ಅನ್ನೋದಿಕ್ಕೆ ಅವತ್ತು ನನ್ ಹೆಂಡ್ತಿಗೇ ಫೋನ್ ಕೊಟ್ಟ. ನಾನೇ ಆಕೆ ಜೊತೆ

ಮಾತಾಡ್ದೆ. ಪಾಪ ಎಷ್ಟು ಗಾಭರೀಲಿದಾಳೇಂತೀರಾ. ನೋಡಿ ಸಾರ್ ಒಂದು ಲಕ್ಷ ಕೊಡೋದು ಹೆಚ್ಚಲ್ಲ. ಆಕೇನ ಉಪಾಯವಾಗಿ ಕರ್ಕೊಂಡ್ ಬರೋದು ಮುಖ್ಯ. ಅದಿಕ್ಕೆ ಹಣಾನ ಕೊಡೋದು ಮುಖ್ಯವಲ್ಲ. ನಂಗೆ ಮೋಸವಾಗಬಹುದು ಅನ್ನೋ ಅನುಮಾನ. ಅದಿಕ್ಕೆ ನಿಮ್ಮ ಸಹಾಯ ಬೇಡಿ ಬಂದಿದೀನಿ. ಇನ್ನೊಂದು ಬೇಜಾರಿನ ವಿಷಯ ಸಾರ್.''

"ಬೇಜಾರಿನ ವಿಷಯವೇ, ಏನದು?''

"ನಂಗೆ ಫೋನ್ ಬರ್ತಿರೋದು, ನಾನು ಹೆಂಡ್ತಿ ಜೊತೆ ಮಾತಾಡಿದ್ದೆ ಅನ್ನೋದು, ಒಂದು ಲಕ್ಷ ರೂಪಾಯಿ ಹೊಂದಿಸ್ತಿರೋದು ಎಲ್ಲ ತಮಾಷೆಯಾಗಿ ಕಾಣ್ತಿದೆ. ಯಾರೂ ಅದನ್ನು ನಂಬ್ತಾನೇ ಇಲ್ಲ. ಅಲ್ದೆ ನನಗೆ ಹುಚ್ಚ ಅನ್ನೋ ಬಿರುದು ಕೊಟ್ಟಿದಾರೆ. ಮೊನ್ನೆ ನಮ್ಮ ಮಾವ ಅಂದ್ರೆ ಭಾವ, ಮಾವ ಭಾವ ಎಲ್ಲ ಅವರೇ ಬಿಡಿ. ಅವರೂ ಕೂಡ ನನ್ನನ್ನ ಹುಚ್ಚ ಅಂತ ತೀರ್ಮಾನ ಮಾಡಿ ಒಬ್ಬ ಸೈಕ್ಯಾಟ್ರಿಸ್ಟ್‌ಗೂ ಬರಹೇಳಿದ್ರು. ಆಮೇಲೆ ನಾನೇ ಅವರನ್ನ ತರಾಟೆಗೆ ತಗೊಂಡೆ. ನೀವು ಹೇಳಿ ಸಾರ್ ನಮ್ಮೋರು ತಮ್ಮೋರೂನ್ನೋರು ಹಾಗೆ ಮಾಡಬಹುದಾ?''

ರೀಟ ತಾನೇ ಕೂಲ್‌ಡ್ರಿಂಕ್ಸ್ ತಂದುಕೊಟ್ಟಳು. ಮತ್ತೊಮ್ಮೆ ಅವಳ ಹೊಕ್ಕಳಿನ ಭಾಗ ನೋಡಿ "ಹಲೋ'' ಅಂದ ನಾಗೇಶ.

"ಹಲೋ ಸಾರ್'' ಅಂದು ನಕ್ಕಳು ರೀಟ.

"ತಗೊಳ್ಳಿ ನಾಗೇಶ್. ಮುಂದಕ್ಕೇನಾಯ್ತು ಹೇಳಿ.''

"ಅಷ್ಟಾದ್ ಮೇಲೆ ನನ್ನ ಕೊಲೀಗ್ಸ್ ಸರದಿ. ಅವರೂ ಕೂಡಾ ವಿಚಿತ್ರವಾಗಿ ನೋಡೋಕೆ, ವಿಚಿತ್ರವಾಗಿ ನಡ್ಕೋಳೋಕೆ ಪ್ರಾರಂಭ ಮಾಡಿದಾರೆ. ನಾನು ಯಾರ್ಗೂ ಕೇರ್ ಮಾಡ್ತಿಲ್ಲ. ಲೆಫ್ಟ್ ಅಂಡ್ ರೈಟ್ ತರಾಟೆಗೆ ತಗೋತಾ ಇದೀನಿ. ಸೀ ದೇ ಶುಡ್ ಬಿಹೇವ್ ದೆಮ್ ಸೆಲ್ವ್‌ಸ್ ಅಲ್ವೆ?'' ಅಂದು ಸ್ಟ್ರಾದಿಂದ ಕೂಲ್‌ಡ್ರಿಂಕ್ಸ್ ಹೀರಿ ಇನ್ನೊಂದು ಸಿಗರೇಟ್ ಹಚ್ಚಿದ.

ಗಣೇಶ್‌ರಾಮ್ ಯೋಚಿಸುತ್ತಾ ಕೂತರು.

ನಾಗೇಶ ಮುಂದುವರಿಸಿದ.

"ನಮ್ ಸಾಹೇಬ್ರು ನಂಗೆ ಹುಚ್ಚೇ ಹಿಡಿದಿದೆ ಅಂತ ಎಷ್ಟ್ ಬೇಕೋ ಅಷ್ಟು ರಜ ಕೊಡೋಕೆ

ಪ್ರಾರಂಭ ಮಾಡಿದ್ರು. ನಂಗೇನೂ ಆಗಿಲ್ಲಂತ ಪ್ರೂವ್ ಮಾಡ್ದೆ ಅಂದ್ಕೊಳಿ. ಆಮೇಲೆ ಲೋನ್ ಕೊಡಿ ಅಂದ್ರೆ ಇಲ್ಲ ಅಂದ್ ಬಿಟ್ರು. ಸಹಾಯ ಮಾಡ್ಬೇಕು ಅನ್ನೋ ಐಡಿಯಾ ಯಾರ್ಗೂ ಇಲ್ಲ ಬಿಡಿ. ಆದಿಕ್ಕೆ ನಂಗೆ ಯಾರ ಮರ್ಜಿನೂ ಬೇಡ. ನೇರ ನಿಮ್ಮಲ್ಲಿಗೆ ಬಂದೆ. ನಂಗೇನು ಹೇಳ್ ಬೇಕೂಂತ ಹೇಳ್ತೀನಿ. ನಿಮ್ಮ ಫೀಸ್ ತಗೋಳಿ ನನ್ನ ಕೆಲಸ ಮಾಡ್ಕೊಡಿ'' ಅಂದ.

ನಿಟ್ಟುಸಿರುಬಿಟ್ಟ ಗಣೇಶ್‌ರಾಮ್ "ಆಯ್ತು ನಾಗೇಶ್. ನಾವೆ ಬರ್‍ತಾ ನಿಮ್ ಹೆಂಡ್ತಿ ಫೋಟೋ ತಂದ್ಕೊಡಿ. ಆಕೆಯ ಬಂಧುಬಳಗದ ವಿಳಾಸವೆಲ್ಲ ಕೊಡಿ. ನಮ್ಮ ಕೆಲಸ ಪ್ರಾರಂಭ ಮಾಡಿಬಿಡೋಣ'' ಅಂದರು.

ಆನಂದದಿಂದ "ತುಂಬಾ ಥ್ಯಾಂಕ್ಸ್ ಸಾರ್. ನಾನು ಹಣಕ್ಕೆ ಏರ್ಪಾಟು ಮಾಡಿದೀನಿ. ಇವತ್ತೋ ನಾಳೆನೋ ಅವನು ಫೋನ್ ಮಾಡಬಹುದು. ಅವಾಗ ಹಣ ಎಲ್ಲಿ ತಂದ್ಕೊಡ್ಬೇಕು, ಏನೂಂತ ಕೇಳ್ತೀನಿ. ಆಮೇಲೆ ನಾವೇನು ಮಾಡ್ಬೇಕು ಅನ್ನೋದನ್ನ ನಿರ್ಧಾರ ಮಾಡೋಣ'' ಅಂದ ನಾಗೇಶ.

"ಆಯ್ತು ಹೋಗಿ ಬನ್ನಿ.''

"ಸ್ವಲ್ಪ ನಿಮ್ಮ ವಾಚ್‌ಮನ್ ಕರೀರಿ ಸಾರ್.''

"ಯಾಕೆ?''

"ಅವನು ನನ್ನನ್ನ ಇಲ್ಲಿಂದ ಆಚೆಗೆ ತಳ್ಳಲಿ.''

ಗಣೇಶ್‌ರಾಮ್ ಅಚ್ಚರಿಯಿಂದ "ಅದೇನು ಅಂಥಾ ಬಯಕೆ ನಿಮಗೆ'' ಅಂತ ಕೇಳಿದರು.

"ಬಯಕೆ ಅಲ್ಲ. ನಾನು ಇಲ್ಲಿ ಬಂದದ್ದು ಯಾರಿಗೂ ಅನುಮಾನ ಬರದೇ ಇರ್ಲಿ ಅಂತ'' ಅಂದಾಗ ಗಣೇಶ್‌ರಾಮ್‌ಗೆ ನಗು ಬರದೇ ಇರ್ಲಿಲ್ಲ. ನಾಗೇಶನ ಇಚ್ಛೆಯಂತೆ ಅವನನ್ನು ಹೊರಗೆ ಕಳಿಸಿದರು.

ಎಷ್ಟೋ ಹೊತ್ತು ಹಾಗೇ ಕೂತಿದ್ದೋರು ರೀಟಾನ ಕರೆದ್ರು.

"ಎಸ್ ಸರ್'' ಅಂದಳು ರೀಟ.

"ಮೋಹನ್‌ರಾಮ್ ಯಾವತ್ತು ಬರೋದು.''

"ನೆಕ್ಸ್ಟ್ ಮಂಡೇ ಸಾರ್. ಯಾಕೆ?''

"ಈಗ ಬಂದಿದ್ನಲ್ಲ ಆಸಾಮಿ. ಅವನ್ದೊಂದು ವಿಚಿತ್ರ ಕೇಸು. ಅದಕ್ಕೆ ಮೋಹನ್‌ರಾಮ್ ಇದ್ರೆ ವಾಸಿ ಅಂತ.''

"ಕೇಸು ಏನು ಸಾರ್?''

"ಏನಿಲ್ಲ, ಅವನ ಹೆಂಡ್ತಿ ಅಪಘಾತದಲ್ಲಿ ಸತ್ತುಹೋಗಿದಾಳಂತೆ. ಒಂದು ತಿಂಗಳಾಯ್ತು. ಸಂಸ್ಕಾರ, ತಿಥಿ ಎಲ್ಲ ಆಯ್ತು. ಈಗ ಒಂದು ಹತ್ತು ದಿನಗಳಿಂದೀಚೆಗೆ ಯಾರೋ ಒಬ್ಬ ಫೋನ್ ಮಾಡಿ ಲಕ್ಷ ಕೊಡು ಹೆಂಡ್ತೀನ ಕೊಡ್ತೀನಿ ಅಂತಾ ಇದಾನಂತೆ. ಇವನು ಹೇಳ್ತಾನೆ ಫೋನಲ್ಲಿ ಹೆಂಡ್ತಿ ಜೊತೆ ಮಾತಾಡ್ದೆ ಅಂತ. ಇವನ ಸ್ನೇಹಿತರು, ನೆಂಟರು, ಸಹೋದ್ಯೋಗಿಗಳು ಎಲ್ಲ ಇವನ ರೀತಿನೀತಿ ನೋಡಿ ಹುಚ್ಚ ಅನ್ನೋ ಬಿರುದು ಕೊಟ್ಟಿದಾರಂತೆ.''

"ಅಲ್ಲ ಸಾರ್ ಸತ್‌ಹೋಗಿರೋ ಹೆಂಡ್ತೀನ ತಂದ್ಕೊಡೋನು ಯಾರ್‍ಸಾರ್ ಅದು?''

"ನನಗೆ ತೋರ್‍ತಾ ಇರೋದು ಎರಡೇ ಪಾಸಿಬಲಿಟಿ. ಒಂದು ಅವನ ಹೆಂಡತಿ ವಾಸ್ತವವಾಗಿ ಸತ್ತಿಲ್ಲ. ಎರಡು, ಅವನಿಗೆ ನಿಜವಾಗಲೂ ಹುಚ್ಚು ಹಿಡಿದಿದೆ.''

"ಅಂತ ತೀರ್ಮಾನ ಮಾಡೇಬಿಟ್ರಾ."

"ತೀರ್ಮಾನ ಮಾಡಿಲ್ಲ, ಪಾಸಿಬಲಿಟಿ. ಇನ್ನೂ ಒಂದು ಛಾನ್ಸ್ ಅಂದ್ರೆ ನಾಗೇಶನಿಗೆ ತಿಳಿದಿರೋರೇ ಯಾರೋ ಅವನಿಗೆ ಮೋಸ ಮಾಡ್ತಿದಾರೆ ಅಂತ."

"ಮೋಸ ಅಂದ್ರೆ?"

"ಅಂದ್ರೆ ನಾಗೇಶನ ಹತ್ರ ತುಂಬಾ ದುಡ್ಡಿದೆ. ಅವನ ಅಕ್ಕ ಭಾವ, ಅರ್ಥಾತ್ ಅತ್ತೆ ಮಾವನತ್ರಾನೂ ತುಂಬಾ ದುಡ್ಡಿದೆ. ಇದೊಂದು ನೆವ ಮಾಡ್ಕೊಂಡು ಎಷ್ಟ್ ಸಾಧ್ಯವೋ ಅಷ್ಟು ಹಣ ಲಪಟಾಯಿಸೋಣ ಅಂತ ಉಪಾಯ ಮಾಡಿರಬಹುದು."

"ಇರಬಹುದು ಸಾರ್, ಆದರೆ ನೀವು ಹೇಳಿದ ಹಾಗೆ ಮೋಹನ್‌ರಾಮ್ ಬಂದ್ರೆ ಚೆನ್ನಾಗಿರುತ್ತೆ."

"ಬರ್ಲಿ, ಇನ್ನೊಂದೆರಡು ದಿನ ತಾನೇ" ಅಂದು ಇತರ ಫೈಲುಗಳ ಕಡೆ ಗಮನಹರಿಸಿದರು ಗಣೇಶ್‌ರಾಮ್.

೬

ಎರಡು ಮೂರು ದಿವಸಗಳಿಂದ ನಾಗೇಶ ಯಾರ ಬಳಿಯೂ ಮಾತಾಡಿರಲಿಲ್ಲ. ಚಂದ್ರು ಬಳಿಯೂ ಸಹ.

ಕೆಲವರು ತಾವಾಗಿ ಚಂದ್ರೂನ ಮಾತಾಡಿಸಿಕೊಂಡು ಬಂದಿರ್ಲಿಲ್ಲ. ನಾಗೇಶನಿಗೆ ಯಾವ ಫೋನೂ ಬರಲಿಲ್ಲವಾದ್ರಿಂದ ಜಯಂತಿ ಸೇಫ್.

ಮಧ್ಯಾಹ್ನ ನಾಗೇಶನಿಗೊಂದು ಫೋನ್ ಬಂತು. ರಘು ಫೋನ್ ಮಾಡಿದ್ದ.

"ಅಕ್ಕ ನಿಮ್ಮನ್ನ ಸಂಜೆ ಬಂದು ಹೋಗು ಅಂತ ಹೇಳಿದ್ದಾಳೆ."

"ಏನಂತೆ ವಿಷಯ?"

"ನಂಗೇನೂ ಹೇಳ್ಲಿಲ್ಲ. ಒಂದ್ ವಾರ ಆಯ್ತಲ್ಲ ನೀವು ಬಂದು, ಅದಕ್ಕಿರಬಹುದು."

"ಸರಿ ಬರ್ತೀನಿ. ಇನ್ನೇನ್ ಸಮಾಚಾರ?"


"ಏನೂ ಇಲ್ಲ ಭಾವ."

"ಓಕೆ" ಅಂದು ರಿಸೀವರ್ ಜಯಂತಿ ಕೈಗೆ ಕೊಟ್ಟು ಬಂದ.

ಹುಟ್ಟುಕಲೆ

ಗುಡಿಸಲುಗಳ ಕೊಂಪೆಯಲ್ಲಿ
ಉಲಿದಿತ್ತು ಅಪೂರ್ವ ಕೋಗಿಲೆ
ನಗರದ ಸಂಗೀತ ಶಾಲೆಯಲ್ಲಿ
ಅರಚಿದ್ದವು ಬರೀ ಗಾರ್ಧಭಗಳೇ!

— ದೊಡ್ಡರಂಗೇಗೌಡ



ಸಂಜೆ ಕಾಂತಮ್ಮ ಇವನನ್ನೇ ಕಾಯುತ್ತಿದ್ದರು. "ಬಾರೋ ಎಷ್ಟ್ ದಿವಸ ಆಯ್ತು ಬಂದು'' ಅಂದರು.

ಒಂದೆರಡು ಅಪರಿಚಿತ ಮುಖಗಳು ಮನೇಲಿ ಕಂಡವು.

ಗುರುಬಸಪ್ಪ ಹೊಸಬರನ್ನು ಪರಿಚಯ ಮಾಡಿಕೊಟ್ಟರು.

"ಇವರು ನಾಗಲಿಂಗಸ್ವಾಮಿ ಅಂತ. ಎರಡು ರೈಸ್‌ಮಿಲ್ ಇದೆ. ಹೊಲಗದ್ದೆ ಇದೆ. ಅವರ ಪತ್ನಿ ಗೌರಮ್ಮ ಅಂತ.''

"ನಮಸ್ಕಾರ'' ಅಂದ ನಾಗೇಶ.

ಒಳಗೆ ಹೋದ ನಾಗೇಶ "ಇವರೆಲ್ಲ ಯಾರು, ಯಾಕೆ ಬಂದಿದಾರೇ?'' ಕೇಳ್ದ.

"ಸಂಬಂಧ ಬೆಳೆಸೋಕೆ ಬಂದಿದಾರೆ.''

"ಸಂಬಂಧ?''

"ಹೌದು ಕಣೋ. ಅವರ ಒಬ್ಬಳೇ ಮಗಳು ಚಂದ್ರಿಕಾನ ನಿಂಗೆ ಕೊಡೋಣಾಂತ.''

"ನಂಗೆ... ಚಂದ್ರಿಕಾ...'' ಅಂದು ನಕ್ಕ ನಾಗೇಶ. "ಅಲ್ಲಕ್ಕ ನಿನ್ನ ಮಗಳ ತಲೆ ಮೇಲೆ ನೀನೇ ಕಲ್ಲು ಎಳೀಬೇಕು ಅಂತಿದ್ದೀಯ'' ಅಂತ ಕೇಳಿದ.

"ಇನ್ನೆಲ್ಲಿ ಮಗಳೋ ನಾಗೇಶ, ನೀನು ಹಾಗೆಲ್ಲ ಮಾತಾಡೋದು ಬಿಡು. ಒಂದ್ಕೆಲಸ ಮಾಡು. ಚಂದ್ರಿಕಾನ ನೋಡು, ಇವಾಗಲ್ದಿದ್ರೆ ಇನ್ನೊಂದೆರಡು ತಿಂಗಳಾಗ್ಲಿ. ನಿಂಗೆ ಒಂಟಿತನ ಕಾಡ್ತಿರೋದ್ರಿಂದ ಹೀಗಾಗ್ತಿದೆ. ಬೇಗ ಇನ್ನೊಂದು ಮದುವೆ ಮಾಡಿ ಅಂತ ಜೋಯಿಸರು ಹೇಳಿದ್ರು. ಅದಕ್ಕೆ ಇದೊಂದು ಪ್ರಯತ್ನ ಕಣೋ'' ಅಂದು ಅಂಗಲಾಚಿದರು ಕಾಂತಮ್ಮ.

"ನಿಜವಾಗಿ ಈಗ ಬುದ್ದಿ ಕೆಟ್ಟೋದು ನಂಗಲ್ಲ ನಿಂಗೆ. ಅಲ್ಲಕ್ಕ ಮಗಳು ಬದುಕಿರುವಾಗ ಅಳಿಯನಿಗೆ ಇನ್ನೊಂದು ಮದುವೆಯೇ. ಅಕ್ಕಾ ಸ್ವಲ್ಪ ದಿನ ವೈಟ್ ಮಾಡು. ನಿನ್ನ ಮಗಳನ್ನ ತಂದು ನಿನ್ನ ಮುಂದೆ ನಿಲ್ಲಿಸ್ತೀನಿ. ಆಮೇಲೆ ನಿರ್ಧಾರ ಮಾಡು'' ಅಂದು ಹೊರಗೆ ಬಂದು ನಾಗಲಿಂಗಸ್ವಾಮಿಯವರಿಗೆ,

"ದಯವಿಟ್ಟು ತಪ್ಪು ತಿಳ್ಕೊಬೇಡಿ. ನನ್ನ ಹೆಂಡ್ತಿ ಸತ್ತಿಲ್ಲ ಬದುಕಿದ್ದಾಳೆ. ಹಾಗಿರುವಾಗ ನಾನು ನಿಮ್ಮ ಮಗಳನ್ನು ಹೇಗೆ ಮದುವೆ ಮಾಡ್ಕೊಳ್ಲಿ. ಬೇರೆ ಯಾವ್ದಾದ್ರೂ ಒಳ್ಳೆ ಸಂಬಂಧ ನೋಡಿ'' ಅಂದು ಅಕ್ಕನಿಗೂ ಭಾವನಿಗೂ ತಿಳಿಸಿ ಹೊರಟುಹೋದ.

ಮನೆಗೆ ಹೋದೋನು ಒಬ್ಬನೇ ನಕ್ಕ. ತುಂಬಾ ಜೋರಾಗಿ ನಗಬೇಕೆನಿಸಿತು. ನಕ್ಕ. ಹಾಸಿಗೇಲಿ ಹೊರಳಿ ನಕ್ಕ. ಎದ್ದು ಕೂತು ನಕ್ಕ. ಈ ಜನಗಳೇ ಹುಚ್ಚರು ಅನಿಸಿತು. ನಕ್ಕೂ ನಕ್ಕೂ ಸುಸ್ತಾದಾಗ ಬಾಗಿಲು ಬಡಿದ ಸದ್ದು ಕೇಳಿಸಿತು. ಎದ್ದು ಹೋಗಿ ಬಾಗಿಲು ತೆಗೆದ.

ಬಾಗಿಲು ತೆಗೆದ ನಾಗೇಶ ಅಚ್ಚರಿಯಿಂದ ನಿಂತ.

ಚಂದ್ರು ಬಂದಿದ್ದ. ಗೇಟ್‌ನಿಂದ ಹೊರಗೆ ಕಾಂಪೌಂಡ್ ಪಕ್ಕದಲ್ಲಿ ಅನೇಕರು ಇವನ ಕಡೆಯೇ ಕುತೂಹಲದಿಂದ ನೋಡುತ್ತಿದ್ದರು.

"ಚಂದ್ರು ಇವರೆಲ್ಲ ಯಾಕೋ ಹೀಗೆ ನೋಡ್ತಿದಾರೆ'' ಅಂತ ಕೇಳಿದ.

"ಒಳಗೆ ಬಾ ಹೇಳ್ತೀನಿ'' ಅಂದು ಚಂದ್ರು ನಾಗೇಶನನ್ನ ಒಳಗೆ ಕರ್ಕೊಂಡು ಬಂದು "ನಾನು ಬಂದು ಹತ್ತು ನಿಮಿಷ ಆಯ್ತು. ನಿನ್ನ ನಗು ರಸ್ತೆಗೆ ಕೇಳಿಸ್ತಿತ್ತು. ನೀನು ಯಾಕೆ ನಗ್ತಾ ಇದೀಯೋ ಅನ್ನೋ ಕುತೂಹಲದಿಂದ ಇವರೆಲ್ಲ ನಿಂತಿದ್ದರು. ನಾನೂ ನಿಂತಿದ್ದೆ. ಅದಿರ್ಲಿ ಯಾಕೆ

ಅಷ್ಟು ಜೋರಾಗಿ ನಗ್ತಿದ್ದೆ'' ಅಂತ ಕೇಳಿದ.

ನಾಗೇಶ ಮದುವೆಯ ವಿಚಾರ ತಿಳಿಸಿ ಮತ್ತೆ ನಕ್ಕ.

"ಅಲ್ಲ ಕಣೋ ಯಾಕೋ ಆಫೀಸಿನಲ್ಲಿ ಯಾರ ಹತ್ರನೂ ನೀನು ಮಾತಾಡ್ತಿಲ್ಲ. ನನ್ಹತ್ರಾನೂ ಮಾತಾಡ್ತಿಲ್ವಲ್ಲೋ?''

"ಹೌದಪ್ಪ. ನಂಗೆ ಯಾರ ಜೊತೆ ಮಾತಾಡೋದೂ ಬೇಡ. ಹುಚ್ಚನ ಸಹವಾಸ ನಿಮಗೆ ಯಾಕ್ರಯ್ಯ. ನಾನು ಲಕ್ಷ ಕೊಟ್ಟು ಹೆಂಡ್ತೀನ ಬಿಡಿಸಿಕೊಂಡು ಬರೋತನಕ ಯಾರ ಹತ್ರಾನೂ ಮಾತಾಡಲ್ಲ ಅಂತ ತೀರ್ಮಾನ ಮಾಡಿದೀನಿ'' ಅಂತ ನಾಗೇಶ ಅಂದಾಗ ಚಂದ್ರು ಸುಸ್ತು.

ಸ್ವಲ್ಪ ಹೊತ್ತಿಗೆ ರಾಮಯ್ಯ ಹಾಗೂ ಸುಂದರೇಶ ಮನೆಗೆ ಬಂದರು.

"ಬೇಜಾರಾಗ್ತಿತ್ತು ಹಾಗೇ ಬಂದೆವಪ್ಪ. ಬೇಜಾರಿಲ್ಲ ತಾನೇ?'' ಅಂತ ಪ್ರಶ್ನಿಸಿದರು ರಾಮಯ್ಯ.

"ಇಲ್ಲ ಇಲ್ಲ ಬನ್ನಿ ಸಾರ್, ಬನ್ನಿ ಸುಂದರೇಶ್. ಅಪರೂಪಕ್ಕೆ ಬಂದಿದೀರ.''

"ಅಪರೂಪ ಏನಿಲ್ಲ. ಪುರುಸೊತ್ತಾಗಲ್ಲ ಅಷ್ಟೆ. ಏನ್ಸಮಾಚಾರ?''

"ಏನು ಪ್ರೋಗ್ರಾಂ'' ಕೇಳಿದ ನಾಗೇಶ.

"ಏನಿಲ್ಲ. ಒಂದರ್ಧ ಗಂಟೆ ಹರಟೆ ಹೊಡ್ಕೊಂಡು ಹೋಗೋಣಾಂತ ಬಂದೆಪ್ಪ.''

"ಒಳ್ಳೇದು. ಬರೀ ಹರಟೆ ಯಾಕೆ. ಹರಟೆ ವಿತ್ ವಿಸ್ಕಿ ಆಗ್ಲಿ. ಚಂದ್ರು ಎಷ್ಟಿದೆ ನೋಡು'' ಅಂದ.

ಫ್ರಿಜ್‌ನಲ್ಲಿ ಎರಡು ಬಾಟಲ್ ಇತ್ತು. ಚಂದ್ರು ನೀಟಾಗಿ ಅರೇಂಜ್ ಮಾಡಿದ.

ಹೊಟ್ಟೆ ಪಾಡಿಗೆ ಕೆಲಸ ಮಾಡುವವರಿಗೆ ಎಂತಹ ಬುದ್ಧಿ ಇದ್ದರೂ ವ್ಯರ್ಥ.

– ಚೀನೀ ಗಾದೆ

ಪತಂಗ ತನ್ನ ರೆಕ್ಕೆ ಸುಟ್ಟುಕೊಂಡಾದರೂ ದೀಪವನ್ನು ಆರಿಸುವಂತೆ, ನೀಚರು ಹೇಗಾದರೂ ಸಜ್ಜನರ ಒಳಿತನ್ನು ಸಹಿಸಲಾರರು.

– ಸಂಸ್ಕೃತ ಗಾದೆ

ಮಾನವನಿಗೆ ಪೂರ್ತಿ ತಿಳಿದ ಮೇಲೆ ಆ ವಸ್ತುವಿನ ಮೇಲಿನ ಆಸಕ್ತಿ ಉಳಿಯಲಾರದು.


– ಜಪಾನೀ ಗಾದೆ

ಆಸೆ, ಆಕಾಂಕ್ಷೆ ಮನದಿಂದ ದೂರವಾದರೆ ಮಾತ್ರ ನೆಮ್ಮದಿ ಸಿಗುತ್ತದೆ.

– ಫ್ರೆಂಚ್ ಗಾದೆ

ಸಂಗ್ರಹ :

ಶಂಕರಗೌಡ ವೈ. ಪಾಟೀಲ



"ಚಿಯರ್ಸ್'' ಅಂದು ಎಲ್ಲರೂ ಸಿಪ್ ಮಾಡಿದರು.

ನಾಲ್ಕು ಜನ ಸೇರಿದ್ರಿಂದ ಮಾತಿಗೆ ಕೊರತೆಯಿರಲಿಲ್ಲ. ಮಧ್ಯದಲ್ಲಿ ಅನೇಕ ಫೋನ್ ಕರೆಗಳು. ಒಂದ್ಸಾರಿ ರಘು, ಇನ್ನೊಂದ್ಸಾರಿ ಬಿಪಿನ್‌ದಾಸ್, ಮತ್ತೊಂದ್ಸಾರಿ ಅದ್ಯಾರೋ ಪಕ್ಕದ ಮನೆ ಪರಿಮಳನ್ನ ಕರೀತೀರಾಂತ.

"ನಾಗೇಶ ಫೋನ್ ರಿಸೀವರ್ ತೆಗೆದಿಟ್ಬಿಡು. ಇಲ್ದಿದ್ರೆ ಎಷ್ಟ್ ಸಾರಿ ಎದ್ ಹೋಗ್ಬೇಕು'' ಸಲಹೆ ಮಾಡಿದ ರಾಮಯ್ಯ.

"ಪರವಾಗಿಲ್ಲ ಬಿಡು. ನಂಗೆ ಕೆಲವು ಮುಖ್ಯವಾದ ಕರೆಗಳು ಬರಬೇಕು'' ಅಂದ ನಾಗೇಶ.

ಅವತ್ತು ಮಿತಿ ದಾಟಿಯೇ ವಿಸ್ಕಿ ಒಳಗೆ ಹೋಯಿತು.

"ನೋಡ್ರಪ್ಪ ಇದೆಲ್ಲ ಆದ್ಮೇಲೆ ಹತ್ತಿರದಲ್ಲೇ ಇರೋ ಹಾಲಿಡೇಇನ್‌ಗೆ ಹೋಗೋಣ. ಅಲ್ಲಿ ನಾನ್ ವೆಜ್ ಚನ್ನಾಗಿ ಮಾಡ್ತಾರೆ'' ಅಂತ ಸಲಹೆ ಮಾಡಿದ ಸುಂದರೇಶ.

ಫೋನ್ ಶಬ್ದ ಮಾಡಿತು. ಏಳಲಿದ್ದ ರಾಮಯ್ಯನನ್ನು ತಡೆದು ತಾನೇ ಹೋದ ನಾಗೇಶ ರಿಸೀವರ್ ತೆಗೆದು "ಹಲೋ ನಾಗೇಶ ಹಿಯರ್'' ಅಂದ.

ಅತ್ತ ಕಡೆಯಿಂದ ಬರೋ ಧ್ವನಿ ಸರಿಯಾಗಿ ಕೇಳಿಸ್ತಿರ್ಲಿಲ್ಲ. "ಹಲೋ, ಗಟ್ಟಿಯಾಗಿ ಮಾತಾಡಿ.... ಹಲೋ ಹೇಳಿ ಹೇಳಿ. ಏನಂದ್ರಿ ಒಂದೇ ವಾರಾನಾ... ಬೇಡಿ ಸಾರ್... ಲಕ್ಷ ರೂಪಾಯಿ ಹೊಂದ್ಸೋದು ಸುಲಭಾನಾ ಸಾರ್... ಪ್ಲೀಸ್... ಏನಂದ್ರಿ..... ಸಾಯಿಸೇಬಿಡ್ತೀರ... ಬೇಡಪ್ಪಾ ಬೇಡ. ಎಲ್ಲಿ ಬರ್ಬೇಕು ಹೇಳಿ.... ಎಲ್ಲಿ ಅಲ್ಲೇನಾ... ನೀವು ಹೇಳಿದ್ಪ.... ಹೇಳಿದ ಹಾಗೇ ಕೇಳ್ತೀನಿ. ಓಕೆ ಓಕೆ'' ಅನ್ನುವಾಗ ಫೋನ್ ಡಿಸ್‌ಕನೆಕ್ಟ್ ಆಯ್ತು.

ಪುನಃ ತನ್ನ ಸ್ಥಾನಕ್ಕೆ ಬಂದಾಗ ನಾಗೇಶನಿಗೆ ವಿಪರೀತ ಅಳು ಬಂತು.

"ಯಾಕಯ್ಯ ಅಳ್ತೀಯ. ಯಾರ್ದು ಫೋನು, ಏನಂದ್ರು?'' ಅಂತ ಸಂತೈಸಿದ ರಾಮಯ್ಯ.

ನಾಗೇಶ ಎಲ್ಲಾ ಹೇಳಿದ. "ಏನಯ್ಯ ಏನೇನೋ ಹೇಳ್ತಿದೀಯ?''

"ಏನೇನೋ ಅಲ್ಲಯ್ಯ. ಎಲ್ಲ ಫ್ಯಾಕ್ಟ್.''

"ಯಾರು ಫೋನು ಮಾಡಿದ್ದು?''

"ಯಾರೂಂತ ನಂಗೆ ಗೊತ್ತಿದ್ರಲ್ವೆ ನಿಂಗೆ ಹೇಳೋದು. ಒಂದ್ ವಾರದಲ್ಲಿ ಏನಾದರು ಮಾಡ್ಬೇಕು. ಡೇಟು, ಟೈಮು ಎಲ್ಲ ಕೊಟ್ಟಿದಾನೆ.''

ರಾಮಯ್ಯ, ಸುಂದರೇಶ ಪರಸ್ಪರ ಮುಖ ನೋಡಿಕೊಂಡರು. ಚಂದ್ರು ಸಿಗರೇಟ್ ಸೇದಿ ಸೇದಿ ಹೊಗೆ ಬಿಡ್ತಿದ್ದ. ಕುಡಿದದ್ದು ಮುಗಿದಾದ ಮೇಲೆ ರಾಮಯ್ಯ ಎಲ್ಲರನ್ನೂ ಎಬ್ಬಿಸಿಕೊಂಡು ಊಟಕ್ಕೆ ಹೊರಟ. ವಾಪಸ್ ಬಂದಾಗ ಹನ್ನೆರಡಾಗಿತ್ತು. ನಾಗೇಶನನ್ನು ಮನೆಗೆ ಬಿಟ್ಟು ತಾನು ಮನೆಗೆ ಹೊರಟ ಚಂದ್ರು.

2

"ಬನ್ನಿ ಬನ್ನಿ'' ಸ್ವಾಗತಿಸಿದರು ಗಣೇಶ್‌ರಾಮ್.

ಚಂದ್ರು ಬಂದು ಒಳಗೆ ಕೂತ.



"ಹೇಳಿ ಸಾರ್. ಏನೋ ಹೇಳಿ ಕಳಿಸಿದ್ರಂತೆ."

"ಆದೇಪ್ಪ ನಿಮ್ಮ ಸ್ನೇಹಿತನ ಬಗೆಗೆ ವಿಚಾರಿಸೋಣ ಅಂತ. ಮನುಷ್ಯ ಹೇಗೆ, ಏನು ಕಥೆ?"

"ಸಾರ್ ಹಿ ಈಸ್ ಎ ಪರ್‌ಫೆಕ್ಟ್ ಜಂಟಲ್‌ಮನ್. ಕೆಲಸ ಚನ್ನಾಗಿ ಮಾಡ್ತಾನೆ. ಯಾರ ತಂಟೆಗೂ ಬರ್ತಿರ್ಲಿಲ್ಲ. ಆದರೆ ಈಗ ಒಂದು ತಿಂಗಳಿಂದ ಒಂಥರಾ ವಿಚಿತ್ರವಾಗಿ ಆಡೋಕೆ ಶುರು ಮಾಡಿದಾನೆ. ಏನೋ ಮಾತಾಡ್ತಾನೆ, ಹೇಗ್ಹೇಗೋ ನಗ್ತಾನೆ. ಇವೆಲ್ಲ ಈಚೆಗೆ, ಅಂದ್ರೆ ಅವರ ಹೆಂಡ್ತಿ ಸತ್ತಾಗ್ಲಿಂದ."

"ಈ ವಿಚಾರದಲ್ಲಿ ನಿಮ್ಮ ಅಭಿಪ್ರಾಯ ಏನು?"

"ಏನೂಂತ ಹೇಗೆ ಹೇಳೋದು. ಸ್ವಲ್ಪ ಮೆಂಟಲ್ ಲೂಸು ಅಂತ ಕಾಣುತ್ತೆ. ಡಾಕ್ಟ್ರ ಹತ್ರನೂ ಹೋಗಲ್ಲ ಅಂತಾನೆ. ಅವನು ಹೇಳೋದನ್ನೆಲ್ಲ ನಾವು ನಂಬಬೇಕು ಅಂತ ಬಲವಂತ ಮಾಡ್ತಾನೆ. ಆದ್ರೆ ಹೆಂಡ್ತಿ ಬದುಕಿದಾಳೆ ಅಂತ ಬಲವಾಗಿ ನಂಬಿದ್ದಾನೆ ಸಾರ್" ಅಂದ ಚಂದ್ರು ಬೇಸರದಿಂದ.

"ಅವರು ಹೇಳೋದ್ರಲ್ಲಿ ಸತ್ಯ ಇರಬಹುದು ಅನಿಸುತ್ತ?"

"ಗೊತ್ತಾಗಲ್ಲ ಸಾರ್. ಅದೇನಿದ್ರೂ ನಿಮ್ಮಂಥ ಪ್ರೊಫೆಷನಲ್ಸ್‌ಗೆ ಗೊತ್ತಾಗೋದು."

"ಆದ್ಸರಿ, ಎಷ್ಟ್ ವರ್ಷ ಸಂಸಾರ ಮಾಡಿದ್ರು ಅವರು?"

"ಎರಡು ಮೂರು ವರ್ಷ."

"ಒಂದು ವೇಳೆ ಹತ್ತು ಹನ್ನೆರಡು ವರ್ಷ ಸಂಸಾರ ಮಾಡಿದ ಮೇಲೆ ಹೆಂಡ್ತಿ ಸತ್ತುಹೋಗಿದ್ರೆ ಆಗಲೂ ಹೀಗೇ ಆಗಿಹೋಗ್ತಿದ್ರೇಂತ ಯೋಚನೆ ಮಾಡಿದರೆ ಏನನಿಸುತ್ತೆ."

"ಅಂದರೆ!"

"ಅಂದರೆ ನಾಗೇಶನಿಗೆ ಹೆಂಡ್ತಿ ಮೇಲಿರೋ ಅತಿಯಾದ ಪ್ರೀತಿಯಿಂದಾಗಿ ಹೀಗಾಗಿದೆಯೋ ಅಂತ."

"ಆ ಫೋನ್ ಕಾಲ್ ಬಗ್ಗೆ ಏನು ಹೇಳ್ತೀರ, ಅದನ್ನ ಸ್ವಲ್ಪ ಪತ್ತೆ ಮಾಡ್ಬೇಕು. ನೀವು ಹೇಳೋ ಪ್ರಕಾರ ಅವರಿಗೆ ಬರ್ತಿರೋ ಫೋನ್ ಕಾಲ್ ಸುಳ್ಳೇ."

"ಸುಳ್ಳೂಂತಾನೇ ಅನ್ಸುತ್ತೆ. ಯಾಕೇಂದ್ರೆ ಒಂದಿನ ಯಾರೋ ಮಾತಾಡಿದ್ದಕ್ಕೆ ಹೆಂಡ್ತೀನ ಎಗರಿಸಿಕೊಂಡು ಹೋಗಿರೋನು ಫೋನು ಮಾಡ್ದ ಅಂತ ಹೇಳ್ದ. ಇನ್ನೊಂದ್ ದಿನ ಟೆಲಿಫೋನ್ ವೈರ್ ಕಟ್ ಆಗಿತ್ತು. ಇವನು ಮಾತಾಡ್ತಾನೇ ಇದ್ದ. ಸೈಕ್ಯಾಟ್ರಿಸ್ಟ್ ಬಳಿ ಏನು ಪ್ರಾಬ್ಲಮ್ ಇದ್ರೂ ಹೇಳ್ಕೋಬೇಕಿತ್ತು. ಅದಕ್ಕೆ ಬದಲಾಗಿ ಅವರನ್ನು ಹೆದರಿಸಿ ಓಡಿಬಂದಿದಾನೆ."

ಅಂತ ಅನ್ನುತ್ತಿದ್ದ ಹಾಗೆ ನಾಗೇಶ ಬಂದ.

ಮೊದಲು ಅವನನ್ನು ಗುರುತಿಸಲೇ ಇಲ್ಲ ಚಂದ್ರು.

"ಇದ್ಯಾರಪ್ಪ ಭಿಕ್ಷುಕರನ್ನೂ ನೇರವಾಗಿ ಆಫೀಸಿಗೆ ಸೇರಿಸ್ತಾರೆ ಅಂತ ಆಶ್ಚರ್ಯಪಡ್ತೀರ. ಯಾರವರು ಹೇಳಿ" ಅಂತ ಗಣೇಶ್‌ರಾಮ್ ಅಂದಾಗ ಚಂದ್ರು ಕುತೂಹಲದಿಂದ ನೋಡಿದ.

"ನಾನೇ ನಾಗೇಶ. ಅಯ್ಯೋ ಬೆಪ್ಪುತಕ್ಕಡಿ. ಅದ್ಯಾಕೋ ಹಾಗೆ ನೋಡ್ತಿದೀಯ."

ನಾಗೇಶನ ಧ್ವನಿ ಗುರುತಿಸಿ ಚಂದ್ರು ಆಶ್ಚರ್ಯದಿಂದ ನಕ್ಕ ನಗು ತಡೆಯೋಕೇ ಆಗಲಿಲ್ಲ.

"ಇದೇನೋ ನಿನ್ನ ಅವತಾರ. ಈ ತಿರುಪೆಯವನ ವೇಷದಲ್ಲಿ ಇಲ್ಲಿ" ಅಂದೋನು ತಕ್ಷಣ

ನಗು ನಿಲ್ಲಿಸಿ ಸೀರಿಯಸ್ ಆದ. ನಾಗೇಶನನ್ನೇ ರೆಪ್ಪೆಯಾಡಿಸದೇ ನೋಡಿದ. ಅವನ ಹುಚ್ಚು ಎಲ್ಲೀವರೆಗೂ ಬಂದಿದೆ ಅಂತ ದಿಗಿಲುಪಟ್ಟ.

"ವೇಷ ಹಾಕ್ಕೋಬೇಕಾಗುತ್ತಯ್ಯ, ಏನ್ ಮಾಡೋದು. ನಿಂಗಂತೂ ಏನು ತಾಪತ್ರಯ ಇಲ್ಲ.'' ಅಂದ ನಾಗೇಶ "ಸಾರ್ ಒಂದ್ ವಿಚಾರ'' ಅಂದು ಗಣೇಶ್‌ರಾಮ್‌ನನ್ನೇ ನೋಡಿದ.

"ಹೇಳಿ ನಾಗೇಶ್'' ಅಂದು ಉತ್ತೇಜಿಸಿದರು.

"ನೆನ್ನೆ ಫೋನ್ ಮಾಡಿದ್ದ ಸಾರ್ ಅವನು. ಒಂದೇ ವಾರ ಟೈಮು ಕೊಟ್ಟಿರೋದು. ಅವನಿಗೂ ಫೋನ್ ಮಾಡಿ ಮಾಡಿ ಸಾಕಾಯ್ತಂತೆ. ಮುಂದಿನ ಸೋಮವಾರ ರಾತ್ರಿ ಎಂಟುಗಂಟೆ ಒಳಗೆ ಲಕ್ಷ ಕೊಡ್ದಿದ್ರೆ ಹೆಂಡ್ತೀನ ಸಾಯಿಸಿ ಹೆಣ ನಮ್ಮನೆ ಮುಂದೆ ಹಾಕ್ತಾನಂತೆ. ಹಾಗೆ ಮಾಡ್ಬೇಡಪ್ಪ, ಅಷ್ಟರೊಳಗೆ ನಾನು ಹಣ ಹೊಂದಿಸ್ತೀನೀಂತ ಹೇಳಿದೀನಿ. ಅವನು ಮತ್ತೆ ಭಾನುವಾರ ಫೋನ್ ಮಾಡ್ತಾನಂತೆ. ಅದೇ ರಾಕ್ ಮೆಮೋರಿಯಲ್ ಹತ್ರ ಹೋಗಿ ದುಡ್ಡು ಕೊಟ್ಟು ಬರ್ಬೇಕಂತೆ.''

"ಹೆಂಡ್ತೀನಾ ಅವಾಗ್಩ೇ ಕಳಿಸ್ತಾರಂತಾ?''

"ಹೌದು, ಹೌದು. ಈ ಕೈಲಿ ಹಣ ಆ ಕೈಲಿ ಹೆಂಡ್ತಿ ಅದರಲ್ಲಿ ಅನುಮಾನವೇ ಇಲ್ಲ. ಹಣ ನಾನು ಹೇಗಾದರೂ ಹೊಂದಿಸ್ತೀನಿ. ಆದ್ರೆ ಹೆಂಡ್ತೀನ ಹುಷಾರಾಗಿ ತಂದ್ಕೊಡೋದು ನಿಮ್ಮ ಕೆಲಸ.''

"ಹಣ ಹೇಗೆ ಹೊಂದಿಸ್ತೀರ.''

"ಹೇಗಾದ್ರೂ ಮಾಡ್ತೀನಿ ಸಾರ್. ಇಲ್ದಿದ್ರೆ ಇರೋದೆಲ್ಲ ಮಾರ್ಬಿಡ್ತೀನಿ. ನಂಗೆ ಹೆಂಡ್ತಿಗಿಂತ ಯಾವ್ದೂ ಹೆಚ್ಚಲ್ಲ'' ಅಂದು ಚಂದ್ರು ಕಡೆ ನೋಡಿದ.

ಚಂದ್ರು ಅನಾಸಕ್ತನಂತೆ ಎತ್ತಲೋ ನೋಡುತ್ತಾ ಕೂತಿದ್ದ.

"ಹೇಳಿ ಸಾರ್ ನಾನೇನ್ ಮಾಡ್ಲಿ'' ಕೇಳಿದ ನಾಗೇಶ.

"ಒಂದ್ಕೆಲ್ಸ ಮಾಡಿ. ನೀವು ಹಣ ಹೊಂದ್ಸಿ. ನಾಡಿದ್ದು ಮೋಹನ್‌ರಾಮ್ ಬರ್ತಾರೆ.

"ಏನೇ ಆಶಾ ಆಗ್಩ೇ ನಿನ್ನ ಹೊಸ ಬಾಯ್ ಫ್ರೆಂಡ್‌ನ ಕೂಡ ಬದಲಾಯಿಸ್ಬಿಟ್ಟೆ ಯಂತೆ.''

"ಇನ್ನೇನ್ ಮಾಡ್ಲಿ ಅವನು ಕಂಜೂಸ್ ಅಂತ ಗೊತ್ತಿರಲಿಲ್ಲ.''

"ಯಾಕೆ ನೀನು ಕೇಳಿದ್ದೆಲ್ಲ ತೆಗೆಸಿಕೊಡಲಿಲ್ಲ ಅಂತ್಩ೇ?''

"ಅಲ್ವೇ ಬಿಸಿನೆಸ್ ಮ್ಯಾಗ್ನೆಟ್ ಭದ್ರೇಶ್‌ನ ಇಂಟರ್‌ಡ್ಯೂಸ್ ಮಾಡ್ಕೊಡೂಂದೇ, ಒದ್ದಾಡ್ಬಿಟ್ಟಾ. ಅದಕ್ಕೆ...''

— ವಿ. ಎಸ್. ಶ್ರೀನಿವಾಸ ಪ್ರಸನ್ನ



ಖಂಡಿತಾ ಏನಾದರೂ ಸಹಾಯ ಮಾಡೋಣ'' ಅಂದರು ಗಣೇಶ್‌ರಾಮ್.

"ಅಂದ್ರೆ ನಾ ಬರ್‍ಲಾ ಸಾರ್?''

"ಆಯ್ತು.''

"ನಾಡಿದ್ದು ಸಂಜೆ ಬರ್‍ತೀನಿ ಸಾರ್.''

"ಹಾಗೇ ಮಾಡಿ'' ಅಂದರು ಗಣೇಶ್‌ರಾಮ್.

"ನಾ ಬರ್‍ತೀನಯ್ಯ'' ಅಂದು ಚಂದ್ರುಗೆ ಹೇಳಿ ಹೊರಟ ನಾಗೇಶ.

ಅವನು ಹೋದ ಮೇಲೆ ಗಣೇಶ್‌ರಾಮ್‌ಗೆ ನಗು ಬಂತು.

"ಯಾಕ್ಸಾರ್ ನಗ್ತೀರ'' ಅಂತ ಕೇಳಿದ.

"ಅಲ್ಲ ಈ ಮನುಷ್ಯ ಮೊದಲನೇ ದಿನ ಬರುವಾಗ ಹೀಗೇ ಬಂದಿದ್ದ. ವಾಚ್‌ಮನ್ ಇವನನ್ನ ಒಳಗೆ ಬಿಡ್ಲಿಲ್ಲ. ಆಮೇಲೆ ಕಾರ್ಡ್ ಕೊಟ್ಟು ಒಳಗೆ ಬಂದ. ಆಯ್ತು ಆಮೇಲೆ ವಾಪಸ್ ಹೋಗುವಾಗ ಸುಮ್ನೆ ಹೋಗ್ಬಾರ್‍ದ್, ನಿಮ್ಮ ವಾಚ್‌ಮನ್‌ಗೆ ಹೇಳಿ ನನ್ನ ಆಚೆಗೆ ತಳ್ಸಿ ಸಾರ್ ಅಂದ.''

"ಅದ್ಯಾಕೆ'' ಅಚ್ಚರಿಯಿಂದ ಕೇಳ್ದ.

"ಯಾರಿಗೂ ಅನುಮಾನ ಬರ್‍ದೇ ಇರ್‍ಲಿ ಅಂತ.''

ಚಂದ್ರು ಜೋರಾಗಿ ನಕ್ಕ.

"ಅಂತೂ ನಿಮ್ಮ ಫ್ರೆಂಡು ಒಂಥರಾ ಇಂಟರೆಸ್ಟಿಂಗ್ ವ್ಯಕ್ತಿ. ಅವರ ಕಥೆ ಹೇಗೆ ಕೊನೆಯಾಗುತ್ತೋ ನೋಡ್ಬೇಕು'' ಅಂದರು ಗಣೇಶ್‌ರಾಮ್.

* * * * *

ಆ ಸಂಜೆಯೇ ಚಂದ್ರು ನಾಗೇಶನ ಅಕ್ಕನ ಮನೆಗೆ ಹೋದ. ಗುರುಬಸಪ್ಪನೋರು, ಕಾಂತಮ್ಮ ಮನೇಲೇ ಇದ್ದರು.

"ಎಲ್ಲಾ ಅನಾಹುತ ಆಯ್ತು'' ಅನ್ನುತ್ತ ಒಳಗೆ ಹೋದ.

"ಏನಾಯ್ತಪ್ಪ'' ಆತಂಕದಿಂದ ಪ್ರಶ್ನಿಸಿದರು ಕಾಂತಮ್ಮ.

"ನಿಮ್ಮ ಅಳಿಯ ಲಕ್ಷ ರೂಪಾಯಿ ಕಳ್ಕೊಳೋಕೆ ತಯಾರಾಗಿದಾನೆ.''

"ಲಕ್ಷ ರೂಪಾಯೀ?''

"ಅದೇ, ಯಾವೊನೋ ಒಬ್ಬ ಫೋನ್ ಮಾಡ್ತಿದ್ದ ಅಂತ ಹೇಳ್ತಿದ್ನಲ್ಲ. ಅವನು ಒಂದೇ ವಾರದ ಗಡುವು ಕೊಟ್ಟಿದಾನಂತೆ. ಅದಿಕ್ಕೆ ಅವನು ಲಕ್ಷ ರೂಪಾಯಿ ಹೊಂದ್ಸೋದ್ರಲ್ಲಿದಾನೆ. ಜೊತೆಗೆ ಪತ್ತೇದಾರರ ಬಳಿನೂ ಹೋಗಿದಾನೆ.''

"ಪತ್ತೇದಾರರೇ?''

"ಹೌದು, ಗಣೇಶ್‌ರಾಮ್ ಅಂತ. ಅವರೇ ನನ್ನನ್ನ ಬರಲು ಹೇಳಿ ನಾಗೇಶನ ಬಗ್ಗೆ ವಿಚಾರಿಸಿದರು. ನಾನು ಇರೋ ವಿಚಾರ ತಿಳಿಸಿದೆ. ಅವರಿಗೂ ಈ ಕೇಸ್ ತಗೊಳೋಕೆ ಇಷ್ಟ ಇಲ್ಲ. ಆದ್ರೆ ದುಡ್ಡು ಬರುತ್ತೆ ಅಂದ್ರೆ ಯಾರು ಬಿಡ್ತಾರೆ ಹೇಳಿ. ನಾಗೇಶನ ಬಗೆಗೆ ವಿವರ ತಿಳ್ಕೊಳೋಕೆ ಅವರು ಇಲ್ಲಿಗೆ ಬಂದ್ರೂ ಬರಬಹುದು.''

"ಯಾವತ್ತು ಕೊಡಬೇಕಂತೆ ದುಡ್ಡು?''

"ಮುಂದಿನ ಸೋಮವಾರ. ಅಷ್ಟ್ರಲ್ಲಿ ಅವನು ಮತ್ತೆ ಫೋನ್ ಮಾಡಿ ಎಲ್ಲಿ ಬರ್‍ಬೇಕು,

ಎಷ್ಟ್ ಹೊತ್ತಿಗೆ ಬರಬೇಕು ಅಂತ ತಿಳಿಸ್ತಾನಂತೆ.''

"ಪೋಲೀಸ್ನೋರಿಗೆ ಹೇಳಿದ್ರೆ?''

ಕಾಂತಮ್ಮ ಕುತೂಹಲದಿಂದ ಕೇಳಿದರು.

"ಅದಕ್ಕೂ ಅವನು ವಾರ್ನ್ ಮಾಡಿದಾನಂತೆ. ಪೋಲೀಸು, ಪತ್ತೇದಾರರು ಅಂದ್ರೆ ಸುಶೀಲನ್ನ ಸಾಯಿಸಿಬಿಡ್ತಾನಂತೆ.''

"ಮತ್ತೆ ನಾಗೇಶ ಪತ್ತೇದಾರರ ಹತ್ರ ಹೋಗಿದ್ದಾಂದ್ರಿ?''

"ಹೋಗಿದ್ದ. ಹೇಗೆ ಭಿಕ್ಷುಕನ ವೇಷ ತೊಟ್ಟು.''

"ಭಿಕ್ಷುಕನ ವೇಷವೇ?''

"ಹೌದೂಂತೀನಿ. ಅವನ ಪಕ್ಕದಲ್ಲೇ ಕೂತಿದ್ರೂ ನಂಗೇ ಗುತ್ತು ಸಿಗ್ಲಿಲ್ಲ. ಅವನೇ ಮಾತಾಡಿದ ಮೇಲೆ ಗುರ್ತು ಸಿಕ್ಕಿದ್ದು.''

ಗುರುಬಸಪ್ಪ ಹೆಂಡ್ತಿ ಕಡೆ ನೋಡಿದರು. ಕೂತಿದ್ದ ಜಾಗದಿಂದ ಎದ್ದು ಹಿಂದಕ್ಕೆ ಕೈ ಕಟ್ಟಿ ಶತಪಥ ತಿರುಗಿದರು, ನಿಟ್ಟುಸಿರುಬಿಟ್ಟರು.

"ಈ ಹುಡುಗನ್ನ ದೇವರು ಹೇಗೆ ಕಾಪಾಡ್ತಾನೋ ನೋಡ್ಬೇಕು. ಅಲ್ಲ ಅವನಿಗೆ ನಾವು ಏನು ಹೇಳೋದೂ ಕಷ್ಟವೇ. ಯಾಕೆಂದ್ರೆ ಅವನ ವಿರುದ್ಧವಾಗಿ ನಾವು ಥಿಂಕ್ ಮಾಡ್ತಿದೀವಿ ಅಂದ್ಕೊತಾನೆ. ಲಕ್ಷ ರೂಪಾಯಿ ಅಂದ್ರೆ ಕಡಿಮೆಯೇ?'' ಅಂದರು.


"ಡಾಕ್ಟರ್ ಪ್ರಭಾಕರ್‌ಗಾದ್ರೂ ಬರಹೇಳ್ಬೇಕಿತ್ತು'' ಅಂದರು ಕಾಂತಮ್ಮ.

"ಅದಕ್ಕೆ ಬದಲಾಗಿ ಗಣೇಶ್‌ರಾಮ್‌ನ ನೋಡಿ. ಅಥವಾ ಅವರೇ ನಿಮ್ಮನ್ನ ಕಾಂಟಾಕ್ಟ್ ಮಾಡೋಕೆ ಪ್ರಯತ್ನ ಮಾಡಬಹುದು. ಈಗ ನಾಗೇಶ ಬಿಯಾಂಡ್ ಎನಿಬಡೀಸ್ ರೀಚ್ ಅನ್ನೋ ಹಾಗಿದಾನೆ. ಆಫೀಸಲ್ಲೂ ಅಷ್ಟೆ ಯಾವಾಗ್ಲೂ ಇದೇ ವಿಚಾರ ಯೋಚಿಸ್ತಿರ್ತಾನೆ. ಯಾರಾದ್ರೂ ಮಾತಾಡಿಸಿದ್ರೆ ಇದನ್ನೇ ಹೇಳ್ತಾನೆ'' ಅಂದವನು "ನಾನು ಬರ್ತೀನಿ ಸಾರ್. ನಂಗೆ ತಡೆಯೋಕೆ ಆಗ್ಲಿಲ್ಲ ಅದಿಕ್ಕೆ ನಿಮಗೆ ಹೇಳಿ ಹೋಗೋಣ ಅಂತ ಬಂದೆ'' ಅಂತ ಹೇಳಿ ಹೊರಟ ಚಂದ್ರು.

ಗುರಿ

ಒಬ್ಬೊಬ್ಬರದೂ
ಒಂದೊಂದು ತರಹ
ಇದೆಲ್ಲ ಅವರವರ
ಹಣೇ ಬರಹ
ಎಲ್ಲವೂ ವಿಧಿಲಿಖಿತ
ಎಂದ್ಹೇಳುತ
ಕಾಲ ಕಳೆಯುವುದೇ
ನಮ್ಮ ಪರಮ ಗುರಿ.

— ಸಿ. ಕೆ. ಗಂಗೇಗೌಡ



ಕಾಂತಮ್ಮ ಕಣ್ಣಿಗೆ ಸೆರಗು ಹಾಕಿಕೊಂಡು ಅಳುತ್ತಾ ಕೂತರು. ಗುರುಬಸಪ್ಪ ಅಂಗಳದ ಖುರ್ಚೀಲಿ ಕೂತು ಆಕಾಶ ನೋಡಿದರು.

೮

ಜಯಂತಿ ಟೆಲಿಫೋನ್ ಡೈರಕ್ಟರಿ ತೆಗೆದು ಯಾವುದೋ ನಂಬರ್ ಹುಡುಕ್ತಾ ಕೂತಿದ್ದಳು. ಅಲ್ಲಿಗೆ ಬಂದ ನಾಗೇಶ.

"ಏನ್ ಮಾಡ್ತಿದೀರ" ಅಂತ ಕೇಳಿದ.

"ಕಾಣೋಲ್ವ ನಂಬರ್ ಹುಡುಕ್ತಿರೋದು" ಅಂದಳು ಸಿಡುಕಿ.

"ಅಬ್ಬಬ್ಬ ಅದೇನ್ ಸಿಡುಕ್ತಿರ್ರೀ, ಸುಂದರವಾಗಿರೋ ಹುಡುಗೀರಿಗೆ ಇಷ್ಟೊಂದ್ ಕೋಪ ಬರುತ್ತೆ ಅಂದ್ಕೊಂಡಿರ್ಲಿಲ್ಲ. ಇರ್ಲಿ ಈ ತಿಂಗಳ ಕಥಾಪತ್ರಿಕೆ ಓದಿದ್ರಾ?"

"ಇಲ್ಲ ಓದಿಲ್ಲ. ಯಾಕೆ ಏನು ವಿಶೇಷ, ನೀವೇನಾದ್ರೂ ಕಥೆ ಬರ್ದಿದೀರ?"

"ಅಯ್ಯಯ್ಯೋ ಇಲ್ಲಪ್ಪ. ಅದರಲ್ಲಿ ಒಂದು ಕಥೆ ಬಂದಿದೆ 'ಸಮಾಗಮ' ಅಂತ. ಅದು ಹೆಚ್ಚು ಕಡಿಮೆ ನನ್ದೇ ಕಥೆ."

"ಹಾಗಂದ್ರೇನ್ರೀ?"

"ಅದೇ ಹೆಂಡ್ತೀನ ಯಾರೋ ಹಿಡ್ಕೊಂಡ್ ಹೋಗಿರ್‍ತಾರೆ. ಆಮೇಲೆ ಹೀರೋ ಹೋಗಿ ಧೈರ್ಯವಾಗಿ ಬಿಡಿಸ್ಕೊಂಡ್ ಬರ್‍ತಾನೆ. ಅಂದ್ರೆ ದುಡ್ಡು ಗಿಡ್ಡು ಏನಿಲ್ಲ."

ಜಯಂತಿ ತಲೆಮೇಲೆ ಕೈ ಹೊತ್ತು ಕೂತಳು.

"ನಾನಂತೂ ಕಥೇನ ಮೂರ್‍ಸಾರಿ ಓದ್ದೆ" ಅಂದ ನಾಗೇಶ.

"ಮೂರ್‍ಸಾರಿನಾ, ಯಾಕೆ?"

"ಅರೆ ನಿಮಗ್ಗೊತ್ತಿಲ್ವ, ಮುಂದಿನ ವಾರ ನಾನು ನನ್ನ ಹೆಂಡ್ತೀನ ಬಿಡಿಸ್ಕೊಂಡ್ ಬರ್‍ಬೇಕು. ನಂಗೆ ಅಷ್ಟೆಲ್ಲ ಧೈರ್ಯ ಇಲ್ಲ, ಅದೆಷ್ಟೋ ದುಡ್ಡು ಕೇಳ್ತಿದಾನೆ. ಕೊಟ್ಟು ಬಿಡಿಸ್ಕೊಂಡ್ ಬರೋದು. ಒಟ್ನಲ್ಲಿ ಹೆಂಡತಿ ಮುಖ್ಯ ಅಲ್ವೆ" ಅಂದ ನಾಗೇಶ.

ಜಯಂತಿ ತಲೆ ತಿರುಗಿ ಬೀಳೋದೊಂದು ಬಾಕಿ.

ಹನ್ನೆರಡು ಗಂಟೆಯ ಹೊತ್ತಿಗೆ ನಾಗೇಶ ಬಿಪಿನ್‌ದಾಸ್ ಕೋಣೆಗೆ ಹೋದ. ಅವರೇನೋ ಕೆಲಸದಲ್ಲಿದ್ರು.

"ನಮಸ್ಕಾರ ಸಾರ್."

"ನಮಸ್ಕಾರ ಬನ್ನಿ ನಾಗೇಶ್, ಹೇಗಿದೀರ?"

"ನಂಗೇನಾಗಿದೆ ಸಾರ್. ಫಸ್ಟ್ ಕ್ಲಾಸಾಗಿದೀನಿ. ಈಗ ನಾನು ನಿಮ್ಮತ್ರ ಬಂದಿದ್ದು, ಅದೇ ಸ್ವಲ್ಪ ಅಡ್ವಾನ್ಸ್ ಕೇಳಿದ್ನಲ್ಲ."

ಬಿಪಿನ್‌ದಾಸ್ ನಾಗೇಶನ ಮುಖ ನೋಡಿದರು. ನಾಗೇಶ ಮುಂದುವರಿಸಿದ.

"ಅದೇ ಸಾರ್. ಇನ್ನೊಂದು ವಾರನೇ ಟೈಮಿರೋದು. ಅಷ್ಟರಲ್ಲಿ ಹಣ ಹೊಂದಿಸ್ಕೋಬೇಕು. ಇಲ್ದಿದ್ರೆ ಅವ್ನು ನನ್ನ ಹೆಂಡ್ತೀನ ಸಾಯಿಸಿಬಿಡ್ತಾನಂತೆ ಸಾರ್."

"ಸಾಯಿಸ್ಲಿ ಬಿಡ್ರಿ."

"ಸಾರ್ ಇದೇನ್ ಸಾರ್ ಹೀಗ್ಹೇಳ್ತೀರ. ಅವ್ಳು ಸಾಯ್ತೋದು ನನ್ನ ಹೆಂಡ್ತೀನ ಸಾರ್, ನಿಮ್ ಹೆಂಡ್ತೀನಲ್ಲ."

ಬಿಪಿನ್‌ದಾಸ್ ಕೋಪದಿಂದ "ವಾಟ್ ನಾನ್‌ಸೆನ್ಸ್. ದಿನಾ ಸಾಯೋರ್‍ಗೆ ಅಳೋರ್‍ಯಾರು ಅಂತಾರಲ್ಲ ಹಾಗೆ. ಸತ್‌ಹೋಗಿರೋ ಹೆಂಡ್ತೀನ ನೆಪ ಮಾಡ್ಕೊಂಡು ಯಾಕ್ರೀ ಆಕೇನ ಮತ್ತೆ ಸಾಯಿಸ್ತೀರ" ಅಂದರು.

"ಏನ್ಸಾರ್, ನೀವು ಎಲ್ಲರ ಹಾಗೇ ಮಾತಾಡ್ತೀರ. ಸ್ವಲ್ಪ ಕರುಣೆ ಇಡಿ ಸಾರ್."

"ಇದೆಲ್ಲ ಪುರಾಣ ನನ್ ಹತ್ರ ತೆಗೀಬೇಡಿ ನಾಗೇಶ್. ನಾನು ನಿಮಗೆ ಅಡ್ವಾನ್ಸ್ ಕೊಡೋಲ್ಲ."

"ಯಾಕೆ ಸಾರ್?"

"ಯಾಕೇಂದ್ರೆ ನಿಮ್ಮ ಹಿತ ರಕ್ಷಿಸೋದು ನಮ್ಮ ಹೊಣೆ ಅದಿಕ್ಕೆ."

"ಆಪತ್ತಿನಲ್ಲಿರುವಾಗ ಸಹಾಯ ಮಾಡ್ದೆ ಇರೋದಾ ಹಿತ ರಕ್ಷಿಸೋದು."

"ಹಾಗಲ್ಲ."

"ಇನ್ ಹ್ಯಾಗೆ ಸಾರ್."

"ಮೊನ್ನೆ ನಿಮ್ಮ ಭಾವ ಬಂದಿದ್ರು. ನಿಮ್ಮ ವಿಚಾರ ಎಲ್ಲ ತಿಳಿಸಿದ್ರು. ನಿಮಗೆ ಬರೋ ಸಂಬಳ ಬಿಟ್ರೆ ಇನ್ಯಾವ ರೀತಿಯ ಹಣಾನೂ ನಿಮಗೆ ಕೊಡಬಾರ್ದು ಅಂತ ಹೇಳಿದಾರೆ. ಸ್ವಲ್ಪ ದಿವಸ ಹೋದ್ರೆ ಸಂಬಳ ತಗೊಳೋಕೂ ಅವರೇ ಬರ್‍ತಾರಂತೆ."

"ಏನ್ಸಾರ್, ಕೆಲಸ ಮಾಡ್ತಿರೋನು ನಾನು..." ಅಂತ ನಾಗೇಶ ಅನ್ನುತ್ತಿದ್ದ ಹಾಗೆ ಒಬ್ಬ ಸೂಟ್ ಹಾಕಿದ ವ್ಯಕ್ತಿ ಒಳಗೆ ಬರುತ್ತಾ "ಗುಡ್‌ಮಾರ್ನಿಂಗ್ ದಾಸ್" ಅಂದರು.

ಬಿಪಿನ್‌ದಾಸ್ ನಾಗೇಶನ ಕಡೆ ನೋಡಿ "ಈಗ ನೀವು ಹೊರಡಿ" ಅಂದರು.

ಭುಸುಗುಡುತ್ತಾ ಹೊರಗೆ ಬಂದ ನಾಗೇಶ. ಎಲ್ಲರೂ ಅವನನ್ನು ಕುತೂಹಲದಿಂದ

ಯವ್ವನ ವೃದ್ಧಾಪ್ಯಕ್ಕೆ ತುಂಬ ಕ್ರೌರ್ಯ ತೋರಿಸುವುದು.

— ಅನುಪಮಾ

ಚೆಲ್ಲವಿಲ್ಲದಿದ್ದರೂ ಚೆಲ್ಲದಂತ ಮಾತಿರಬೇಕು.


— ಬಸವಣ್ಣ

ಪರಸಂಸ್ಕೃತಿ ಪ್ರೀತಿಸು, ನಿನ್ನ ಸಂಸ್ಕೃತಿಯಲ್ಲಿ ಜೀವಿಸು.

— ಗಾಂಧೀಜಿ

ಸಂಗ್ರಹ :

ರೇವತಿ ಗಣಪತಿ ಕಲಗಾರೆ



ನೋಡಿದರು.

ಜಯಂತಿ ನಾಗೇಶನ ಬಳಿ ಬಂದು "ನಾಗೇಶ್ ಆ ಕಥೆ ಓದ್ದೆ. ತುಂಬಾ ಇಂಟರೆಸ್ಟಿಂಗ್. ಹೀರೋನ ನೋಡಿದರೆ ಅಯ್ಯೋ ಪಾಪ ಅನ್ಸುತ್ತೆ ಅಲ್ವಾ?"

"ಗಾಣಿಗ ಅಯ್ಯೋ ಅಂದ್ರೆ ನೆತ್ತಿ ತಣ್ಣಗಾಗುತ್ತೇನ್ರೀ. ನಿಮ್ಮ ಕಾಮೆಂಟ್ಸ್ ಯಾರಿಗೆ ಬೇಕು ಎದ್‌ಹೋಗ್ರೀ. ನನ್ ತಾಪತ್ರಯ ನನಗೆ" ಅಂದು ತಲೆಮೇಲೆ ಕೈ ಹೊತ್ತು ಕೂತ.

ಚಂದ್ರು ಬಂದು "ಯಾಕೋ ಏನಾಯ್ತೋ?" ಅಂತ ಕೇಳಿದ.

"ನಾನು ಯಾರನ್ನ ನಮ್ಮ ಸ್ನೇಹಿತರು, ಹಿತೈಷಿಗಳು ಅಂದ್ಕೊಂಡಿರ್ತಿವೋ ಅವರೇ ನಮ್ಮ ಬೆನ್ನಲ್ಲಿ ಚೂರಿ ಹಾಕ್ತಾರೆ. ಬಿಡು ಆ ವಿಚಾರ ಎಲ್ಲ. ನಂಗೆ ಜೀವನದ ಎಲ್ಲ ಸಮಸ್ಯೆಗಳನ್ನು ಒಂಟಿಯಾಗಿ ಎದುರಿಸಿ ಅಭ್ಯಾಸ ಆಗಿದೆ."

ಅಂದು ಅಲ್ಲಿಂದ ಎದ್ದು ಟಾಯ್ಲೆಟ್‌ಗೆ ಹೋದ.

* * * * *

ಆಚೆ ಹೋಗಿದ್ದ ಗುರುಬಸಪ್ಪ ಮನೆಗೆ ಬಂದಾಗ ಕಾಂತಮ್ಮ ಹತ್ತಿರ ಬಂದು "ನಾಗೇಶ ಬಂದಿದಾನೆ. ಬಹಳ ಕೋಪವಾಗಿದಾನೆ" ಅಂದರು.

"ನಾಗೇಶನೇ, ಕೋಪವೇ, ಯಾಕೆ?"

"ಯಾಕೇಂದ್ರೆ ನೀವೇನೋ ಅವರ ಆಫೀಸರಿಗೆ ಫೋನ್ ಮಾಡಿ ದುಡ್ಡು ಕೊಡಬೇಡಿ ಅಂತ ಹೇಳಿದ್ರಂತೆ."

"ಅಲ್ಲ ಕಣೆ, ಇಷ್ಟ್ ವರ್ಷ ಸರ್ವಿಸ್ ಮಾಡಿ ಇಷ್ಟೋ ಅಷ್ಟೋ ಪ್ರಾವಿಡೆಂಟ್ ಫಂಡು, ಅದೂ ಇದೂ ಅಂತ ಹಣ ಸಂಗ್ರಹಣೆ ಆಗಿರುತ್ತೆ. ಅದನ್ನೆಲ್ಲ ತಗೊಂಡ್ ಹೋಗಿ ಯಾರ್ಗಾದ್ರೂ ಕೊಟ್ರೆ ನಾಳೆ ಅವನ ಸಮಯಕ್ಕೆ ಯಾರೇ ಕೊಡ್ತಾರೆ?" ಅಂತ ಗುರುಬಸಪ್ಪ ಅನ್ನುತ್ತಿದ್ದಂತೆ ಒಳಗಿಂದ ಬಂದ ನಾಗೇಶ,

"ಹೌದು. ನೀವು ಮಾಡೋದೆಲ್ಲ ನಿಮ್ಮ ಅಳಿಯನ ಹಿತಕ್ಕೆ. ಮಗಳ ಹಿತ ಮರೆತುಬಿಟ್ರಾ. ಹಣ ಇವತ್ತು ಹೋದ್ರೆ ನಾಳೆ ಸಂಪಾದ್ನೆ ಮಾಡಬಹುದು. ಆದ್ರೆ ಆದ್ರೆ ಮುಂದಿನ ಸೋಮವಾರ ನಾನು ಲಕ್ಷ ರೂಪಾಯಿ ಕೊಡ್ದೇ ಹೋದ್ರೆ ಅವ್ನು ನಿಮ್ಮ ಮಗಳನ್ನ ಸಾಯಿಸೇಬಿಡ್ತಾನಲ್ಲ ಆಗೇನ್ ಮಾಡ್ತೀರ. ಮತ್ತೆ ಅವಳನ್ನ ತರೋಕ್ಕೆ ಆಗುತ್ತಾ" ಅಂತ ಗಟ್ಟಿಯಾಗಿ ಕಿರುಚಿದ.

ಹತ್ತಿರ ಬಂದು ನಾಗೇಶನ ಬೆನ್ನ ಮೇಲೆ ಕೈ ಹಾಕಿ, "ನಾನೂ ಅದನ್ನೇ ಹೇಳ್ತಿರೋದು. ಒಂದ್ಸಾರಿ ಸತ್‌ಹೋದ ವ್ಯಕ್ತೀನ ಏನು ಮಾಡಿದ್ರೂ ಹಿಂದಕ್ಕೆ ಕರೆತರೋಕೆ ಆಗಲ್ಲ ಅಂತ."

ಸಮಾಧಾನ ಹೇಳಿದರು ಗುರುಬಸಪ್ಪ.

"ಅದೇನೇ ಆದ್ರೂ ನೀವು ಸ್ವಂತ ವಿಚಾರದಲ್ಲಿ ತಲೆ ಹಾಕೋದು ಯಾಕೇಂತ. ಅಲ್ಲ ಸಂಪಾದ್ನೆ ಮಾಡೋನು ನಾನು. ಅದನ್ನ ಹೇಗೆ ಬೇಕಾದ್ರೂ ಖರ್ಚು ಮಾಡೋ ಅಧಿಕಾರ ನಂಗಿಲ್ವೆ. ನೀವು ದೊಡ್ಡದಾಗಿ ಅವರಿಗೆ ಹೇಳ್ಬಿಟ್ರೆ ಅಡ್ವಾನ್ಸ್ ಕೊಡ್ಬೇಡಿ ಅಂತ. ಅವರೂ ಕೇಳ್ಬಿಟ್ರು. ಬೇಡ ಬಿಡಿ ನಾನೊಬ್ನೇ ಲಕ್ಷ ರೂಪಾಯಿ ಹೊಂದಿಸ್ಕೊಂಡು ಸುಶೀಲನ್ನ ಬಿಡಿಸಿಕೊಂಡು ಬರ್ತೀನಿ."

ಅಂದು ಮನೆಯಿಂದ ಹೊರಟ ನಾಗೇಶ.

ಅವನನ್ನು ತಡೆದು ಕಾಂತಮ್ಮ "ನಾಗೇಶ ದುಡುಕಬೇಡ ಕಣೋ. ನಿಧಾನಕ್ಕೆ ಯೋಚನೆ

ಮಾಡೋ'' ಅನ್ನುತ್ತಿದ್ದಂತೆ ಮನೇಲಿ ಫೋನ್ ರಿಂಗ್ ಆಯಿತು.

ಗುರುಬಸಪ್ಪ ಬಂದು "ನಾಗೇಶ ನಿಂಗೆ ಫೋನ್ ಬಂದಿದೆ.''

"ಯಾರು?''

"ಯಾವ್ದೋ ಹೊಸಾ ಧ್ವನಿ. ಯಾರೂಂತ ಕೇಳಿದ್ರೆ ಅವ್ನು ಮನೇಲಿ ಇದ್ರೆ ಕೊಡಿ. ಇಲ್ದಿದ್ರೆ ಫೋನ್ ಕೆಳಗಿಡ್ರಿ. ಪುರಾಣ ಹೇಳೋಕೆ, ಕೇಳೋಕೆ ಇದು ಟೈಮಲ್ಲ ಅಂದ.''

ನಾಗೇಶ ಯೋಚಿಸಿ "ಅಂದ್ರೆ ಅವನೇ ಇರಬೇಕು'' ಅಂತ ಒಳಗೆ ಓಡಿ ರಿಸೀವರ್ ಎತ್ತಿ "ಹಲೋ''ಅಂದ.

ಮಾತುಗಳನ್ನು ಕೇಳಿಕೊಂಡು ಆತಂಕದ ಧ್ವನಿಯಿಂದ,

"ಎಲ್ಲಿ ರಾಕ್ ಮೆಮೋರಿಯಲ್ಲಿಂದ ಉತ್ತರಕ್ಕೆ ಮೂರು ಕಿಲೋಮೀಟರು ದೂರಾನ... ಅರಳೀಮರ ಇದ್ಯಾ... ಅದರತ್ರ ಹಾಳು ದೇವಸ್ಥಾನನಾ... ಅದರ ಹಿಂದಿನ ಪಾಳು ಮಂಟಪದಲ್ಲಿ ದುಡ್ಡು ತಂದಿಡ್ಬೇಕಾ... ಅಲ್ಲ ಅಷ್ಟೆಲ್ಲ ಕಷ್ಟ ಯಾಕೆ, ನಮ್ಮನೆಗೇ ಬಂದು ಸುಶೀಲನ್ನ ಬಿಟ್ಟುದುಡ್ಡು ತಗೊಂಡ್ ಹೋಗಿ... ಇಲ್ಲ ಇಲ್ಲ... ನೀವು ಹೇಳಿದ ಹಾಗೇ ಆಗ್ಲಿ.... ಇಲ್ಲ ಯಾರಿಗೂ ಹೇಳಿಲ್ಲ.... ನಾನೊಬ್ಳೇ ಬರ್ತೀನಿ.... ಸೋಮವಾರ ರಾತ್ರಿ ಎಂಟಕ್ಕಾ... ಆಯ್ತು ಖಂಡಿತಾ ಬರ್ತೀನಿ... ಆಮೇಲೆ ಆಮೇಲೆ ಒಂದೇ ಒಂದ್ಸಾರಿ ಸುಶೀಲಳ ಹತ್ರ ಮಾತಾಡ್ಬೇಕಲ್ಲ. ಹೇಗಿದಾಳೆ. ಕೊಡಿ ಕೊಡಿ...: ಸುಶೀಲಾ ಹೇಗಿದೀಯಾ ಇನ್ನೊಂದ್ನಾಲ್ಕು ದಿನ ತಡ್ಕೊ... ಏನಂದೆ ಚನ್ನಾಗಿ ನೋಡ್ಕೋತಿದಾರಾ, ಗಾಯ ಎಲ್ಲ ವಾಸಿಯಾಗಿದ್ಯಾ... ಹೌದು... ಚನ್ನಾಗಿದಾರೆ. ನಾನು ನಿಮ್ಮನೆಯಿಂದಾನೇ ಮಾತಾಡ್ತಿದೀನಿ. ಕೊಡ್ತೀನಿ ಕೊಡ್ತೀನಿ ಇರು...'' ಅಂದು ಕಾಂತಮ್ಮನ ಕಡೆ ತಿರುಗಿ,

"ನಾನು ಇಷ್ಟ್ ದಿವಸ ಹೇಳ್ತಿದ್ದು ಸುಳ್ಳು ಅಂದ್ಯಲ್ಲ. ತಗೋ ನಿನ್ನ ಮಗಳ ಹತ್ರಾನೇ ಮಾತಾಡು'' ಅಂದು ರಿಸೀವರ್ ಕೊಟ್ಟ.

ಕಾಂತಮ್ಮ ಆಚ್ಚರಿಯಿಂದ ಬಂದು ರಿಸೀವರ್ ಕೈಲಿ ಹಿಡ್ಕೊಂಡಳು. ಗುರುಬಸಪ್ಪ ಹಿಂದೆಯೇ ನಿಂತರು.

"ಹಲೋ... ಹಲೋ... ಹಲೋ... ಸುಶೀಲ, ನಾನಮ್ಮ ನಿನ್ನಮ್ಮ ಮಾತಾಡ್ತಿರೋದು.'' ಅಂತ ಕಾಂತಮ್ಮ ಅಂದ್ರೂ ಆ ಕಡೆಯಿಂದ ಯಾರೂ ಮಾತಾಡ್ಲಿಲ್ಲ. ಗಾಭರಿಯಿಂದ ಪತಿಯ ಕಡೆ ನೋಡಿದರು.

ಗುರುಬಸಪ್ಪ ರಿಸೀವರ್ ಹಿಡಿದು ಹತ್ತಾರು ಸಾರಿ ಹಲೋ ಹಲೋ ಅಂತ ಕೂಗಿದರು. ನಾಗೇಶನ ಕಡೆ ಅಸಡ್ಡೆಯಿಂದ ನೋಡಿ,

"ಏನ್ರೀ ಪಿ. ಎ. ಇವತ್ತು ನನ್ನ ಭಾಷಣ ಕೇಳೋಕೆ ಇಷ್ಟೊಂದ್ ಜನ ಕೂತಿದ್ದಾರಲ್ಲ.''

"ಅದೇನು ದೊಡ್ಡ ವಿಷಯ ಅಲ್ಲ ಸಾರ್, ಇಲ್ಲಿರೋರೆಲ್ಲ ಕಿವುಡರು ಅಷ್ಟೇ.''

— ವಿ. ಎಸ್. ಶ್ರೀನಿವಾಸ್ ಪ್ರಸನ್ನ



"ಇಷ್ಟ್ ಹೊತ್ತೂ ಯಾರ್ಹತ್ರ ಮಾತಾಡ್ದ" ಅಂತ ಕೇಳಿದರು.

"ಅರೇ ಸುಶೀಲ ಲೈನಲ್ಲಿ ಇದ್ಲಲ್ಲ" ಅಂದು ನಾಗೇಶ ರಿಸೀವರ್ ಹಿಡಿದು "ಹಲೋ ಸುಶೀಲ... ಸುಶೀಲ..." ಅಂತ ಹತ್ತಾರು ಸಾರಿ ಕಿರುಚಿದ.

"ಲೈನ್ ಕಟ್ ಆಗಿದೆ. ಇನ್ನೊಂದ್ಸಲ್ಪ ಹೊತ್ತು ನಾನೇ ಮಾತಾಡ್ಬೇಕಿತ್ತು" ಅಂತ ತನ್ನಲ್ಲೇ ಗೊಣಗಿಕೊಂಡು "ಇಲ್ಲಿ ಮಾತಾಡ್ತಾ ನಿಂತಿರೋಕೆ ಸಮಯ ಇಲ್ಲ, ನಾ ಬರ್ತೀನಿ"ಅಂದೋನು ಸ್ವಲ್ಪ ದೂರ ಹೋಗಿ ಹಿಂದಕ್ಕೆ ಬಂದು,

"ಇಲ್ಲಿ ಮಾತಾಡಿದ್ದನ್ನ ಯಾರ ಹತ್ರಾನೂ ಹೇಳ್ಬೇಡಿ. ಹಾಗೇನಾದ್ರೂ ಹೇಳಿದ್ರೆ ಸುಶೀಲಳ ಜೀವಕ್ಕೇ ಅಪಾಯ" ಅಂದ.

ತಮ್ಮ ಹೋದದ್ದನ್ನೇ ನೋಡ್ತಾ ಕಾಂತಮ್ಮ "ಒಂದ್‌ಕ್ಷಣ ನನಗೇ ಭ್ರಮೆ ಹಿಡಿದ ಹಾಗಾಗಿತ್ತು. ಸುಶೀಲ ಲೈನಲ್ಲಿ ಇದಾಳೇನೋ ಅಂದ್ಕೊಂಡಿದ್ದೆ."

"ಅಲ್ಲ ಯಾವ್ದೇ ಫೋನಾದ್ರೂ ಇವನು ಹೀಗೇ ಮಾತಾಡ್ತಾನಲ್ಲ ಯಾಕೆ. ಇವತ್ತು ಫೋನ್ ಮಾಡ್ದೋನು ಒಳ್ಳೆ ಜೋರಾಗಿ ಮಾತಾಡ್ದ. ಅವನಿಗೆ ಫೋನ್ ನಂಬರ್‌ಗಳೆಲ್ಲ ಹೇಗೆ ಗೊತ್ತಿದೇಂತ."

"ಡೈರೆಕ್ಟರಿ ತೆಗೆದು ನೋಡಿದ್ರೆ ಗೊತ್ತಿರುತ್ತೆ. ಇಲ್ದಿದ್ರೆ ನಾಗೇಶನೇ ನಂಬರ್ ಕೊಟ್ಟಿರ್ತಾನೇನೋ. ಈಗ ಮುಂದೇನು ಮಾಡೋದ್ರಿ" ಅಂದು ಆತಂಕ ವ್ಯಕ್ತಪಡಿಸಿದರು ಕಾಂತಮ್ಮ.

"ನಂಗೇನೂ ಗೊತ್ತಾಗ್ತಿಲ್ಲ" ಅಂದರು ಗುರುಬಸಪ್ಪ.

೭

ಬೆಳಗ್ಗೆ ಹತ್ ಗಂಟೆಗೆ ಮೋಹನ್‌ರಾಮ್ ಕಛೇರಿಗೆ ಬಂದರು. ರೀಟ ಎದ್ದು ನಿಂತು "ಗುಡ್ ಮಾರ್ನಿಂಗ್ ಸರ್" ಅಂದಳು.

"ಗುಡ್ ಮಾರ್ನಿಂಗ್. ಹೌ ಆರ್ ಯು?"

"ಫೈನ್" ಅಂದು ನಕ್ಕಳು ರೀಟ.

"ಯೂ ಆರ್ ಆಲ್‌ವೇಸ್ ಫೈನ್" ಅಂದು ಕಣ್ಣು ಮಿಟುಕಿಸಿ ಒಳಗೆ ಹೋದರು ಮೋಹನ್‌ರಾಮ್.

"ಹಲೋ" ಅಂದರು ಗಣೇಶ್‌ರಾಮ್. "ಹೋದ ಕೆಲಸ ಏನಾಯ್ತು?"

"ಅರ್ಧ ಆಗಿದೆ. ಒಂದ್ ವಾರ ಬಿಟ್ಟುಹೋಗೋಣ ಅಂತ ಬಂದೆ. ಕೇಸ್ ಮಾತ್ರ ಬಹಳ ಇಂಟರೆಸ್ಟಿಂಗ್ ಆಗಿದೆ."

"ಅದಕ್ಕಿಂತ ಇಂಟರೆಸ್ಟಿಂಗ್ ಆಗಿರೋ ಕೇಸ್ ಒಂದು ಬಂದಿದೆ. ನಾನು ನಿಮಗಾಗಿ ಕಾಯ್ತಿದ್ದೆ."

"ನನಗಾ, ಯಾಕೆ ನೀವೇ ನೋಡ್ಕೋಬಹುದಿತ್ತಲ್ಲ."

"ಇಲ್ಲ ಅದನ್ನ ಹ್ಯಾಂಡಲ್ ಮಾಡೋಕೆ ನೀವೇ ಸರಿ" ಅಂದು ಬೆಲ್ ಆಗುತ್ತಿದ್ದ

ಫೋನ್‌ನ ರಿಸೀವರ್ ಎತ್ತಿದ.

ಹದಿನೈದು ದಿವಸಗಳಿಂದ ಪೆಂಡಿಂಗ್ ಇದ್ದ ಪೇಪರ್‌ಗಳತ್ತ ದೃಷ್ಟಿ ಹರಿಸಿದರು ಮೋಹನ್‌ರಾಮ್.

ರೀಟಳನ್ನು ಕರೆದು ಕೆಲವು ಕಾಗದಗಳನ್ನು ಬರೆಸಿದರು.

ಮಧ್ಯಾಹ್ನ ಊಟವಾದ ಮೇಲೆ ಮೋಹನ್‌ರಾಮ್ ಕೇಳಿದರು.

"ಹೇಳಿ ಅದೇನೋ ಇಂಟರೆಸ್ಟಿಂಗ್ ಕೇಸಿದೆ ಅಂದ್ರಲ್ಲ."

"ಹೇಳ್ತೀನಿ" ಅಂದು ಸಿಗರೆಟ್ ತೆಗೆದು ಬಾಯಿಗಿಟ್ಟುಕೊಂಡು ಹೊಗೆ ಬಿಡುತ್ತಾ ಪ್ರಾರಂಭಿಸಿದರು.

"ಲೂನಕ್ಕೂ ಇನ್ನೊಂದು ವಾಹನಕ್ಕೂ ಅಪಘಾತ. ಲೂನ ಅಪ್ಪಚ್ಚಿ. ಲೂನ ಸವಾರಿ ಮಾಡುತ್ತಿದ್ದಾಕೆಗೆ ವಿಪರೀತ ಗಾಯ. ಆಕೆ ಆಸ್ಪತ್ರೇಲಿ ಸಾವು. ಪೋಸ್ಟ್‌ಮಾರ್ಟಂ ಆದ್ಮೇಲೆ ಅವಳ ಗಂಡ, ತಂದೆ, ತಾಯಿ ಎಲ್ಲ ಬಂದರು. ಹೆಣ ತಗೊಂಡ್ ಹೋಗಿ ಸಂಸ್ಕಾರ ಮಾಡಿದರು. ತಿಥಿ ಕರ್ಮಗಳನ್ನು ಮಾಡಿದರು.

"ಹದಿನೈದು ದಿನ ಕಳೆದಿತ್ತು. ಗಂಡನಿಗೆ ಫೋನ್ ಬಂತು ಒಂದು ಲಕ್ಷ ರೂಪಾಯಿ ಕೊಟ್ರೆ ನಿನ್ ಹೆಂಡ್ತಿ ಕೊಡ್ತೀವೀಂತ. ಗಂಡ ನಂಬಲಿಲ್ಲ. ಫೋನ್ ಮಾಡ್ದೋನ್ನ ಬೈದ. ಎರಡು ದಿನ ಬಿಟ್ಟುಮತ್ತೆ ಫೋನು. ಹೀಗೆ ದಿನಕ್ಕೊಂದ್ಸಾರಿ, ಎರಡು ದಿನಕ್ಕೊಂದ್ಸಾರಿ ಫೋನು ಬರ್ತಲೇ ಇತ್ತು. ಒಂದ್ ದಿನ ಫೋನ್ ಮಾಡ್ದಾಗ ಅವನ ಹೆಂಡ್ತೀನೂ ಮಾತಾಡಿದ್ಲಂತೆ."

"ಹೆಂಡ್ತೀನೋ... ಹೆಂಡ್ತಿ ಥರ ಯಾರಾದ್ರೂ..."

ಮೋಹನ್‌ರಾಮ್ ಪ್ರಶ್ನಿಸಿದರು.

"ಸ್ವಲ್ಪ ಇರಿ. ನಾನು ಪೂರ್ತಾ ಹೇಳಿಬಿಡ್ತೀನಿ" ಅಂದು ಗಣೇಶ್‌ರಾಮ್ ಮುಂದುವರಿಸಿದರು.

ಪ್ರಶ್ನೆ–ಉತ್ತರ

ಪ್ರಿಯೆ
ಕೊರಳ ಕೊಂಕಿಸಿ
ಕಣ್ಣು ಮಿಟುಕಿಸಿ
ತನುವ ಬಳುಕಿಸಿ
ನೀ ನಿಂತ ಭಂಗಿ
ಅದು ಏಕೆಂದು
ಯಾರಿಗಾಗಿ ಎಂದು
ನಾ ಕೇಳುವ ಮೊದಲೇ
ನಿನ್ನ ಚೆಲುವಿನ ಕಣ್ಣು
ಒಲವಿನ ಉತ್ತರವ
ನನಗೆ ಹೇಳಾಗಿತ್ತು.

– ಎಸ್. ಪುರುಷೋತ್ತಮ್



"ಆಗ ಗಂಡ ನಂಬಿಬಿಟ್ಟ ಹೆಂಡ್ತಿ ಮಾತಾಡಿದ್ಲು ಅಂದ್ಮೇಲೆ ಅವಳು ಸತ್ತಿಲ್ಲ. ಅವಳನ್ನ ಏನಾದ್ರೂ ಮಾಡಿ ಬಿಡಿಸ್ಕೊಂಡು ಬರ್ಬೇಕು ಅಂತ ಪ್ರಯತ್ನ ಮಾಡ್ದ. ಸ್ನೇಹಿತರಿಗೆ ಹೇಳ್ದ, ನಂಬ್ಲಿಲ್ಲ. ನೆಂಟರಿಗೆ ಹೇಳ್ದ ಅವರೂ ನಂಬ್ಲಿಲ್ಲ. ಕೊನೆಗೆ ಎಲ್ಲ ಏನು ತೀರ್ಮಾನ ಮಾಡಿದ್ರು ಅಂದ್ರೆ ಅವನಿಗೆ ಹುಚ್ಚು ಹಿಡಿದಿದೆ ಅಂತ. ಯಾಕೇಂದ್ರೆ ಯಾವ್ದೇ ಫೋನು ಬಂದ್ರೂ ಅವನೇ ಮಾಡಿದಾನೆ ಅಂತ ಆಸಕ್ತಿಯಿಂದ ರಿಸೀವರ್ ಎತ್ತಿ ಮಾತಾಡ್ತಿದ್ದ. ಪೋಲೀಸ್ನೋರು, ಪತ್ತೇದಾರರು ಅಂತ ಹೋದ್ರೆ ನಿನ್ ಹೆಂಡ್ತೀನ ಸಾಯಿಸಿಬಿಡ್ತೀನಿ ಅಂತ ಹೆದರ್ಸಿದಾನಂತೆ. ಇಷ್ಟ್ ದಿವಸ ಒಬ್ನೇ ಹೇಗೋ ಒದ್ದಾಡ್ತಾ ಇದ್ದ. ಈಗ ವಿಧಿ ಇಲ್ದೆ ಮೊನ್ನೆ ನನ್ನ ಹತ್ರ ಬಂದಿದ್ದ. ನನಗೆ ಅವಳ ಕಥೆ ಕೇಳಿ ಈ ಅಸಾಮಿಗೆ ಸ್ಕ್ರೂ ಲೂಸಿರಬೇಕೂಂತ ಅನಿಸ್ತು. ಅವನ ಕೊಲೀಗ್ ಒಬ್ಬನ್ನ ಕರ್ದು ವಿಚಾರಿಸಿದೆ. ಅವರ ಅಕ್ಕ ಭಾವನ್ನ ವಿಚಾರಿಸಿದೆ. ಅವನು ಅಕ್ಕನ ಮಗಳನ್ನೇ ಮದುವೆ ಆಗಿರೋದು. ಅಕ್ಕ ಭಾವನೂ ಒಬ್ರೇ, ಅತ್ತೆ ಮಾವನೂ ಒಬ್ರೇ. ಎಲ್ಲರದೂ ಒಂದೇ ಅಭಿಪ್ರಾಯ, ಅವನಿಗೆ ಹುಚ್ಚು ಹಿಡಿದಿದೆ ಅಂತ. ಒಬ್ರು ಸೈಕ್ಯಾಟ್ರಿಸ್ಟ್ ಬೇರೆ ಅವನ ಸ್ಥಿತೀನ ವಿಚಾರಿಸೋಕೆ ಹೋದಾಗ ಅವರನ್ನ ಚೆನ್ನಾಗಿ ಬೈಯ್ದು ಕಳಿಸಿದನಂತೆ. ಈಗ ಸೋಮವಾರದೊಳಗೆ ಒಂದು ಲಕ್ಷ ರೂಪಾಯಿ ಹೊಂದಿಸಿ ಕೊಡಬೇಕಂತೆ. ಇಲ್ದಿದ್ರೆ ಹೆಂಡ್ತೀನ ಸಾಯಿಸಿಬಿಡ್ತೀನಿ ಅಂತ ಹೇಳಿದಾನಂತೆ.''

"ಅದ್ಸರಿ ದುಡ್ಡಿಗೇನು ಮಾಡ್ತಾನಂತೆ.''

"ದುಡ್ಡು ಅರೇಂಜ್ ಮಾಡ್ತಾನಂತೆ. ನೀವೇ ಹೇಳಿ ಸಾರ್ ದುಡ್ ಹೆಚ್ಚೋ, ಹೆಂಡ್ತಿ ಹೆಚ್ಚೋ ಅಂತ ನನ್ನನ್ನೇ ಕೇಳ್ದ. ಈಗ ಹೇಳಿ ನಾವು ಅವನಿಗೆ ಹೇಗೆ ಸಹಾಯ ಮಾಡಬಹುದು.''

ಮೋಹನ್‌ರಾಮ್ ಯೋಚಿಸಿದರು. ಯಾವ ಯಾವ ವಿಧದಲ್ಲಿ ಅವನಿಗೆ ಸಹಾಯ ಮಾಡಬಹುದು. ಅವನ ಸ್ಥಿತಿಗತಿ ಹೇಗಿರಬಹುದು ಅಂತ.

"ಇವತ್ತೋ ನಾಳೆನೋ ಅವನು ಬರ್ತಾನೆ. ಬಂದಾಗ ನಾವು ಏನಾದ್ರೂ ಹೇಳೋಕೆ ರೆಡಿಯಾಗಿರ್ಬೇಕು.'' ಅಂದರು ಗಣೇಶ್‌ರಾಮ್.

"ಒಂದ್ಕೆಲಸ ಮಾಡಿ. ನಿಮ್ಮ ಫೈಲ್ ಕೊಡಿ ಸ್ಟಡಿ ಮಾಡ್ತೀನಿ. ಹಾಗೇ ಅವನ ವಿಳಾಸ, ಮಿಕ್ಕೆಲ್ಲ ವಿವರಾನೂ ಕೊಡಿ. ಲೆಟ್ ಮಿ ಗೋ ಥ್ರೂ'' ಅಂದರು.

ಆಗ ರೀಟ ಬಂದು, "ಸಾರ್ ನಾಗೇಶ ಬಂದಿದಾರೆ'' ಅಂದಳು.

ಮೋಹನ್‌ರಾಮ್ ಕಡೆ ತಿರುಗಿ "ನೋಡಿದ್ರಾ ಹೇಳಿ ಕಳಿಸಿದ ಹಾಗೆ ಬಂದಿದಾನೆ ಅವನು. ಪ್ಲೀಸ್ ಸಿಡೌನ್. ಯೂ ಕೆನ್ ಟಾಕ್ ಟು ಹಿಮ್'' ಅಂದು ಅವನನ್ನು ಬರ ಹೇಳು ಅಂತ ರೀಟಳಿಗೆ ಹೇಳಿದ.

ಗಾಭರಿಯಿಂದ ಏದುಸಿರುಬಿಟ್ಕೊಂಡು ಬಂದ ನಾಗೇಶನನ್ನು ಗಣೇಶ್‌ರಾಮ್ ಗುರುತಿಸಲೇ ಇಲ್ಲ.

"ನಾನೇ ಸಾರ್ ನಾಗೇಶ''ಅಂತ ತಾನೇ ಪರಿಚಯಿಸಿಕೊಂಡ.

"ಓ ನಾಗೇಶ್, ಅದೇನು ಇವತ್ತು ಭಿಕ್ಷುಕನ ವೇಷ ಇಲ್ಲ. ಬೈ ದಿ ಬೈ ನನ್ನ ಕೊಲೀಗ್ ಮೋಹನ್‌ರಾಮ್'' ಅಂದು ಪರಿಚಯಿಸಿದರು ಗಣೇಶ್‌ರಾಮ್.

"ನಮಸ್ಕಾರ ಸಾರ್. ನನ್ ವಿಚಾರ ಎಲ್ಲ ಇವರಿಗೆ ಹೇಳಿದೀನಿ. ದಯವಿಟ್ಟು ಇಬ್ಬರಲ್ಲಿ

ಒಬ್ಬರು ಅಥವಾ ಇಬ್ಬರೂ ಸೇರಿ ನಂಗೆ ಸಹಾಯ ಮಾಡ್ಬೇಕು ಸಾರ್'' ಅಂದು ಕೈ ಜೋಡಿಸಿದ.

ಮೋಹನ್‌ರಾಮ್ ನಾಗೇಶನನ್ನು ಕುತೂಹಲದಿಂದ ನೋಡಿದರು. ಕೈ ಹಿಸುಕಿಕೊಂಡು ಆತಂಕದಿಂದ ಇಬ್ಬರ ಕಡೆಯೂ ನೋಡ್ತಿದ್ದ ನಾಗೇಶನ ಮುಖದಲ್ಲಿ ಬೆವರು ಪ್ರಾರಂಭವಾಗಿತ್ತು.

ಏನೋ ನೆನಪಾದವನಂತೆ, "ಹೇಳೋದು ಮರ್ತ್‌ಬಿಟ್ಟಿದ್ದೆ ಸಾರ್. ನೆನ್ನೆ ಅವನು ಫೋನ್ ಮಾಡಿದ್ದ ಸಾರ್. ಜೊತೆಗೆ ನಾನು ನನ್ನ ಹೆಂಡ್ತಿ ಜತೆನೂ ಮಾತಾಡ್ದೆ ಸಾರ್. ಈಗ ಅವನು ಸೋಮವಾರದವರೆಗೆ ಸಮಯ ಕೊಟ್ಟಿದಾನೆ ಸಾರ್. ಸೋಮವಾರ ರಾತ್ರಿ ಎಂಟು ಗಂಟೆಗೆ ರಾಕ್ ಮೆಮೋರಿಯಲ್‌ನಿಂದ ಉತ್ತರಕ್ಕೆ ಮೂರು ಕಿಲೋಮೀಟರು ದೂರದ ಅರಳೀಮರ, ಮರದ ಹತ್ತಿರ ಪಾಳು ದೇವಸ್ಥಾನ, ದೇವಸ್ಥಾನದ ಹಿಂದಿನ ಪಾಳು ಮಂಟಪದ ಬಳಿ ದುಡ್ಡು ತಗೊಂಡು ಹೋಗ್ಬೇಕಂತೆ ಸರ್. ನಾನು ಬರ್ತೀನೀಂತ ಹೇಳಿದೀನಿ'' ಅಂದ.

"ದುಡ್ಡು ಹೇಗೆ ಹೊಂದಿಸ್ತೀರ?''

"ಆಗ್ಲೇ ಹೊಂದಿಸ್ಬಿಟ್ಟಿದೀನಿ ಸಾರ್. ಮನೇಲಿ ರೆಡಿಯಾಗಿಟ್ಟಿದೀನಿ. ನಂಗೆ ಆಫೀಸ್ನೋರಾಗ್ಲಿ, ಸ್ನೇಹಿತರಾಗ್ಲೀ, ನೆಂಟರಾಗ್ಲೀ ಯಾರೂ ಸಹಾಯ ಮಾಡ್ಲಿಲ್ಲ. ನಾನೊಬ್ನೇ ಕಷ್ಟಪಟ್ಟು ಇರೋದನ್ನೆಲ್ಲ ಮಾರಿ ಹಣ ಹೊಂದ್ಸಿದೀನಿ. ಇನ್ನು ನೀವು ಹೇಗೆ ಹೇಳ್ತೀರ ಹಾಗೆ ಕೇಳ್ತೀನಿ ಸಾರ್.''

"ಒಂದ್ ವೇಳೆ ನಾವು ಈ ಕೇಸ್ ತಗೊಳಲ್ಲ ಅಂದ್ರೆ?''

ಮೋಹನ್‌ರಾಮ್ ಪ್ರಶ್ನಿಸಿದರು.

ಅನುಭವಕ್ಕೆ ಬರುವ ಮೊದಲು ಯಾವುದೂ ಒಳ್ಳೆಯದಲ್ಲ.

— ಜಾರ್ಜ್ ಇಲಿಯಾಸ್

ಸಮಸ್ಯೆ ಹಾಗೂ ಬಿಕ್ಕಟ್ಟುಗಳು ಉದ್ಭವಿಸಿದಾಗಲೇ ನಾವು ವಾಸ್ತವಿಕತೆಯ ಬಗ್ಗೆ ಚಿಂತಿಸಲಾರಂಭಿಸುತ್ತೇವೆ.

— ನೆಹರು

ದೃಗ್ಗೋಚರ ರಹಸ್ಯಗಳಲ್ಲೆಲ್ಲ ಸ್ಪರ್ಶ ಅನುಭವ ನೀಡುವ ವಸ್ತು ಚಿಂಕೆ.

— ಲೀ ಹಂಟ್

ರೊಕ್ಕ ಎರಡಕ್ಕೂ ದುಃಖ ಕಾಣಕ್ಕ.

— ಪುರಂದರದಾಸರು

ನಾವು ಧಾರಾಳವಾಗಿ ಉಪದೇಶ ಮಾಡುತ್ತೇವೆ. ವಿರಳವಾಗಿ ಆಚರಣೆಗೆ ತರುತ್ತೇವೆ.

— ವಿಲಿಯಮ್ ಅಲ್ಗೇರ್

ಸಂಗ್ರಹ : ವೈ. ಎಸ್. ಸಂಗಪ್ಪ



"ಅದ್ಹೇಗೆ ಸಾರ್. ಇಷ್ಟ್ ದಿವಸ ಆದ್ಮೇಲೆ, ಇನ್ನು ದಿನ ಹತ್ತಿರಕ್ಕೆ ಬಂದಿರುವಾಗ ಹೀಗಂದ್ರೆ ಹೇಗೆ ಸಾರ್?''

"ಹಾಗಲ್ಲ. ಒಂದ್ ಪಕ್ಷ ನಾವು ಹಾಗಂದ್ರೆ ಅಂತ ಕೇಳ್ದೆ.''

"ನೀವು ಆಗಲ್ಲ ಅಂದ್ರೆ ನಾನೇನೂ ಮಾಡಲ್ಲ. ಸೋಮವಾರ ರಾತ್ರಿ ಎಂಟು ಗಂಟೆಗೆ ಒಂದು ಲಕ್ಷ ರೂಪಾಯಿ ಇರೋ ಪೆಟ್ಟಿಗೆ ತಗೊಂಡು ಸೀದ ಅಲ್ಲಿಗೆ ಹೋಗ್ತೀನಿ. ಆಗಿದ್ದಾಗ್ಲಿ.''

ಅಂತ ನಿರ್ಧಾರಿತ ಧ್ವನೀಲಿ ಹೇಳಿದ ನಾಗೇಶ. ಮೋಹನ್‌ರಾಮ್ ಹತ್ತಿರ ಬಂದು ನಾಗೇಶನ ಬೆನ್ನು ತಟ್ಟಿ,

"ಗುಡ್ ಕೀಪ್ ಇಟ್ ಅಪ್ ದ ಛಾಲೆಂಜ್. ಯೋಚ್ನೆ ಮಾಡ್ಬೇಡಿ ನಾನು ನಿಮಗೆ ಸಹಾಯ ಮಾಡ್ತೀನಿ. ಸೋಮವಾರಕ್ಕೆ ಇನ್ನೂ ಎರಡು ದಿನ ಇದೆ. ಈ ಎರಡು ದಿನದಲ್ಲಿ ನೀವು ನಾನು ಹೇಳಿದ ಹಾಗೆ ಕೇಳಬೇಕು'' ಅಂದರು.

ನಾಗೇಶನಿಗೆ ಬಹಳ ಆನಂದವಾಯಿತು.

"ನೀವೊಬ್ರಾದ್ರೂ ನಂಗೆ ಸಿಂಪತಿ ತೋರಿಸ್ತಿದ್ದೀರಲ್ಲ. ತುಂಬಾ ಸಂತೋಷ ಸಾರ್. ಹೇಳಿ ಸಾರ್. ನೀವು ಹೇಗೆ ಹೇಳ್ತಿರೋ ಹಾಗೆ ಕೇಳೋಕೆ ನಾನು ತಯಾರು.''

"ಈ ಎರಡು ದಿನ ನೀವು ಮನೇಲೇ ಇರಿ. ಎಲ್ಲಿಗೂ ಹೋಗ್ಬೇಡಿ. ಎರಡು ಗಂಟೆಗೊಂದ್ಸಾರಿ ನಂಗೆ ಫೋನ್ ಮಾಡ್ತಿರಿ. ಅಥವಾ ನಾನೂ ಮಾಡ್ತೀನಿ. ನಿಮ್ಹತ್ರ ವೆಹಿಕಲ್ ಇದ್ಯಾ?''

"ಇದೆ ಸಾರ್.''

"ಸರಿ ನೀವು ಮನೆಯಿಂದ ಹೊರಡೋ ಮುಂಚೆ ನಂಗೆ ಫೋನ್ ಮಾಡಿ. ನಾನು ಹೇಳಿದ ಹಾಗೇ ಕೇಳಿ. ಬೇರೆ ಯಾವ್ದೇ ಫೋನ್ ಬಂದ್ರೂ ಅಟೆಂಡ್ ಮಾಡ್ಬೇಡಿ.''

"ಆಗ್ಲಿ ಸಾರ್. ಡೋರ್‌ಲಾಕ್ ಹಾಕ್ಕೊಂಡು ಒಳಗೇ ಕೂತ್ಬಿಟ್ಟಿರ್ತೀನಿ ಸಾರ್. ನಂಗೊಂದು ಸಮಾಧಾನ ಅಂದ್ರೆ ನೀವಾದ್ರೂ ನನ್ನನ್ನ ಅರ್ಥ ಮಾಡ್ಕೊಂಡ್ರಲ್ಲ ಅಂತ.''

"ಯೋಚ್ನೆ ಮಾಡ್ಬೇಡಿ ಹೋಗಿ.''

ನಾಗೇಶ ಇಬ್ಬರಿಗೂ ನಮಸ್ಕರಿಸಿ ಹೊರಟ.

ಗಣೇಶ್‌ರಾಮ್ ತಕ್ಷಣ ಕೇಳಿದರು.

"ಮೋಹನ್ ಏನು ನಿರ್ಧಾರ ಮಾಡಿದ್ರಿ. ಅವನನ್ನ ಪೂರಾ ನಂಬಿಬಿಟ್ರಾ?''

"ಪೂರಾ ಅಲ್ಲ ಸ್ವಲ್ಪ.''

"ಅಂದ್ರೆ?''

"ನಾಗೇಶ ಹೇಳೋದ್ರಲ್ಲಿ ಸ್ವಲ್ಪ ಸತ್ಯಾಂಶ ಇದೆ ಅನಿಸ್ತಿದೆ.''

"ಸತ್ಯಾಂಶ... ಅದ್ಹೇಗೆ ಇಷ್ಟ್ ಬೇಗ ಹಾಗನಿಸಿತು?''

"ನಾಗೇಶನ್ನ ಸೂಕ್ಷ್ಮವಾಗಿ ಅವಲೋಕಿಸಿದೆ. ನೀವು ಹೇಳಿದ ಹಾಗೆ ಅವನು ಮನೋರೋಗಿಯಾಗಿದ್ರೆ ಅವನನ್ನು ನಂಬೋದ್ರಿಂದ ಅವನು ಹೇಳೋ ಹಾಗೆ ಕೇಳೋದ್ರಿಂದ ಅವನಿಗೆ ಸಮಾಧಾನ ಆಗುತ್ತೆ. ಅದರಿಂದ ಅವನ ಮನೋರೋಗ ವಾಸಿಯಾಗಬಹುದು. ಅವನನ್ನು ನಂಬೋದ್ರಿಂದ ನಮಗೇನೂ ತೊಂದರೆ ಇಲ್ವಲ್ಲ.''

"ದೆನ್ ಹೌ ಷಲ್ ವಿ ಪ್ರೊಸೀಡ್?''

"ಹೇಳ್ತೀನಿ. ಸ್ವಲ್ಪ ಕೆಲಸ ಇದೆ. ಪೋಲೀಸ್ ಸ್ಟೇಷನ್, ಆಸ್ಪತ್ರೆ ಮುಂತಾದ ಕಡೆ ಹೋಗಿ ಬರ್ಬೇಕು. ಆಮೇಲೆ ಹೇಳ್ತೀನಿ. ಒಂದ್ ವೇಳೆ ನಾಗೇಶ ಹೇಳೋದೆಲ್ಲ ನಿಜವೇ ಆದ್ರೆ ಗಂಡ ಹೆಂಡ್ತೀನ ಒಂದು ಮಾಡಿದ ಪುಣ್ಯದಲ್ಲಿ ನಮಗೂ ಪಾಲಿರೋಲ್ವೆ?"

"ಅದ್ಹೇಗೆ ಸಾಧ್ಯ ಮೋಹನ್?"

"ಹೇಗೆ ಬೇಕಾದ್ರೂ ಸಾಧ್ಯ ಆಗಬಹುದು. ಹೇಗೆ ಸಾಧ್ಯ ಆಯ್ತು ಅನ್ನೋದಕ್ಕೆ ವಿ ಹ್ಯಾವ್ ಟು ವೈಟ್."

ಅನ್ನುತ್ತಿದ್ದಂತೆ ದಂಪತಿಗಳಿಬ್ಬರು ಕಚೇರಿಗೆ ಬಂದರು.

"ಬನ್ನಿ ಬನ್ನಿ, ಯಾರು ಬೇಕಿತ್ತು?"

"ನಾನು ಗುರುಬಸಪ್ಪ ಅಂತ. ಇವಳು ನನ್ನ ಹೆಂಡ್ತಿ ಕಾಂತಮ್ಮ ಅಂತ. ನಾವು ಗಣೇಶ್‌ರಾಮ್ ಅನ್ನೋರ್ನ ನೋಡ್ಬೇಕಿತ್ತು."

"ನಾನೇ ಗಣೇಶ್‌ರಾಮ್. ಇವರು ನನ್ನ ಕೊಲೀಗ್ ಮೋಹನ್‌ರಾಮ್. ಕೂತ್ಕೊಳಿ. ಏನು ಹೇಳ್ಬೇಕಿತ್ತು?"

ಖುರ್ಚಿಯಲ್ಲಿ ಕೂತು ಗುರುಬಸಪ್ಪ ಪ್ರಾರಂಭಿಸಿದರು.

"ನಮ್ಮ ಅಳಿಯ ನಿಮ್ಮ ಬಳಿ ಬಂದಿದ್ದಾಂತ ಕಾಣುತ್ತೆ. ನಾಗೇಶ್ ಅಂತ. ಅದೇ ಹೆಂಡ್ತೀನ ಹುಡುಕ್ಕೊಡಿ ಅಂತ."

"ಗೊತ್ತು ಹೊತ್ತು ಹೇಳಿ."

"ನೀವು ಅವನ ವಿಚಾರದಲ್ಲಿ ಏನು ನಿರ್ಧಾರ ಮಾಡಿದೀರ?"

"ಇನ್ನೂ ಏನೂ ನಿರ್ಧಾರ ಮಾಡಿಲ್ಲ. ನಿಮ್ಮ ಅಭಿಪ್ರಾಯ ಏನು?"

"ನಮಗಂತೂ ಏನೂ ಗೊತ್ತಾಗ್ತಿಲ್ಲ. ಹೆಂಡ್ತೀನ ಕಳ್ಕೊಂಡ. ಈಗ ಲಕ್ಷ ರೂಪಾಯಿ ಕಳ್ಕೊಳೋಕೂ ತಯಾರಾಗಿದಾನೆ. ಅವನನ್ನು ಹೇಗಾದ್ರೂ ಮಾಡಿ ಕಾಪಾಡೀಂತ."

"ಅವನು ನನ್ನ ಸ್ವಂತ ತಮ್ಮ. ಅವನಿಗ ಮಗಳನ್ನು ಕೊಟ್ಟು ಇದೇ ಊರಲ್ಲಿ ಸಂಸಾರ ಹೂಡಿಸಿದ್ದೆ." ಅಂದು ಕಣ್ಣೀರು ಹರಿಸಿದರು ಕಾಂತಮ್ಮ.

"ಅವನಿಗೆ ನಿಜವಾಗಲೂ ಬುದ್ಧಿಭ್ರಮಣೆಯಾಗಿದೆ ಸಾರ್. ಅವನು ಹೇಳೋದನ್ನ ಯಾರಾದರೂ ನಂಬೋಕಾಗುತ್ತಾ?"

"ನಂಬಿದ್ರೇನು ಕಷ್ಟ?" ಮೋಹನ್‌ರಾಮ್ ಪ್ರಶ್ನಿಸಿದರು.

"ಏನ್ಸಾರ್ ನೀವು ಹೇಳೋದು?"

"ನೀವು ಹೇಳೋ ರೀತಿ ಅವನು ಮನೋರೋಗಿನೇ ಆಗಿದ್ರೆ ಮೊದಲು ನೀವು ಮಾಡಬೇಕಾದ ಕೆಲಸ ಅವನು ಹೇಳಿದ್ದನ್ನೆಲ್ಲ ನಂಬೋದು. ಅದರಿಂದ ಅವನ ಮನೋರೋಗ

"ರಾಮೂ ಮಂಗನಿಗೂ ಮಾನವನಿಗೂ ಇರುವ ವ್ಯತ್ಯಾಸವೇನು?"

"ಮಂಗ ಚಡ್ಡಿಯೇ ಹಾಕುವುದಿಲ್ಲ ಸಾರ್!"

— ಎಲಿಯಾಸ್ ಲೋಬೋ



ಅರ್ಧ ಕಡಿಮೆ ಆಗುತ್ತೆ. ಇಲ್ಲಾಂದ್ರೆ ನಿಜ ಏನೂಂತ ಗೊತ್ತಾಗೋಲ್ವೆ?''

"ಅಲ್ಲ ಸಾರ್, ಅಂಗೈ ಹುಣ್ಣಿಗೆ ಕನ್ನಡಿ ಬೇಕೇ ಅಂತಾರಲ್ಲ ಹಾಗೆ. ಅಪಘಾತದಲ್ಲಿ ಸತ್‌ಹೋದ್ಲು, ಅವಳ ಅಂತ್ಯ ಸಂಸ್ಕಾರ, ತಿಥಿ ಎಲ್ಲ ಆಯ್ತು. ಈಗ ಯಾರೋ ಫೋನ್ ಮಾಡಿ ಲಕ್ಷ ಕೊಡು ಹೆಂಡ್ತಿ ಕೊಡ್ತೀನಿಂದ್ರೆ ಇವನು ನಂಬೋ ಬಿಡೋದೇ?''

"ತಪ್ಪೇನಿದೆ. ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡು ಅಂತಾರೆ ಗೊತ್ತಾ ಅಪಘಾತದಲ್ಲಿ ಸತ್ತದ್ದು, ಅಂತ್ಯ ಸಂಸ್ಕಾರ ಮಾಡಿದ್ದು ನಿಮ್ಮ ಮಗಳಿಗೇ ಅಂತ ಹೇಗೆ ಗೊತ್ತು?'' ಮೋಹನ್‌ರಾಮ್ ಪ್ರಶ್ನಿಸಿದ್ದಕ್ಕೆ ಗುರುಬಸಪ್ಪ, ಕಾಂತಮ್ಮನವರಿಗೆ ಅಚ್ಚರಿಯಾಗೋದು ಹೋಗಲಿ ಸ್ವತಃ ಗಣೇಶ್‌ರಾಮ್‌ಗೂ ಆಶ್ಚರ್ಯ ಆಯ್ತು.

"ಏನ್ ಹೇಳ್ತಿದೀರ ಸಾರ್?'' ಅಂದರು ಗುರುಬಸಪ್ಪ.

"ಅದನ್ನೇ ಹೇಳಿದ್ದು, ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡ್ಬೇಕು ಅಂತ.''

"ಅಂದ್ರೆ ನಮ್ಮ ಮಗಳು ಬದುಕಿದಾಳೆ ಅಂತೀರ?''

"ಎರಡು ದಿನ ತಡೆದರೆ ಗೊತ್ತಾಗುತ್ತೆ.''

"ಹಾಗಾದ್ರೆ ನಮ್ಮ ನಾಗೇಶ ಹುಚ್ಚ ಅಲ್ಲ?''

"ಅದೂ ಇನ್ನೆರಡು ದಿನ್ದಲ್ಲಿ ಗೊತ್ತಾಗುತ್ತೆ.''

"ಅಲ್ಲ ಸಾರ್, ನಾವು ಆಸ್ಪತ್ರೆಗೆ ಹೋಗಿದೀವಿ. ಮುಖ ಗುರುತಿಸೋಕೆ ಆಗ್ಲಿಲ್ಲ ಅಷ್ಟೊಂದು ಜಜ್ಜಿ ಹೋಗಿತ್ತು. ಅವಳ ಸೀರೆ, ತಾಳಿ, ಉಂಗುರ, ವಾಚು, ಎಲ್ಲಾನೂ ಗುರುತಿಸಿದ್ದೆವು. ಆಮೇಲೆ ಪೋಸ್ಟ್‌ಮಾರ್ಟಂ ಆಗಿ ಶರೀರ ವಾಪಸ್ ಕೊಟ್ರು. ಅವಳು ಓಡಿಸ್ತಿದ್ದ ಲೂನ ನೋಡಿದ್ರೇ ಗೊತ್ತಾಗೋದು ಅಪಘಾತ ಎಷ್ಟು ತೀವ್ರವಾಗಿತ್ತು ಅಂತ.''

"ಹಾಗಂತ ಒಂದನ್ನ ನೋಡಿ ಇನ್ನೊಂದನ್ನ ನಿರ್ಧಾರ ಮಾಡೋಕಾಗಲ್ಲ ಗುರುಬಸಪ್ನೋರೇ ಇಷ್ಟ್ ದಿವಸ ಆಗಿದ್ದೆಲ್ಲ ಆಯ್ತು. ಇನ್ಮೇಲೆ ಅವನ ತಂಟೆಗೆ ಹೋಗ್ಬೇಡಿ. ನಾನಿರ್ತೀನಿ ಅವನ ಜೊತೇಗೆ. ಏನೂ ತೊಂದ್ರೆ ಆಗದ ಹಾಗೆ ನೋಡ್ಕೋತೀನಿ.''

"ಅದೇನೋ ಅವನು ಒಂದು ಲಕ್ಷ ರೂಪಾಯಿ ಬೇರೆ ಹೊಂದಿಸ್ತಿದ್ದ ಅದನ್ನು ಕಳ್ಕೊತಾನೋ ಏನೋ?''

ಆತಂಕ ವ್ಯಕ್ತಪಡಿಸಿದರು ಕಾಂತಮ್ಮ. ಅದಕ್ಕೆ ಮೋಹನ್‌ರಾಮ್,

"ಅದ್ಹೇಗಮ್ಮ ಕಳ್ಕೋತಾನೆ. ನೀವು ಹೆಚ್ಚಿಗೆ ತಲೆ ಕೆಡಿಸ್ಕೋಬೇಡಿ. ಸೋಮವಾರದವರೆಗೆ ಜೀವ ಬಿಗಿ ಹಿಡ್ಕೊಂಡಿರಿ'' ಅಂದರು.

ಗುರುಬಸಪ್ಪ, ಕಾಂತಮ್ಮ ಅವರಿಬ್ಬರಿಗೂ ಕೈ ಮುಗಿದು ಹೊರಟರು.

ಅವರು ಹೋದೊಡನೆ ಗಣೇಶ್‌ರಾಮ್ ಬಂದು,

"ಇದೇನು ಹೊಸ ರೂಪ ಕೊಡ್ತಿದೀರ ಕೇಸ್‌ಗೆ'' ಅಂತ ಕೇಳಿದರು ಆಶ್ಚರ್ಯದಿಂದ.

"ಹೊಸ ರೂಪ ಅಲ್ಲ, ಒಂದು ಟರ್ನಿಂಗ್ ಪಾಯಿಂಟ್. ಎ ಪಾಸಿಬಲಿಟಿ. ಇನ್ನೇನು ಆಗೋಕೆ ಸಾಧ್ಯ ಇಲ್ಲ. ನಾಗೇಶ ಹೇಳೋದು ನಿಜ ಆದ್ರೆ ನನ್ನ ಥಿಂಕಿಂಗ್ ಕರೆಕ್ಟು. ನಾಗೇಶ ಹೇಳೋದು ಸುಳ್ಳಾದ್ರೆ ಅವರ ಥಿಂಕಿಂಗ್ ಕರೆಕ್ಟು. ಇದನ್ನ ಪರಿಶೀಲಿಸೋದ್ರಿಂದ ತೊಂದ್ರೆ ಏನಿಲ್ಲ. ನಾಗೇಶನ ವೀಕ್‌ನೆಸ್ ತಿಳ್ಕೊಂಡು ಅವನನ್ನು ಯಾರೋ ಎಕ್ಸ್‌ಪ್ಲಾಯ್ಟ್ ಮಾಡೋ ಸಾಧ್ಯತೇನೂ ಇದೆ. ಅದಕ್ಕೆ ಸೋಮವಾರದವರೆಗೆ ಕಾದ್ರೆ ಗೊತ್ತಾಗುತ್ತೆ''ಅಂತ ವಿವರಿಸಿದರು.



ಮೋಹನ್‌ರಾಮ್.

ಸಂಜೆಯ ಹೊತ್ತಿಗೆ ಮೋಹನ್‌ರಾಮ್ ಹೊರಗಡೆ ಸುತ್ತಾಡಿಕೊಂಡು ಬಂದರು. ಅವರಿಗೆ ಬೇಕಾದ ಮಾಹಿತಿಗಳ್ಯಾವುದೂ ಸಿಗಲಿಲ್ಲ. ನಿರಾಶೆ ಬೇಡ ಇನ್ನೊಮ್ಮೆ ಪ್ರಯತ್ನಿಸೋಣ ಅಂದ್ಕೊಂಡು ಕಚೇರಿಗೆ ಬಂದರು.

ಗಣೇಶ್‌ರಾಮ್ ಕೊಟ್ಟ ಫೈಲನ್ನು ಕೂಲಂಕುಷವಾಗಿ ಪರಿಶೀಲಿಸಿದರು. ಮುಂದಿನ ಎರಡು ದಿನಗಳಲ್ಲಿ ಏನು ಸಿದ್ಧತೆ ಮಾಡ್ಕೊಬೇಕಾಗುತ್ತೆ ಅಂತ ಚಿಂತಿಸಿದರು.

ಮರುದಿನ ಚಂದ್ರೂನ್ನೂ, ಜಯಂತಿಯನ್ನೂ ಬರ ಹೇಳಿದರು. ಅವರೊಂದಿಗೆ ಚರ್ಚೆ ಮಾಡಿದ ನಂತರ ನಾಗೇಶನ ವಾಸ್ತವಿಕ ಸ್ಥಿತಿ, ಇತ್ತೀಚೆಗೆ ಬದಲಾದ ಸ್ಥಿತಿಯ ಬಗ್ಗೆ ವ್ಯತ್ಯಾಸ ಗೊತ್ತಾಯ್ತು.

"ಅವರು ಮೊದಲು ಹಾಗಿರ್ಲಿಲ್ಲ ಸಾರ್. ಈಗಂತೂ ಕೂತ್ರೆ ನಿಂತ್ರೆ ಏನಾದ್ರೂ ಹೇಳ್ತಿರ್ತಾರೆ. ಒಟ್ನಲ್ಲಿ ಅವರ ಮನೋಭಾವ ಒಂದ್ ನಿಮಿಷ ಇದ್ ಹಾಗೆ ಇನ್ನೊಂದ್ ನಿಮಿಷ ಇರೋಲ್ಲ. ಏನೇನೋ ಮಾತಾಡ್ತಾರೆ. ಅವರು ಹೇಳಿದ್ದನ್ನ ಕೇಳದೇ ಹೋದ್ರೆ, ಅವರನ್ನ ನಂಬದೇ ಹೋದ್ರೆ ವಿಪರೀತ ಕೋಪ ಬಂದ್‌ಬಿಡುತ್ತೆ." ವಿವರಿಸಿದಳು ಜಯಂತಿ.

"ಆಫೀಸ್ನಲ್ಲಿ ಇರೋರ್ಗೆಲ್ಲ ಗೊತ್ತಾಗಿದೆ ಸಾರ್ ಅವನಿಗೆ ಏನೋ ಆಗಿದೇಂತ. ಆದ್ರೆ ಅವನು ಒಪ್ಕೊಳೋಕೆ ತಯಾರಿಲ್ಲ" ಅಂತ ಹೇಳಿದ ಚಂದ್ರು.

"ನೀವೆಲ್ಲ ಇಷ್ಟೆಲ್ಲ ಹೇಳಿದ್ರೂ ಅವನು ತನ್ನ ಪಟ್ಟು ಬಿಟ್ಟಿಲ್ಲ ಅದನ್ನೇ ಹೇಳ್ತಿದಾನೆ ಅಲ್ವೆ?"

"ಹೌದು ಸಾರ್."

"ಅಂದ್ಮೇಲೆ ಅದರಲ್ಲಿ ಒಂದು ಹತ್ತು ಭಾಗವಾದ್ರೂ ನಿಜ ಇದೆ ಅನ್ನೋಲ್ವೆ ನಿಮಗೆ?"

"ನೂರರಲ್ಲಿ ಒಂದು ಭಾಗದಷ್ಟು ನಂಬಿಕೆ ಕೂಡಾ ನಮಗಿಲ್ಲ."

"ಆದರೂನೂ ಹಾಗಂದು ಅವರ ಮನಸ್ಸೇಕೆ ನೋಯಿಸ್ತೀರ. ಅವರು ಹೇಳೋದನ್ನ ನಂಬೋದ್ರಿಂದ ನಿಮಗಾಗೋ ನಷ್ಟ ಏನು?"

"ನಂಬೋದು, ಬಿಡೋದು ಬೇರೆ ಪ್ರಶ್ನೆ. ಅವರ ಒಟ್ಬಾರೆ ಬದಲಾದ ನಡತೆಯೇ ಆಶ್ಚರ್ಯ ಹುಟ್ಟಿಸುತ್ತಲ್ಲ."

"ಇರ್ಲಿಬಿಡಿ. ಇನ್ಮೇಲೆ ಅವರನ್ನ ಏನೂ ಅನ್ನೋಕೆ ಹೋಗಬೇಡಿ. ಸಾಧ್ಯವಾದ್ರೆ ಅವರು ಹೇಳಿದ್ದಕ್ಕೆ ಯಸ್ ಯಸ್, ಯೂ ಆರ್ ಕರೆಕ್ಟ್ ಅಂತ ಹೇಳ್ತಿರಿ."

"ಇನ್ನೊಂದ್ ವಿಚಾರ ಸಾರ್."

"ಏನು?"

"ಅವನು ಇವತ್ತು ಆಫೀಸಿಗೆ ಬಂದಿಲ್ಲ. ಮನೆಗೆ ಫೋನ್ ಮಾಡ್ದೆ ಯಾರೂ ಫೋನ್ ತಗೊಳ್ಳಿಲ್ಲ. ಮನೆಗೆ ಹೋಗಿ ನೋಡ್ಕೊಂಡ್ ಬಂದೆ ಮನೆ ಬೀಗ ಹಾಕಿದೆ. ಎಲ್ಲಿ ಹೋದಾಂತ ಗೊತ್ತಿಲ್ಲ. ನಾನೂ ಅವನೂ ಕ್ಲೋಸ್ ಫ್ರೆಂಡ್ಸ್. ಇದೊಂದೇ ವಿಚಾರದಲ್ಲಲ್ಲ. ಬೇರೆ ಯಾವುದೇ ವಿಚಾರದಲ್ಲಾದ್ರೂ ನಂಗೆ ಫೀಲ್ ಆಗುತ್ತೆ."

"ಏನೂ ವರಿ ಮಾಡ್ಕೋಬೇಡಿ, ಬೇಜಾರೂಂತ ಎಲ್ಲಾದ್ರೂ ಹೋಗಿರಬಹುದು. ತನಗೆ ತಾನು ದ್ರೋಹ ಮಾಡ್ಕೊಳೋಷ್ಟು ಹೇಡಿ ಅವನಲ್ಲ. ನೀವು ಹೊರಡಿ. ಏನಾದ್ರೂ ಬೇಕಾದ್ರೆ ಹೇಳಿ ಕಳಿಸ್ತೀನಿ" ಅಂದರು ಮೋಹನ್‌ರಾಮ್.

ಅವರಿಬ್ಬರೂ ಹೋದ ಮೇಲೆ ಮೋಹನರಾಮ್ ರೀಟಾಗೆ ನಾಗೇಶನ ಮನೆ ಕನೆಕ್ಟ್ ಮಾಡೂಂತ ಕೇಳಿದರು. ಸ್ವಲ್ಪ ಸಮಯದ ನಂತರ ರೀಟ ಬಂದು,

"ಸಾರ್ ನಂಬರ್ ಕನೆಕ್ಟ್ ಆಗ್ತಿಲ್ಲ. ಡೆಡ್ ಆಗಿರಬಹುದು ಅಂತ ಎಕ್ಸ್‌ಚೇಂಜ್‌ಗೆ ಫೋನ್ ಮಾಡ್ದೆ. ಫೋನ್ ಡೆಡ್ ಅಂತ ಕನ್‌ಫರ್ಮ್ ಮಾಡಿದ್ರು'' ಅಂದಳು.

"ಓ ಮೈಗಾಡ್'' ಅಂದು ಕೈ ಕುಟ್ಟಿಕೊಂಡರು ಮೋಹನ್‌ರಾಮ್.

ಆಫೀಸ್‌ಬಾಯ್ ಕರೆದು ಒಂದು ಕಾಗದ ಕೊಟ್ಟು "ಇದನ್ನು ತಗೊಂಡ್ ಹೋಗಿ ನಾಗೇಶನ ಮನೆ ಏರಿಯಾಕೆ ಹೋಗೋ ಬೀಟ್ ಪೋಸ್ಟ್‌ಮ್ಯಾನ್‌ಗೆ ಕೊಟ್ಟು ನಾಗೇಶನ ಮನೆಯೊಳಕ್ಕೆ ಹಾಕೋಕ್ಕೆ ಹೇಳು. ನೀನು ಹೋಗಿ ಹಾಕ್ಬೇಡ. ಯಾರಾದರೂ ಗಮನಿಸಬಹುದು. ಅಲ್ಲೇ ಎಲ್ಲಾದ್ರೂ ಕೂತಿದ್ದು ಪೋಸ್ಟ್‌ಮ್ಯಾನ್ ಕಾಗದ ಮನೆಯೊಳಗೆ ಹಾಕಿದ ಅನಂತರ ಬಂದು ಹೇಳು''ಅಂತ ಕಳಿಸಿದರು.

ಒಂದು ಗಂಟೆಯ ಅನಂತರ ಜವಾನ ಬಂದು ಕಾಗದ ನಾಗೇಶನ ಮನೆಯೊಳಗೆ ಹೋದ ವಿಚಾರ ತಿಳಿಸಿದ. ಅವತ್ತೆಲ್ಲ ನಾಗೇಶನ ಫೋನ್ ಬರಲಿಲ್ಲ. ಮೋಹನ್‌ರಾಮ್‌ಗೆ ಚಿಂತೆಯಾಯ್ತು.

"ಫೋನ್ ಯಾರಾದ್ರೂ ಬೇಕೇಂದೇ ಕೆಡಿಸಿರಬೇಕಲ್ವೆ. ಫೋನ್ ಕೆಟ್ಟು ಹೋಗಿದ್ರೆ ಅವನಾದ್ರೂ ಇಲ್ಲಿಗೆ ಬರಬೇಕಿತ್ತಲ್ಲ'' ಅಂದರು ಗಣೇಶ್‌ರಾಮ್.

"ಈ ಜನಗಳಲ್ಲಿ ಸೀರಿಯಸ್‌ನೆಸ್ ಅನ್ನೋದೇ ಇಲ್ಲ. ಹೇಳಿದ್ದು ಬಿಟ್ಟು ಮಿಕ್ಕಿದ್ದೆಲ್ಲ ಮಾಡ್ತಾರೆ'' ಅಂತ ಗೊಣಗಿಕೊಂಡರು ಮೋಹನ್‌ರಾಮ್.

೧೦

ಅಂದೇ ಸೋಮವಾರ.

ವಿಪರ್ಯಾಸ

ಬಟ್ಟೆಯಾಗಿ
ನಿನ್ನ
ಸುತ್ತಿ ಕೊಳ್ಳುವೆ
ನೆಂದಾಗ
ಅವಳೆಂದಳು
ಬೇಡಾ
ಚಿಟ್ಟೆಯಾಗಿ
ನನ್ನ
ಮುತ್ತಿ ಕೊಳ್ಳೆಂದು!

– ಮನೋರಮಾ



ನಾಗೇಶ ಹೇಳಿದ ದಿನ. ದಿನಾ ಒಂಭತ್ತೂವರೆಗೆ ಬರ್ತಿದ್ದ ಮೋಹನ್‌ರಾಮ್ ಅಂದು ಎಂಟಕ್ಕೇ ಬಂದರು.

ರೀಟ ಬಂದದ್ದು ಮಾಮೂಲಿ ಒಂಭತ್ತಕ್ಕೆ.

"ರೀಟ ಇವತ್ತು ಏನಾದ್ರೂ ಮಾಡಿ ನಂಗೆ ಆ ನಂಬರ್ ಬೇಕೇ ಬೇಕು."

"ಟ್ರೈ ಮಾಡ್ತೀನಿ ಸಾರ್. ಇನ್ನೊಂದ್ ಐಡಿಯಾ ಸಾರ್."

"ನಂಬರ್ ಕನೆಕ್ಟ್ ಮಾಡೂಂದ್ರೆ ಐಡಿಯಾ ಹೇಳ್ತೀಯಲ್ಲ."

"ಹಾಗಲ್ಲ. ಈಗ ನೀವು ಏನಾದ್ರೂ ಮಾಡಿ ನಾಗೇಶನ್ನ ಕಾಂಟಾಕ್ಟ್ ಮಾಡ್ಬೇಕು ಅಷ್ಟೆ ತಾನೇ."

"ಹೌದು."

"ನಾನು ಹೋಗಿ ಬರ್ತೀನಿ ಬಿಡಿ. ಅವರನ್ನ ಕರ್ಕೊಂಡೇ ಬರ್ತೀನಿ. ಇಲ್ದಿದ್ರೆ ಫೋನ್ ಮಾಡಿಸ್ತೀನಿ."

"ರೀಟ ಆರ್ ಯೂ ಜೋಕಿಂಗ್ ಆರ್ ವಾಟ್. ಅವನ ಮನೆಗೆ ಬಂದು ಹೋಗಿ ಮಾಡೋರ್ನ ಯಾರೋ ಸೂಕ್ಷ್ಮವಾಗಿ ಗಮನಿಸ್ತಿದಾರೆ."

"ನೀವು ಅಪ್ಪಣೆ ಕೊಟ್ರೆ ಯಾವ್ದಾದ್ರೂ ವೇಷದಿಂದ ಹೋಗಿ ವಿಚಾರ ತಿಳಿಸಿ ಬರ್ತೀನಿ."

"ಅಪ್ಪಣೆ ಕೊಡೋದೇನು, ನಾವು ಹಿಡಿದಿರೋ ಅನೇಕ ಕೇಸ್‌ಗಳಿಲ್ಲೆಲ್ಲ ಕೊನೆ ಅಂಕದಲ್ಲಿ ನೀನಿದ್ದೇ ಇದೀಯ. ಗೋ ಅಹೆಡ್, ವಿಷ್ ಯು ಬೆಸ್ಟ್ ಆಫ್‌ಲಕ್" ಅಂದರು ಮೋಹನ್‌ರಾಮ್.

ಯಾವುದೇ ಫೋನ್ ಕರೆ ಬಂದರೂ ಅದು ನಾಗೇಶನಿಂದಲೇ ಅನ್ನೋ ಕುತೂಹಲ ಇರ್ತಿತ್ತು.

ಎರಡು ಫೋನ್ ಕರೆ ಬಂದವು.

ಒಂದು ಚಂದ್ರುದೂ, ಇವತ್ತೂ ಅವನು ಆಫೀಸಿಗೆ ಬಂದಿಲ್ಲ ಮನೇಲೂ ಇಲ್ಲ ಅಂತ.

ಇನ್ನೊಂದು ಗುರುಬಸಪ್ನೋರು ಫೋನ್ ಮಾಡಿ ನಮ್ ಹುಡುಗ ಎರಡು ದಿವಸಗಳಿಂದ ಪತ್ತೆಯಿಲ್ಲ ಅಂತ.

ಅವರಿಬ್ಬರಿಗೆ ಸಮಾಧಾನ ಹೇಳಿ ಸಂಜೆಯ ಏರ್ಪಾಡಿನ ಬಗೆಗೆ ಗಮನ ಹರಿಸಿದರು.

ಮಧ್ಯಾನ್ಹದ ಹೊತ್ತಿಗೆ ರೀಟ ವಾಪಾಸ್ ಬಂದಳು. ಕೆಲಸದವಳ ವೇಷದಿಂದ ಬಂದ ಅವಳನ್ನು ಗಣೇಶರಾಮ್ ಮೊದಲು ಗುರುತಿಸಲೇ ಇಲ್ಲ.

"ಹೇಳು ರೀಟ ಏನಾಯ್ತು" ಪ್ರಶ್ನಿಸಿದರು ಮೋಹನ್‌ರಾಮ್.

"ಫೈಲ್ಯೂರ್ ಸಾರ್! ಎಷ್ಟು ಬಾಗಿಲು ಬಡಿದ್ರೂ ಇಲ್ಲ, ಕಾಲಿಂಗ್ ಬೆಲ್ ಒತ್ತಿದ್ರೂ ಇಲ್ಲ. ಸ್ವಲ್ಪ ಹೊತ್ತಾದ್ ಮೇಲೆ ಪಕ್ಕದ ಮನೆಯವರು ಬಂದು ಅವರು ಊರಲಿಲ್ಲಮ್ಮ ಅಂತ ಹೇಳಿದ್ರು. ನಾಗೇಶನ ಮನೆ ಎದುರಿನ ಮೂಲೇ ಅಂಗಡೀಲಿ ನಿಂತಿದ್ದ ಇಬ್ಬರು ನನ್ನನ್ನೇ ತಿನ್ನೋ ತರಹ ನೋಡಿದ್ರು. ಅವರಲ್ಲೊಬ್ಬ ಕೆಲಸದವಳೂಂತ ಕಾಣುತ್ತೆ ಆದ್ರೂ ಎಷ್ಟ್ ಚೆನ್ನಾಗಿದ್ದಾಳೆ ಅಂದ" ಅಂದಳು.

"ಅವನು ಸರಿಯಾಗೇ ಹೇಳಿದ್ದಾನೆ" ಅಂದು ಕಣ್ಣು ಮಿಟುಕಿಸಿದ ಗಣೇಶ್‌ರಾಮ್.

ಮುಗುಳ್ನಕ್ಕು ಡ್ರೆಸ್ ಬದಲಾಯಿಸಲು ಹೋದಳು ರೀಟ.

"ಏನ್ಸಾರ್ ಈ ವ್ಯಕ್ತಿ ಎಲ್ಲಿ ಹೋದಾಂತನೇ ಗೊತ್ತಾಗ್ತಿಲ್ವಲ್ಲ. ಎರಡು ಗಂಟೆಗೊಂದ್ಸಾರಿ ಕಾಂಟಾಕ್ಟ್ ಮಾಡ್ತೂಂತ ಹೇಳಿದೀನಿ. ಇವತ್ತಿನ ಕೆಲಸ ಎಲ್ಲ ಹಾಳು, ಲೆಟ್ ಹಿಂ ಹ್ಯಾಂಗ್ ಹಿಂಸೆಲ್ಫ್'' ಅಂದರು ಮೋಹನ್‌ರಾಮ್,

"ಅಂದ್ರೆ ಇವತ್ತಿನ ಏರ್ಪಾಡು?''

"ಕ್ಯಾನ್ಸಲ್ ಮಾಡೋಣ ಅಷ್ಟೆ''

"ಅಂದ್ರೆ ಬಡಪಾಯಿ ಸತ್ತ.''

"ಅಲ್ಲ ಅವನು ಕೋ ಆಪರೇಟ್ ಮಾಡ್ದಿದ್ರೆ ನಾವೇನು ಮಾಡೋಕಾಗುತ್ತೆ, ವೀ ಆರ್ ಆಲ್ಸೋ ಹೆಲ್ಪ್‌ಲೆಸ್'' ಅಂದರು ಮೋಹನ್‌ರಾಮ್.

ಬ್ಯಾಂಕ್‌ನಿಂದ ನೋಟುಗಳು ಕಳವಾಗುತ್ತಿದ್ದ ಪ್ರಕರಣದ ಕೆಲವೊಂದು ಪೇಪರ್‌ಗಳನ್ನು ನೋಡ್ತಾ ಕೂತಿದ್ದರು ಮೋಹನ್‌ರಾಮ್. ಫೋನ್ ಶಬ್ದವಾಯಿತು.

ರೀಟ "ಸಾರ್ ನಿಮ್ಮ ಎಕ್ಸ್‌ಪೆಕ್ಟೆಡ್ ಕಾಲ್, ನಾಗೇಶ ಈಸ್ ಆನ್ ದಿ ಲೈನ್'' ಅಂದಳು.

"ಕನೆಕ್ಟ್ ಮಾಡು ಕ್ವಿಕ್.''

"ಹಲೋ ನಮಸ್ಕಾರ ಸಾರ್ ನಾಗೇಶ ಮಾಡೋದು'' ಅಂತ ನಾಗೇಶ ಅನ್ನುತ್ತಿದ್ದ ಹಾಗೆ ಮೋಹನ್‌ರಾಮ್,

"ರೀ, ನೆನ್ನೆಯಿಂದ ಎಲ್ರೀ ಹೋಗಿದ್ರಿ, ಎರಡು ಗಂಟೆಗೆ ಒಂದ್ಸಾರಿ ಫೋನ್ ಮಾಡಿ ಅಂತ ಹೇಳಿರ್ಲಿಲ್ವೇನ್ರೀ'' ಅಂತ ಕಿರುಚಿದರು.

"ಸಾರ್ ದಯವಿಟ್ಟು ಕ್ಷಮಿಸಿ, ಒಂದು ಅನಾಹುತ ಆಯ್ತು ಸಾರ್.''

"ಅನಾಹುತ್ವೇ,ಎಂಥದ್ರೀ ಅದು,ನಾನು ನಿಮಗೋಸ್ಕರ ಎಲ್ಲ ಕೆಲಸ ಬಿಟ್ಟು ಕೂತಿದೀನಿ.''

"ದಯವಿಟ್ಟು ನನ್ ಮಾತು ಕೇಳಿ ಸಾರ್, ನಾನು ನಿಮ್ಮಲ್ಲಿಗೆ ಬಂದದ್ದು ಅವನಿಗೆ ಗೊತ್ತಾಗಿದೆ, ಎಲ್ಲ ಪ್ಲಾನೂ ಬದಲಾಗಿದೆ.''

ನಾವು ಯಾವ ಮತಕ್ಕೆ ಸೇರಿದರೂ ನಮ್ಮ ವಿಕಾಸಕ್ಕಾಗಿ ನಮ್ಮ ಸ್ವಾತಂತ್ರ್ಯ ಹಾಗೂ ಸಮಾನತೆಗಾಗಿ ನಿರಂತರ ಹೋರಾಟ ನಡೆಸಬೇಕಾಗುತ್ತದೆ.

— ಅಂಬೇಡ್ಕರ್


ಮೂಗು ಮುಚ್ಚಿದರೆ ಬಾಯಿ ತಾನಾಗಿಯೇ ತೆರೆಯುತ್ತದೆ.

— ಗಾದೆ

ಕುರುಡನಿಗೆ ವಜ್ರ ಮತ್ತು ಅರಳು ಎರಡೂ ಒಂದೇ.

— ಗಾದೆ

ಸಂಗ್ರಹ : ಬಸವರಾಜ



"ಅಂದ್ರೆ!"

"ಹೇಳ್ತೀನಿ ಕೇಳಿ ಸಾರ್, ನಾನು ನಿಮ್ಮಾಫೀಸಿಂದ ಮನೆಗೆ ಬಂದ ರಾತ್ರಿ ಅವನು ಫೋನ್ ಮಾಡಿ ಹೆದರಿಸಿದ. ಅವತ್ತೇ ಹೇಳಿದೀನಿ ಪೋಲೀಸು, ಪತ್ತೇದಾರ್ರು ಅಂತ ಹೋದ್ರೆ ನಿನ್ ಹೆಂಡ್ತಿನ ನಾವು ಸಾಯಿಸಿಬಿಡ್ತೀವಿ ಅಂದ. ನಾನು ಗೋಗರ್ರೊಂಡೆ ಮಾಡಿದ್ದು ತಪ್ಪಾಯ್ತು ನೀವು ಹೇಳ್ದಂಗೆ ಕೇಳ್ತೀನಿ ಹೆಂಡ್ತೀನ ಸಾಯಿಸಬೇಡಿ ಅಂತ ಅಂಗಲಾಚಿದೆ. ಈಗ ಜಾಗ ಬದಲಾಯಿಸಿದ್ದಾನೆ ಸಾರ್. ಆ ಜಾಗದಲ್ಲಲ್ಲ ಕೋತಿ ಬಂಡೆಯಿಂದ ಮೂರು ಕಿಲೋಮಿಟರ್ ಹೋಗಿ ಅಲ್ಲಿಂದ ಬಲಕ್ಕೆ ತಿರುಗಿ ಒಂದು ಕಿಲೋಮೀಟರ್ ನಡೆದರೆ ಒಂದು ಆಲಮದಮರ ಸಿಕ್ಕುತ್ತೆ ಅದರ ಹತ್ರ ಅಂತೆ. ನಾನು ಒಪ್ಕಂಡಿದೀನಿ. ಲಕ್ಷ ರೂಪಾಯಿ ಸಿದ್ಧವಾಗಿಟ್ಟಿದೀನೀಂತ ಹೇಳ್ದೆ. ರಾತ್ರಿ ಹತ್ ಗಂಟೆಗೆ ಅಲ್ಲಿ ಬಾ ಅಂತ ಹೇಳಿದ್ದಾನೆ. ಹಾಗಂದೋನು ಅದೇನು ಮಾಡಿದ್ನೋ ಸ್ವಲ್ಪ ಹೊತ್ತಿಗೆ ನನ್ನ ಮನೆ ಲೈನು ಕಟ್ಟಾಯ್ತು. ಇನ್ನು ಹೇಗೇಂತ ನಿಮ್ಮನ್ನು ಕಾಂಟಾಕ್ಟ್ ಮಾಡ್ಲಿ."

"ಈಗ ಹೇಗೆ ಮಾಡ್ತಿದೀರಲ್ಲ ಹಾಗೇ ಮಾಡ್ಬೇಕಿತ್ತು."

"ಮಾಡೋಣಾಂತ ಹೊರಟೆ, ಆದರೆ ಎದುರಿನ ಅಂಗಡಿ ಕಟ್ಟೆ ಮೇಲೆ ಇಬ್ರು ಬೆಳಗಿಂದ ಕೂತಿದ್ದಾರೆ. ಎಲ್ ಹೋದ್ರೂ ಹಿಂಬಾಲಿಸ್ತಾರೇಂತ ಗೊತ್ತಾಯ್ತು, ವಾಪಾಸ್ ಮನೆಯೊಳಕ್ಕೆ ಹೋದೆ. ಈಗ ಹಿಂದಿನ ಬಾಗಿಲಿಂದ ಆಚೆ ಬಂದು ಪಕ್ಕದ ಮನೆಯಿಂದ ಫೋನ್ ಮಾಡ್ತಿದೀನಿ ಸಾರ್. ಅಲ್ಲಿಗೆ ಬರ್ತೀರ ಸಾರ್, ನನ್ನನ್ನು ಕಾಪಾಡ್ತೀರ ಸಾರ್."

"ಆಯ್ತು ಬರ್ತೀವಿ ಧೈರ್ಯವಾಗಿರಿ. ಆದರೆ ಹುಷಾರು ದುಡ್ಡು ಸುಮ್ನೆ ಕೊಟ್‌ಬಿಡ್ಬೇಡಿ, ಸಾಧ್ಯವಾದ್ರೆ ನೀವು ಹೊರಡೋ ಮುಂಚೆ ಇನ್ನೊಂದ್ಸಾರಿ ಫೋನ್ ಮಾಡಿ."

"ಆಯ್ತು ಸಾರ್ ಮಾಡ್ತೀನಿ."

ಸಮಾಧಾನದಿಂದ ಉಸಿರುಬಿಟ್ಟರು ಮೋಹನ್‌ರಾಮ್.

"ನೋಡಿದ್ರಾ ಒಂದ್ ವೇಳೆ ನೀವು ಹೇಳೋ ತರಹ ನಾಗೇಶ ಮನೋರೋಗಿಯಾಗಿದ್ರೆ ಇಷ್ಟೆಲ್ಲ ಚಿಂತಿಸಿ ನಿರ್ಧಾರ ಮಾಡೋಕ್ಕಾಗ್ತಿತ್ತೆ" ಅಂತ ಗಣೇಶರಾಮ್‌ಗೆ ಹೇಳಿ ರೀಟ ಕಡೆ ತಿರುಗಿ "ಪೋಲೀಸ್ ಸ್ಟೇಶನ್‌ಗೆ ಕನಕ್ಷನ್ ಕೊಡು" ಅಂದರು.

ಸಂಜೆಯ ಸಿದ್ಧತೆಯ ಬಗ್ಗೆ ಗಣೇಶರಾಮ್ ಜೊತೆಗೆ ಚರ್ಚಿಸಿಕೊಂಡರು ಮೋಹನ್‌ರಾಮ್.

"ಎನಿ ಹೆಲ್ಪ್ ಫ್ರಂ ಮೈ ಸೈಡ್." ರೀಟ ಆಫರ್ ಮಾಡಿದಳು.

ಮೋಹನ್‌ರಾಮ್ ನಕ್ಕರು. "ಹೌದು, ಯು ಮೇ ಬಿ ಆಫ್ ಸಂ ಹೆಲ್ಪ್. ನಾವು ಹೊರಡುವಾಗ ಹೇಳ್ತೀನಿ ಬರುವಂತೆ" ಅಂದು ಕೆನ್ನೆ ತಟ್ಟಿ ಆಚೆ ಹೊರಟರು.

* * * * *

ವಿವಿಧಭಾರತಿಯಲ್ಲಿ ಹಿಂದೀ ಹಾಡುಗಳನ್ನು ಕೇಳುತ್ತ ಮಲಗಿದ್ದ ನಾಗೇಶ. ಇವತ್ತೇನಾಗಬಹುದು. ಬದುಕಿಗೊಂದು ತಿರುವು ಸಿಗಬಹುದೇ, ಸಹಾಯ ಮಾಡೇ ಮಾಡ್ತೀವೀಂತ ಟೊಂಕ ಕಟ್ಟಿ ನಿಂತಿದ್ದಾರೆ ಗಣೇಶ್‌ರಾಮ್ ಮತ್ತು ಮೋಹನ್‌ರಾಮ್. ಎಷ್ಟ್ ಹೊತ್ತಿಗೆ ಹೊರಡೋದು. ಒಂಬತ್ತು ಗಂಟೆಗೆ ಹೊರಟ್ರಾಯ್ತು, ಹೋಗೋ ಹೊತ್ತಿಗೆ ಹತ್ತುಗಂಟೆಯಾಗಿರುತ್ತೆ. ಇವತ್ತು ಎಂಥಾ ಕತ್ತಲಿರುತ್ತೋ ಏನೋ. ಒಂದು ಟಾರ್ಚ್ ತಗೊಂಡ್ ಹೋಗ್ಬೇಕು. ಲಕ್ಷ ರೂಪಾಯಿ ಕೈಬಿಟ್ರೂ ಪರವಾಗಿಲ್ಲ. ಲಕ್ಷ ಅನಿಸಿದ ತಕ್ಷಣ ಎದ್ದು

ಹೋಗಿ ಬ್ರೀಫ್‌ಕೇಸ್ ತೆಗೆದು ಹಣ ನೋಡಿದ, ಕೈನಿಂದ ಸವರಿದ. ಸುಶೀಲಳ ಮೈ ಸವರಿದಂತಾಯ್ತು. ಫೋನ್ ಕಟ್ಟಾಗಿ ಒಳ್ಳೆ ತಾಪತ್ರಯ ಆಯ್ತಲ್ಲ ಅನಿಸಿತು. ರಿಸೀವರ್ ಎತ್ತಿ ನೋಡಿದ, ಫೋನ್ ಸರಿಯಿರಲಿಲ್ಲ. ಮತ್ತೆ ಬಂದು ಹಾಸಿಗೇಲಿ ಉರುಳಿದ. ಮಧ್ಯಾಹ್ನ ಮೂರು ಗಂಟೆಗೆ ಎದ್ದು ಆಚೆ ಬಂದ. ಮೂಲೆ ಅಂಗಡೀಲಿ ನಿಂತಿದ್ದೋರು ಇವನನ್ನೇ ನೋಡಿದರು. ಅವರಿಗೆ ಕೇರ್ ಮಾಡದವನಂತೆ ಒಂದು ಪ್ಯಾಕ್ ಗೋಲ್ಡ್ ಫ್ಲೇಕ್ ತಗೊಂಡು ಅಲ್ಲೇ ಒಂದು ಸಿಗರೆಟ್ ತೆಗೆದು ಬಾಯಿಗಿಟ್ಟುಕೊಂಡು ಕಡ್ಡಿಗೀರಿ ಬೆಂಕಿ ಹತ್ತಿಸಿಕೊಂಡು ಹೊಗೆಯುಗುಳುತ್ತ ಬಂದ. ನನ್ನ ಮನೆ ಮುಂದೆ ಒಂದಿಬ್ಬರನ್ನು ಕಾವಲಿಗೆ ಹಾಕಿದ್ದಾನೆ ಅಂದ್ಕೊಂಡು ಮನೆಗೆ ಬಂದು ಬಾಗಿಲು ಹಾಕಿಕೊಂಡ. ಸಮಯ ಸರಿಯುತ್ತಲೇ ಇಲ್ಲ ಅನಿಸಿತು.

ಒಂದು ವೇಳೆ ಮೋಹನ್‌ರಾಮ್ ಅಲ್ಲಿಗೆ ಬರ್ದೇ ಇದ್ರೆ...ಬರ್ದೇ ಇದ್ರೂ ಪರವಾಗಿಲ್ಲ. ದುಡ್ಡೂ ಹೋಗಿ ಹೆಂಡ್ತೀನೂ ಸಿಗದೇ ಹೋಗಬಾರ್ದು ಅಷ್ಟೆ. ಅವರು ಬಂದ್ರೆ ಖಂಡಿತಾ ಸಹಾಯ ಆಗುತ್ತೆ ಅನ್ನೋ ಯೋಚನೆ ಬಂತು. ಸಂಜೆ ಐದು ಗಂಟೆಯಾಯ್ತು.

ಫ್ರಿಜ್‌ನಲ್ಲಿದ್ದ ಹಾಲಿನಿಂದ ಕಾಫಿ ಮಾಡಿಕೊಂಡು ಕುಡಿದು ಒಂದು ಸಿಗರೆಟ್ ಹಚ್ಚಿದ.

ಇವತ್ತಿಗೆ ಸರಿಯಾಗಿ ನಲವತ್ತು ದಿವಸಗಳಾಯ್ತು ಅವಳಿಗೆ ಅಪಘಾತ ಅಂತ ಆಗಿ. ಕಂಟಕ ಪರಿಹಾರವಾಗಿ ಮತ್ತೆ ಅವಳು ಮನೆಗೆ ಬರುವಂತಾಯ್ತಲ್ಲ ಅದೇ ಸಾಕು ಅನಿಸಿತು.

ಅವಳು ಬಂದ್ಮೇಲೆ ಅಕ್ಕ, ಭಾವ, ಚಂದ್ರು, ಜಯಂತಿ ಎಲ್ಲರಿಗೂ ತೋರಿಸ್ಬೇಕು, ನೋಡ್ರಿ ನನ್ನನ್ನು ಹುಚ್ಚ ಅನ್ತಿದ್ರಲ್ಲ ನಾನು ಹುಚ್ಚನೋ ನೀವು ಹುಚ್ಚರೋ ನೀವೇ ತೀರ್ಮಾನಿಸಿ ಅಂತ ಸವಾಲೆಸೆಯಬೇಕು ಅನ್ನೋ ಕೆಚ್ಚು ಮೂಡಿತು.

ಆರು ಗಂಟೆಯವರೆಗೂ ಅದೂ ಇದೂ ಯೋಚಿಸುತ್ತಲೇ ಇದ್ದ. ಸಮಯ ಹತ್ತಿರಾವಾಗುತ್ತ ಬಂದ ಹಾಗೆ ಉದ್ವೇಗ ಪ್ರಾರಂಭವಾಯ್ತು. ಉದ್ವೇಗದಿಂದಾಗಿ ಸಿಗರೆಟ್ ಹೆಚ್ಚಾಗಿ ಸೇದಿದ. ಪ್ಯಾಕ್ ಖಾಲಿಯಾಗಿದ್ರಿಂದ ಮತ್ತೆ ಅಂಗಡಿಗೆ ಹೋದ.


ಈಗ ಇಬ್ಬರಲ್ಲಿ ಒಬ್ಬನೇ ಇದ್ದ. ಇನ್ನೊಬ್ಬ ಎಲ್ಲಿ ಹೋಗಿದ್ದನೋ ಅನ್ನುವಷ್ಟರಲ್ಲಿ ಅವನೂ ಬಂದ. ಅದೇ ಭಂಗಿ, ಅದೇ ನೋಟ. ನಾಳೆ ಪೋಲೀಸಿನವರು ಕೇಳಿದರೆ ಗುರುತಿಸೋಕೆ ಬೇಕಾಗುತ್ತೆ ಅನಿಸಿದ್ರಿಂದ ಅವರಿಬ್ಬರ ಮುಖಚರ್ಯೆಯನ್ನು ಮನದಲ್ಲಿ ಅಚ್ಚೊತ್ತಿಕೊಂಡ.

ಅಲ್ಲೇ ಸಿಗರೆಟ್ ಅಂಟಿಸಿಕೊಂಡು ಅವರಿಬ್ಬರ ಮುಖಕ್ಕೂ ಅಡರುವಂತೆ ಹೊಗೆಯುಗುಳಿ ಬಂದ. ಗೋಡೆ ಗಡಿಯಾರ ಎಂಟು ಬಾರಿ ಬಡಿದಾಗ ಇನ್ನಷ್ಟು ಉದ್ವೇಗವಾಯಿತು. ಇನ್ನೊಂದು ಗಂಟೇಲಿ ಹೊರಟ್ರೆ ಸಾಕು ಅನಿಸಿದರೂ ಆಗಲೇ ಪ್ಯಾಂಟು ಷರ್ಟ್ ಹಾಕಿಕೊಂಡ. ಪೆಟ್ಟಿಗೆ ತೆಗೆದಿಟ್ಟುಕೊಂಡ. ಅವತ್ತಿನ ಪೇಪರ್ ಓದುತ್ತ ಕೂತ. ಮೋಹನ್‌ರಾಮ್ ಹೇಳಿದ್ದು ನೆನಪಾಯ್ತು. ಹಿಂದಿನ ಬಾಗಿಲಿಂದ ಪಕ್ಕದ ಮನೆಗೆ ಹೋಗಿ ಅವರನ್ನು ಕೇಳ್ಕೊಂಡು ಮೋಹನ್‌ರಾಮ್‌ಗೆ

"ಪ್ರಶ್ನೆ ಕೇಳುವ ಹುಡುಗಿಯನ್ನೇ ಏಕೆ ಮದುವೆಯಾಗಬೇಕೆಂದಿರುವೆ?"

"ಯಾಕಂದ್ರೆ ನಂತರ ಆಕೆ ಉತ್ತರಕ್ಕಾಗಿ ಕಾಯುವ ಅಗತ್ಯವೇ ಇರುವುದಿಲ್ಲ."

– ಎಲಿಯಾಸ್ ಲೋಬೋ



ಫೋನ್ ಮಾಡಿದ.

"ಒಂಬತ್ತಕ್ಕೆ ಸರಿಯಾಗಿ ಹೊರಡ್ತೀನಿ ಸಾರ್, ಹಣಾನ ಸ್ಕೂಟರ್ ಡಿಕ್ಕೀಲಿ ಇಟ್ಟು ಲಾಕ್ ಮಾಡಿರ್ತೀನಿ. ಸ್ಕೂಟರಲ್ಲಿ ಮುಕ್ಕಾಲು ಗಂಟೆ ದಾರಿ, ನಿಮ್ಮ ತಯಾರಿ ಆಗಿದ್ಯಾ.''

"ಆಗಿದೆ ನೀವು ನಮಗೆ ಕಾಯಬೇಡಿ, ಸಹಜವಾಗೇ ಇರಿ, ಗಾಬರಿ ತೋರಿಸ್ಕೋಬೇಡಿ. ಹೆಂಡ್ತಿ ನಿಮ್ಮ ಕಡೆ ಬಂದ್ಮೇಲೆ ಹಣ ಕೊಡಿ.''

"ಸಾರ್ ಅವನೇನಾದ್ರೂ ಹಣ ಇಲ್ಲಿ ಕೊಡು, ನಮ್ಮನ್ನು ಫಾಲೋ ಮಾಡು ಹೆಂಡ್ತೀನ ಕೊಡ್ತೀವಿ ಅಂದ್ರೆ.''

"ಕೊಡಿ.ಅವರನ್ನು ಫಾಲೋ ಮಾಡಿ. ನಾವು ನಿಮ್ಮನ್ನು ಫಾಲೋ ಮಾಡ್ತೀವಿ,ಏನೇ ಆಗ್ಲಿ ಗಾಬರಿಪಟ್ಕೋಬೇಡಿ.''

"ಆಯ್ತು ಸಾರ್ ಥ್ಯಾಂಕ್ಯು ಸಾರ್.'' ಮೋಹನ್‌ರಾಮ್ ಡಿಸ್‌ಕನೆಕ್ಟ್ ಮಾಡಿದರು.

ಆ ಮನೆಯ ತಾತ ನರಸಿಂಹಯ್ಯ "ಅಂಜನೇಯನ ತಾಯಿತ ಕಟ್ಕೊಂಡ್ ಹೋಗಿ ಒಳ್ಳೇದಾಗುತ್ತೆ'' ಅಂದು ತಾಯಿತ ಅವನ ತೋಳಿಗೆ ಕಟ್ಟಿದರು.

ನರಸಿಂಹಯ್ಯನೋರ ಕಾಲಿಗೆ ನಮಸ್ಕರಿಸಿ ಹೊರಟ.

ಒಂಭತ್ತು ಗಂಟೆ ಹೊತ್ತಿಗೆ ಇನ್ನೆರಡು ಸಿಗರೆಟ್ ಖಾಲಿಯಾಗಿತ್ತು.

ಮನೆ ಬೀಗ ಹಾಕಿ ಹಣದ ಬ್ಯಾಗನ್ನು ಡಿಕ್ಕಿನಲ್ಲಿಟ್ಟು ಬೀಗ ಹಾಕಿ ಜರ್ಕಿನ್ ಸರಿ ಮಾಡ್ಕೊಂಡು ಸ್ಕೂಟರ್ ಸ್ಟಾರ್ಟ್ ಮಾಡಿದ. ಅಂಗಡಿಯಲ್ಲಿ ಅವರಿಬ್ಬರೂ ಇರಲಿಲ್ಲ.

ರಸ್ತೆಯಲ್ಲಿ ಸ್ಕೂಟರ್ ನಡೆಸುವಾಗ ಮುಂದಿನ ಕ್ಷಣಗಳದ್ದೇ ಯೋಚನೆ.

ಕೋತಿ ಬಂಡೆಯ ಬಳಿ ಬರುವಾಗ ಒಂಭತ್ತೂವರೆಯಾಗಿತ್ತು. ಅಲ್ಲಿಂದ ಬಲಕ್ಕೆ ತಿರುಗಿ ಆಲದಮರ ತಲಪಿದಾಗ ಅವನು ಹೇಳಿದ ಸಮಯಕ್ಕಿಂತ ಇನ್ನು ಮುಂಚೆಯೇ ಬಂದಿದೀನಿ ಅನಿಸ್ತು. ಅಲ್ಲೆಲ್ಲ ವಿಪರೀತ ಕತ್ತಲು. ಎಲ್ಲೋ ದೂರದಲ್ಲೊಂದು ರಸ್ತೆ ದೀಪ. ಹುಳು ಹುಪ್ಪಟೆಗಳ ಧ್ವನಿ, ನೀರವತೆಯ ಭೀಕರ ಏಕಾಂತ ನಾಗೇಶನಲ್ಲಿ ಚೂರು ಚೂರು ಭಯವನ್ನು ಹುಟ್ಟಿಸುತ್ತಿತ್ತು.

ಸ್ಕೂಟರಿಂದ ಇಳಿದು ಸ್ಟಾಂಡ್ ಹಾಕಿ ಸಿಗರೆಟ್ ಹಚ್ಚಿದ. ಸುತ್ತಮುತ್ತ ದೃಷ್ಟಿಸಿದ. ಯಾರೂ ನಡೆದು ಬರೋದು ಕಾಣ್ಲಿಲ್ಲ. ವಾಹನವೂ ಕಾಣ್ಲಿಲ್ಲ. ಮೋಹನ್‌ರಾಮ್ ಕಡೆಯವರು ಎಲ್ಲಿದಾರೋ, ಎಲ್ಲಿ ಅವಿತಿಟ್ಕೊಂಡಿದಾರೋ ಅಂತ ಯೋಚಿಸುತ್ತಾ ಹೊಗೆಬಿಟ್ಟ.

ಹತ್ತು ಗಂಟೆಗೆ ಸರಿಯಾಗಿ ದೂರದಲ್ಲಿ ಒಂದು ವಾಹನ ಬರ್ತಾ ಇರೋ ಸದ್ದು ಕೇಳಿಸಿತು. ದೀಪವನ್ನೇ ಹಾಕಿಕೊಳ್ಳದೆ ಒಂದು ವ್ಯಾನ್ ಬರುತ್ತಿತ್ತು. ಒಳಗೆ ಯಾರ್‍ಯಾರು ಕೂತಿದಾರೇಂತ ಕೂಡಾ ಕಾಣುತ್ತಿರಲಿಲ್ಲ. ಕುತೂಹಲದಿಂದ ವ್ಯಾನನ್ನೇ ಗಮನಿಸಿದ. ಆ ಪ್ರದೇಶಕ್ಕೆ ಬಂದ ವ್ಯಾನು ಒಂದು ಪ್ರದಕ್ಷಿಣೆ ಹಾಕಿ ನಾಗೇಶನಿಗೆ ಸ್ವಲ್ಪ ದೂರದಲ್ಲಿ ನಿಂತಿತು. ನಾಗೇಶ ರೆಪ್ಪೆ ಆಡಿಸದೇ ನೋಡಿದ. ವ್ಯಾನಿನಿಂದ ಒಬ್ಬ ದಡೂತಿ ಆಸಾಮಿ ಕೆಳಗಿಳಿದ.

ಕೂಡಲೇ ನಾಗೇಶ "ನಮಸ್ಕಾರ ಸಾರ್'' ಅಂದ.

ನಾಗೇಶನನ್ನು ಮೇಲಿನಿಂದ ಕೆಳಗಿನವರೆಗೆ ನೋಡಿ "ನೀನೆಯೋ ನಾಗೇಶ'' ಅಂತ ಕೇಳಿದ.

"ಹೌದು ಸಾರ್, ನಾನೇ'' ಅಂದು ವ್ಯಾನ್ ಕಡೆ ನೋಡಿದ.

"ಏಯ್ ಅಲ್ಲೇನ್ ನೋಡ್ತಿಯ ಇಲ್ಲಿ ನೋಡು. ತಂದಿದೀಯ ರೊಕ್ಕ?''

"ತಂದಿದೀನಿ ಸಾರ್. ನನ್ ಹೆಂಡ್ತಿ...''

"ಒಳಗೆ ಕೂತಿದಾಳೆ. ಒಂದ್ಕಾತು...''

"ಹೇಳಿ ಸಾರ್.''

"ಲಕ್ಷ ಕೊಡು ಹೆಂಡ್ತೀನ ಕೊಡ್ತೀನಿ. ಆದ್ರೆ ಹೆಂಡ್ತೀನ ಮನೆಗೆ ಕರ್ಕೊಂಡ್ ಹೋದ್ಮೇಲೆ ಆ ಶ್ರೀರಾಮಚಂದ್ರನಂಗೆ ನಡ್ಕೋಬೇಡ. ನಂಗೆ ಬೇಕಾಗಿದ್ದು ದುಡ್ಡು. ಅದಿಕ್ಕೆ ಅವಳನ್ನ ನಮ್ಮ ತಾಯಿ ಹಂಗೆ ನೋಡ್ಕೊಂಡಿದೀನಿ. ಎಲ್ಲಿ ತೆಗಿ ದುಡ್ಡು'' ಅಂದ.

ಡಿಕ್ಕಿಯಿಂದ ಚೀಲ ತೆಗೆದು "ತಗೊಳಿ ಸಾರ್. ಎಲ್ಲ ಐವತ್ತು, ಇಪ್ಪತ್ತರ ನೋಟು. ಸುಮ್ನೆ ನೂರರ ನೋಟ್ಯಾಕೆ ಅಂತ ತರ್ಲಿಲ್ಲ'' ಅಂದು ಚೀಲ ಕೊಟ್ಟ.

ನೋಟಿನ ಕಂತೆಗಳನ್ನು ನೋಡಿ ನಾಗೇಶನನ್ನು ನೋಡಿ "ಸರಿಯಾಗಿದ್ಯೋ?'' ಅಂತ ಕೇಳಿದ.

"ಒಂದ್ ನೋಟೂ ಕಡಿಮೆಯಾಗಿಲ್ಲ. ನನ್ ಹೆಂಡ್ತೀನ ಬರಹೇಳಿ ಸಾರ್.''

"ನಾನೇನು ಹೇಳೋದು, ನೀನೇ ಕೂಗು ಬರ್ತಾಳೆ.''

"ಸುಶೀಲಾ, ಸುಶೀಲಾ'' ಅಂತ ಕೂಗಿದ.

ತನ್ನ ಕಣ್ಣನ್ನೇ ನಂಬಲಾರದವನಂತೆ ಬಿಳೀ ಸೀರೆಯುಟ್ಟಿದ್ದ ಸುಶೀಲ ಕೆಳಗಿಳಿದು ಓಡೋಡಿ ಬಂದು ನಾಗೇಶನನ್ನು ತಬ್ಬಿದಳು. ಕನಸೋ, ನನಸೋ ಒಂದೂ ಅರಿವಾಗದಂತೆ ಸುಶೀಲಳನ್ನು ಬಿಗಿಯಾಗಿ ತಬ್ಬಿ ಮುದ್ದಾಡಿದ ಎದುರಿಗಿರುವವನನ್ನೂ ಮರೆತು.

ಏನಾಯಿತೋ ಏನೋ, ಗಾಳಿಯಲ್ಲಿ ಗುಂಡು ಹಾರಿದ ಸದ್ದು. ಸುಶೀಲ, ನಾಗೇಶ ಇಬ್ಬರೂ ಬೆಚ್ಚಿದರು. ಧಡಿಯನೂ ಬೆಚ್ಚುವ ಹೊತ್ತಿಗೆ ಸುತ್ತಮುತ್ತಲಿಂದ ಹತ್ತಾರು ಜನ ಬಂದು ವ್ಯಾನಿನಲ್ಲಿದ್ದ ಇನ್ನಿಬ್ಬರನ್ನೂ ಧಡಿಯನನ್ನೂ ಸುತ್ತುವರಿದು ಬಂಧಿಸಿದರು.

ಮೋಹನ್‌ರಾಮ್‌ನನ್ನು ಗುರುತಿಸಿದ ನಾಗೇಶ. ಮೋಹನ್‌ರಾಮ್ ಧಡಿಯನಿಂದ ಹಣದ ಚೀಲ ಕಿತ್ಕೊಂಡು ಕೆನ್ನೆಗೆ ರಪ್ಪೆಂದು ಬಾರಿಸಿದರು. ಧಡಿಯ ತತ್ತರಿಸಿದ.

ಸುಶೀಲಳನ್ನು ತಬ್ಬಿದ ಹಿಡಿತ ಸಡಿಲಿಸಿರಲಿಲ್ಲ ನಾಗೇಶ. ಆನಂದದ ಕಣ್ಣೀರು ಸುರಿಸುತ್ತಿದ್ದಳು.

ಮಫ್ತಿಯಲ್ಲಿದ್ದ ಇನ್‌ಸ್ಪೆಕ್ಟರ್ ಧಡಿಯನಿಗೂ, ಇನ್ನಿಬ್ಬರಿಗೂ ಕೈಗೆ ಕೋಳ ತೊಡಿಸಿ ಕರೆದುಕೊಂಡು ಹೋದರು.

"ಏನಪ್ಪ ಆರ್ ಯೂ ಹ್ಯಾಪಿ ನೌ'' ಅಂತ ಕೇಳಿದರು ಮೋಹನ್‌ರಾಮ್.

"ವೈ ನಾಟ್ ಸಾರ್, ನನ್ನ ಹೆಂಡ್ತಿ ಬದುಕಿದ್ದಾಳೆ ಅನ್ನೋದರ ಬಗ್ಗೆ ಗಣೇಶರಾಮ್‌ಗೆ ಅನುಮಾನವಿತ್ತು. ಏನ್ಸಾರ್ ಈಗ್ಲಾದ್ರೂ ನಂಬ್ತೀರ ನನ್ನ ಹೃದಯದ ಭಾವನೆ ಸರೀಂತ?'' ಪ್ರಶ್ನಿಸಿದ ನಾಗೇಶ.

"ಮೇಡಂ, ಇಷ್ಟ್ ದಿವಸ ಎಲ್ಲಿದ್ರಿ, ಏನ್ಕಥೆ, ಇದೆಲ್ಲ ಹೇಗಾಯ್ತು?'' ಮೋಹನ್‌ರಾಮ್ ಕೇಳಿದರು.

"ನನಗೊಂದೂಅರ್ಥ ಆಗ್ಲಿಲ್ಲ ಸಾರ್. ಅವತ್ತು ಲೂನದಲ್ಲಿ ಅಮ್ಮನ ಮನೆಗೆ ಹೋಗ್ತಿದ್ದೆ. ಎದುರಿಂದ ಒಂದು ವೆಹಿಕಲ್ ತುಂಬಾ ಸ್ಪೀಡಾಗಿ ಬರ್ತಿತ್ತು. ಅಪಘಾತ ಆಗಬಹುದು ಅಂದ್ಕೊಂಡೆ. ಆಗೇ ಆಯ್ತು. ಲೂನದಿಂದ ಕೆಳಗೆ ಬಿದ್ದಿದ್ದೊಂದು ಗೊತ್ತು. ನಂಗೆ

ಎಚ್ಚರವಾದಾಗ ಯಾವ್ದೋ ಮನೇಲಿದ್ದೆ. ಇಬ್ಬರು ಮೂವರು ಅಪರಿಚಿತರು. ಮೈ ಕೈ ಎಲ್ಲ ವಿಪರೀತ ನೋವು. ಒಬ್ಬ ಬಂದು ಹಣೆ ಸವರಿ "ಹೇಗಿದೀರಮ್ಮ" ಅಂತ ಕೇಳಿದ.

"ಅವನ ಕೈ ಕಿತ್ ಹಾಕಿ ಯಾರು ನೀನು, ನನ್ನನ್ನ ಇಲ್ಲಿಗೆ ಯಾಕೆ ಕರ್‍ಕೊಂಡ್ ಬಂದೇಂತ ಕೇಳ್ದೆ.

"ಅಪಘಾತ ಆಗಿ ಬಿದ್ದಿದ್ರಿ. ಯಾರಾದ್ರೂ ಆಗ್ಲಿ ಅಂತ ಇಲ್ಲಿಗೆ ಕರ್‍ಕೊಂಡ್ ಬಂದು ಆರೈಕೆ ಮಾಡಿಸಿದೆ. ಈಗ ನೀವು ಹೇಳಿ, ನೀವು ಯಾರ ಮನೆಯವರು, ಏನೂಂತ. ಅಲ್ಲಿಗೆ ಕಳಿಸೋ ಏರ್ಪಾಡು ಮಾಡ್ತೀನೀಂದ. ಸರಿ ನಾನು ಇವರ ಹೆಸರು, ಅಪ್ಪ ಅಮ್ಮನ ಹೆಸರು, ಫೋನ್ ನಂಬರು ಎಲ್ಲ ಕೊಟ್ಟೆ. ಆದರೆ ಒಂದು ವಾರ ಆಯ್ತು, ಏನೂ ಸಮಾಚಾರವೇ ಇಲ್ಲ. ಆಮೇಲೆ ಒಂದಿನ ಗೊತ್ತಾಯ್ತು. ಇವರಿಂದ ಒಂದು ಲಕ್ಷ ರೂಪಾಯಿ ಕೇಳಿದಾನೇಂತ. ಎರಡು ದಿನ ಇವರ್ಹತ್ರ ಮಾತೂ ಆಡ್ದೆ. ಅವತ್ತು ಅಮ್ಮನ ಹತ್ರ ಮಾತಾಡ್ಬೇಕು ಅನ್ನುವಾಗ ಲೈನ್ ಕಟ್ ಮಾಡ್ದ. ಮೊನ್ನೆ ಅವನೇ ಹೇಳ್ದ. ಸೋಮವಾರ ನಿನ್ನ ಗಂಡ ಲಕ್ಷ ತಂದು ಕೊಡ್ತಾರಂತೆ. ನಿನ್ನನ್ನ ಅವನಿಗೆ ಒಪ್ಪಿಸ್ತೀನೀಂತ." ವಿವರಣೆ ಕೊಟ್ಟಳು ಸುಶೀಲ.

ತಕ್ಷಣ ನಾಗೇಶ "ಅದ್ಸರಿ, ನಿನ್ನನ್ನ ಹೇಗೆ ನೋಡ್ಕೊಂಡ ಅವನು"ಅಂತ ಕೇಳಿದ.

"ಚನ್ನಾಗಿ ನೋಡ್ಕೊಂಡ. ನಾನು ಹೀಗೆ ಮಾಡ್ತಿದೀನೀಂತ ತಪ್ಪು ತಿಳ್ಕೊಬೇಡಿ. ಯಾವ್ದೋ ಬಿಸಿನೆಸ್ಸಲ್ಲಿ ಲಾಸ್ ಆಯ್ತು. ಅದಿಕ್ಕೆ ಈಗ ಅರ್ಜಂಟಾಗಿ ದುಡ್ಡು ಬೇಕಾಗಿದೆ. ನಿಮಗೆ ಯಾವ ರೀತಿಯ ತೊಂದರೇನೂ ಮಾಡಲ್ಲ. ನಿಮ್ಮನ್ನ ಗೌರವದಿಂದ ನೋಡ್ಕೋತೀನಿ ಎಂದ. ಒಂದ್ಸಾರಿ ಏಕವಚನ, ಒಂದ್ಸಾರಿ ಬಹುವಚನದಿಂದ ಮಾತಾಡಿಸ್ತಿದ್ದ. ನಂಗೆ ದುಃಖ ಆದಾಗೆಲ್ಲ ಜೀವನದ ಅನೇಕ ಕಷ್ಟ ಸುಖಗಳನ್ನು ತಿಳಿಸಿ ಸಮಾಧಾನ ಮಾಡ್ತಿದ್ದ. ಫೋನ್ ಮಾಡಿ ಮಾತಾಡೋಣ ಅಂದ್ರೆ ಯಾರಾದರೊಬ್ರು ಕಾವಲಿಗೆ ಅಂತ ಇದ್ದೇ ಇರ್ತಿದ್ರು."

"ನೀವು ಸತ್ತುಹೋದ್ರಿ ಅಂತ ಸಂಸ್ಕಾರ, ತಿಥಿ ಎಲ್ಲ ಮಾಡ್ಬಿಟ್ಟಿದಾರೆ ಇವರು" ಗಣೇಶ್‌ರಾಮ್ ಹೇಳಿದ್ರು.

"ಹೌದಾರೀ?"

"ಹೌದು ಸುಶೀ. ನಿಂಗೆ ಅಪಘಾತವಾಗಿದೆ ಅಂತ ಸುದ್ದಿ ಬಂದಾಗ ನಾನು ಗಾಭರಿಯಿಂದ ಆಸ್ಪತ್ರೆಗೆ ಬಂದೆ. ನೋಡಿದ್ರೆ ಎಲ್ಲ ಆಗಿಯೋಗಿತ್ತು. ಮುಖ ಜಜ್ಜಿ ಹೋಗಿತ್ತು. ನಿನ್ನ ಸೀರೆ ಬಣ್ಣ, ವಾಚು, ಉಂಗುರ ಇವುಗಳಿಂದ ನಿನ್ನ ಗುರುತಿಸಿದೆ. ನಿಮ್ಮಪ್ಪ ಅಮ್ಮಂಗೂ ಅನುಮಾನ ಬರ್‍ಲಿಲ್ಲ. ಆಸ್ಪತ್ರೆಯಿಂದ ಕಳೇಬರ ಮನೆಗೆ ತಗೊಂಡ್ ಹೋಗಿ ನಂತರ ಸ್ಮಶಾನಕ್ಕೆ ಸಾಗಿಸಿದೆವು. ತಿಥಿನೂ ಮಾಡಿಬಿಟ್ಟೆವು."

ಸುಶೀಲ ಗಟ್ಟಿಯಾಗಿ ನಕ್ಕಳು.

"ಹದಿನೈದ್ ದಿನ ಆದ್ಮೇಲೆ ಅವನು ಫೋನ್ ಮಾಡೋಕೆ ಶುರುಮಾಡ್ದ. ನಂಗೆ ಮೊದಲು ನಂಬಿಕೆ ಬರ್‍ಲಿಲ್ಲ. ಒಂದಿನ ನೀನು ಮಾತಾಡ್ದೆ ನೋಡು. ಆಗ ನಂಬ್ಕೆ ಬಂತು. ಲಕ್ಷ ಕೊಟ್ಟು ನಿನ್ನ ಬಿಡಿಸ್ಕೊಂಡ್ ಬರ್ತೀನಿ ಅನ್ನೋ ನನ್ನ ಪ್ರಯತ್ನಕ್ಕೆ ಯಾರೂ ಸಹಾಯ ಮಾಡ್ಲಿಲ್ಲ. ಜೊತೆಗೆ ನಂಗೆ ಹುಚ್ಚ ಅನ್ನೋ ಬಿರುದು ಕೊಟ್ರು. ಆದರೂ ನನ್ನ ಪ್ರಯತ್ನ ಬಿಡ್ಲಿಲ್ಲ ನಾನು. ನಂಗೊತ್ತಿತ್ತು ಒಂದಲ್ಲ ಒಂದು ದಿನ ನೀನು ಸಿಕ್ಕೇ ಸಿಕ್ತೀಯ ಅಂತ."

"ಈಗ ನಡೀರಿ ಮನೆಗೆ ಹೋಗೋಣ. ಮಿಕ್ಕದ್ದನ್ನು ನಾಳೆ ನೋಡೋಣ" ಅಂದರು

ಮೋಹನ್‌ರಾಮ್. ಸ್ಕೂಟರಲ್ಲಿ ನಾಗೇಶನ ಹಿಂದೆ ಕೂತು ಅವನ ಸೊಂಟವನ್ನು ಬಿಗಿಯಾಗಿ ತಬ್ಬಿ ಕೂತಳು ಸುಶೀಲ. ಗಣೇಶ್‌ರಾಮ್, ಮೋಹನ್‌ರಾಮ್ ಕೂಡಾ ಹೊರಟರು.

ಒಳ್ಳೆ ನಿದ್ದೆಯಲ್ಲಿದ್ದ ಕಾಂತಮ್ಮನಿಗೆ ಎಚ್ಚರವಾಯಿತು. ರಾತ್ರಿ ಹನ್ನೆರಡು ಗಂಟೆ. ಯಾರಿರಬಹುದು ಇಷ್ಟ್ ಹೊತ್ನಲ್ಲಿ ಅಂದ್ಕೊಂಡು ಗಂಡನನ್ನು ಎಬ್ಬಿಸಿ "ಯಾರೋ ಕಾಲಿಂಗ್ ಬೆಲ್ ಒತ್ತುತ್ತಾ ಇದಾರೆ. ಯಾರು ನೋಡಿ'' ಅಂದರು.

ಕಣ್ಣು ಹೊಸಕಿಕೊಂಡು ಬಂದು "ಯಾರದು'' ಅಂತ ಕೇಳಿದರು ಬಾಗಿಲು ತೆಗೆಯುವ ಮುಂಚೆ.

"ನಾನು ಮಾವ ನಾಗೇಶ.''

"ಇವನ್ದೇನಪ್ಪ ಇಷ್ಟ್ ಹೊತ್ನಲ್ಲಿ'' ಅಂತ ಗೊಣಗಿಕೊಂಡು ಬಾಗಿಲು ತೆಗೆದರು.

"ಮಾವ ಇಲ್ನೋಡಿ ಯಾರು ಬಂದಿದಾರೇಂತ?''

ಎದುರಿಗೆ ನಿಂತ ಮಗಳನ್ನು ಕಂಡು ತಮ್ಮ ಕಣ್ಣನ್ನು ತಾವೇ ನಂಬಲಾಗಲಿಲ್ಲ.

"ಕಾಂತೂ ಸುಶೀಲ ಬಂದಿದಾಳೆ''ಅಂತ ಕಿರುಚಿದರು.

ಮಗಳನ್ನು ತಬ್ಬಿ ಅತ್ತರು. ಕಾಂತಮ್ಮ ಮಗಳನ್ನು ತಬ್ಬಿ "ಇದೇನಮ್ಮ ನಮಗೇನು ಕೇಡುಗಾಲ ಬಂದಿತ್ತು. ನೀನು ಇಲ್ವೇ ಇಲ್ಲ ಅಂದ್ಕೊಂಡಿದ್ವಲ್ಲೆ'' ಅಂದು ಕಣ್ಣೀರು ಹರಿಸಿದರು.

"ಅಕ್ಕಾ'' ಅನ್ನುತ್ತಾ ರಘು ಬಂದ. ತಡೆಯಲಾರದಷ್ಟು ಆನಂದ ಎಲ್ಲರಲ್ಲೂ ಮೂಡಿತ್ತು.

"ಮಾವ, ಅತ್ತೆ ಈಗಲಾದ್ರೂ ನನ್ಮೇಲೆ ನಂಬಿಕೆ ಬಂತಾ?'' ಅಂತ ಕೇಳಿದ ನಾಗೇಶ.

"ನೋಡಮ್ಮ ಸುಶೀಲ, ನಿನ್ನ ಗಂಡ ನೀನು ಬದುಕಿದ್ದೀಯ ಅಂತ ಹೇಳ್ತಿದ್ದ. ನಾನು ಅದನ್ನು ನಂಬ್ದೆ ಅವನಿಗೆ ಹುಚ್ಚು ಹಿಡಿದಿದೆ ಅಂತ ತೀರ್ಮಾನಿಸಿಬಿಟ್ಟಿದ್ದೆವು.''

ರಾತ್ರಿಯ ಪರಿವೆಯಿಲ್ಲದೆ ಮಾತಾಡಿದರು ಎಲ್ಲರೂ. ಕಾಂತಮ್ಮ ಹಾಲನ್ನ ಕಲಸಿ ಮಗಳು, ಅಳಿಯನಿಗೂ ತಿನ್ನಿಸಿದರು.

ವಿಚಾರ ಗೊತ್ತಾಗ್ದೇ ಬದುಕಿರೋ ಮಗಳ ಹೆಸರಲ್ಲಿ ತಿಥಿನೂ ಮಾಡಿಬಿಟ್ವಲ್ಲ ಅಂತ ಪೇಚಾಡಿಕೊಂಡರು ಗುರುಬಸಪ್ಪ.

ಬೆಳಗ್ಗೆ ಸುಶೀಲಳನ್ನು ಕರ್ಕೊಂಡು ಆಫೀಸಿಗೆ ಹೋದ. ಎಲ್ಲರೂ ಹುಬ್ಬೇರಿಸಿದರು. ಬಿಪಿನ್‌ದಾಸ್ "ಹೌ ಈಸ್ ದಿಸ್'' ಅಂದರು. ಚಂದ್ರು, ಜಯಂತಿ, ಆಫೀಸಿನವರು ಎಲ್ಲ ಬೆರಗಾಗುತ್ತಿದ್ದಂತೆ ನಾಗೇಶ "ನಾನು ಇವಳ ವಿಚಾರ ತಿಳಿಸ್ತಿದ್ದಾಗ ನನ್ನನ್ನ ಹುಚ್ಚ ಅಂದ್ಕೊಂಬಿಟ್ಟಿದ್ರಿ ಅಲ್ವಾ. ನಂಗೆ ಯಾರೂ ಸಹಾಯ ಮಾಡ್ಲಿಲ್ಲ. ನಾನೊಬ್ನೇ, ಪತ್ತೇದಾರರ ನೆರವಿನಿಂದ ಹೋರಾಡಿ, ಇವಳನ್ನ ಬಿಡಿಸಿಕೊಂಡು ಬಂದಿದೀನಿ. ನಿಮಗೆಲ್ಲ ನಂಬಿಕೆ ಬರ್ಲಿ ಅಂತ ನಾನೇ ಇವಳನ್ನ ಇಲ್ಲಿಗೆ ಕರ್ಕೊಂಡ್ ಬಂದಿದೀನಿ'' ಅಂದ. ಈ ಸಂತೋಷಕ್ಕೆಂದು ಬಿಪಿನ್‌ದಾಸ್ ಸಿಹಿ ತರಿಸಿದರು.

ಒಂದೆರಡು ದಿನ ರಜ ಇರ್‍ತೀನಿ ಸಾರ್ ಅಂದು ಅವರ ಅಪ್ಪಣೆ ಕೇಳಿ ಹೊರಟ ನಾಗೇಶ. ಒಳ್ಳೆ ವಿಚಿತ್ರ ಅಂತ ಆಫೀಸಿನವರೆಲ್ಲ ಬೆರಗಾದರು.

ಇಪ್ಪತ್ತನೇ ಶತಮಾನದಲ್ಲಿ ಏನು ಬೇಕಾದರೂ ಆಗಬಹುದು ಅಂದುಕೊಂಡರು ಬಿಪಿನ್‌ದಾಸ್.

ನಾಗೇಶ ಮಾವನ ಮನೆಗೆ ಬಂದಾಗ ಗಣೇಶ್‌ರಾಮ್, ಮೋಹನ್‌ರಾಮ್ ಬಂದಿದ್ರು.

"ಏನ್ರೀ ಹೆಂಡ್ತಿ ಸಿಕ್ಕಿದ್ಲು ಅಂತ ನಮ್ಮನ್ನೇ ಮರೆತ್ರಾ. ನಮ್ಮ ಫೀಸೆಲ್ಲಿ?'' ಅಂತ ಕೇಳಿದರು ಮೋಹನ್‌ರಾಮ್.

"ಲಕ್ಷ ರೂಪಾಯಿ ನಿಮ್ಮತ್ರಾನೇ ಇದ್ಯಲ್ಲ. ಅದನ್ನೇ ನಿಮ್ಮ ಫೀಸು ಅಂದ್ಕೊಳಿ ಸಾರ್.''

"ಛೆ ಛೆ ಅಷ್ಟೊಂದ್ ಬೇಡ. ಕೇವಲ ಒಂದು ಸಾವಿರ ರೂಪಾಯಿ ತಗೊಂಡಿದೀನಿ. ಮಿಕ್ಕಿದ್ದು ಇದರಲ್ಲಿದೆ'' ಅಂತ ಚೀಲ ಕೊಟ್ಟರು.

"ಪತ್ತೇದಾರರೇ ಈ ಬದ್ಲಾವಣೆ ಹೇಗಾಯ್ತು. ಅವ್ನು ಬಾಯಿಬಿಟ್ನಂತಾ'' ಕೇಳಿದರು ಗುರುಬಸಪ್ಪ.

"ಬಿಡ್ತಲೇ ಏನ್ ಮಾಡ್ತಾನೆ. ಈಗ ಎರಡು ಅಪರಾಧದಲ್ಲಿ ಸಿಕ್ಕಿಕೊಂಡ ಅವನು. ಅವತ್ತು ಏನಾಗಿದೆ. ಪಕ್ಕದ ಮನೆ ಹುಡುಗೀನ ಶೀಲಭಂಗ ಮಾಡೋ ಪ್ರಯತ್ನದಲ್ಲಿ ಯಶಸ್ವಿಯಾದ. ಆಕೆ ಪೋಲೀಸ್ನೋರಿಗೆ ಹೇಳ್ತೀನಿ ಅಂತ ಬೆದರಿಕೆ ಹಾಕಿದ್ದಕ್ಕೆ ಸಾಯಿಸೇಬಿಟ್ಟ. ಅಪಘಾತವಾಗಿದೆ ಅನ್ನೋ ರೀತೀಲಿ ಅವಳ ಮುಖ, ಕೈ, ಮೈ ಜಜ್ಜಿ ಹಾಕಿದ. ಹಾಗೇ ತಗೊಂಡ್ ಹೋಗಿ ಸ್ಮಶಾನದಲ್ಲಿ ಲಂಚ ಕೊಟ್ಟು ಸಂಸ್ಕಾರ ಮಾಡಿಬಿಡೋಣ ಅಂತ ವ್ಯಾನ್‌ನಲ್ಲಿ ಹಾಕ್ಕೊಂಡು ಹೊರಟ.

"ದಾರೀಲಿ ನಿಮ್ಮ ಮಗಳ ಅಪಘಾತ ನೋಡಿದ ತಕ್ಷಣ ಅವನ ತಲೆ ಕೆಲಸ ಮಾಡಿತು. ನಿಮ್ಮ ಮಗಳ ಶರೀರವನ್ನೂ ವ್ಯಾನ್‌ನಲ್ಲಿ ಹಾಕ್ಕೊಂಡು ಆಸ್ಪತ್ರೆಗೆ ಹೋಗುವಷ್ಟರಲ್ಲಿ ಶರೀರನ ಅದಲು ಬದಲು ಮಾಡಿ ಸತ್ತುಹೋಗಿದ್ದ ಆ ಹುಡುಗೀನ ಅಪಘಾತವಾಗಿದ್ದು ಅಂತ ಹೇಳಿ ಆಸ್ಪತ್ರೇಲಿ ಮಲಗಿಸಿ ನಿಮ್ಮ ಮಗಳನ್ನ ಕರ್ಕೊಂಡು ಮನೆಗೆ ಹೋಗಿ ಆರೈಕೆ ಮಾಡಿಸಿ ಅವಳ ಮುಖಾಂತರ ಲಕ್ಷ ರೂಪಾಯಿ ಲಪಟಾಯಿಸೋ ಪ್ರಯತ್ನ ಮಾಡ್ದ. ಅದು ವಿಫಲವಾಯ್ತು.

"ನೀವು ಪಾಪ ಗಾಭರಿಯಿಂದ ಆಸ್ಪತ್ರೆಗೆ ಬಂದೋರು ಆ ಶರೀರನೇ ನಿಮ್ಮ ಮಗಳದ್ದು ಅಂತ ಭ್ರಮಿಸಿ ಮುಂದಿನ ಕೆಲಸ ಮಾಡಿಬಿಟ್ರಿ. ಶರೀರ ಗುರುತಿಸೋ ಮಟ್ಟದಲ್ಲೂ ಇರ್ಲಿಲ್ಲ ಅಂದ್ಕೊಳಿ. ನೋಡಿದ್ರಾ, ಹಣ ಲಪಟಾಯಿಸೋಕೆ ಎಂತೆಂಥಾ ಆಲೋಚನೆಗಳನ್ನು ಮಾಡ್ತಾರೆ, ಪ್ರಯತ್ನಗಳನ್ನು ಮಾಡ್ತಾರೆ. ನಿಮ್ಮ ಮಗಳ ಆಯಸ್ಸು ಗಟ್ಟಿಯಾಗಿದೆ. ಇನ್ನೂ ಬಹಳ ಕಾಲ ಆಕೆ ನಿಮ್ಮೊಂದಿಗೆ ಇರಬೇಕಾಗಿದೆ'' ಅಂತ ವಿವರಿಸಿದರು ಮೋಹನ್‌ರಾಮ್.

"ಎಲ್ಲಕ್ಕಿಂತ ಹೆಚ್ಚಾಗಿ ನಂಗೆ ಹೆಂಡ್ತಿ ಸಿಕ್ಕಿದ್ದಕ್ಕಿಂತ ಹುಚ್ಚ ಅನ್ನೋ ಬಿರುದು ಹೋಯ್ತಲ್ಲ, ಅದೇ ಸಮಾಧಾನ'' ಅಂತ ನಾಗೇಶ ಅಂದಾಗ ಎಲ್ಲರೂ ನಕ್ಕರು.

ಸುಶೀಲ ಗಂಡನ ತಲೆಗೂದಲಿನಲ್ಲಿ ಕೈಯಾಡಿಸಿ ಅವನ ಕೆನ್ನೆ ಚಿವುಟಿದಳು.

ಹೆಂಡತಿಯನ್ನು ಎಡತೋಳಿಂದ ತಬ್ಬಿ "ತುಂಟಿ'' ಅಂದ ನಾಗೇಶ.

"ಹೋಗ್ಲಿ ಬಿಡ್ರಪ್ಪ ಒಂದು ಕೆಟ್ ಕನಸು ಹರಿದ್ಹಾಗಾಯ್ತು. ಅಂದ್ಹಂಗೆ ನಾಳೆ ಸಂಜೆ ಒಂದು ಗೆಟ್ ಟುಗೆದರ್ ಇಟ್ಕೊತೀವಿ, ಖಂಡಿತ ಬರ್ಬೇಕು ಪತ್ತೇದಾರರೇ'' ಅಂದರು ಗುರುಬಸಪ್ಪ.

"ಆಯ್ತು ಬರ್ತೀವಿ'' ಅಂದು ಇಬ್ಬರೂ ಹೊರಟರು.

ತಕ್ಷಣ ನಾಗೇಶ "ಬಹಳ ಕೆಲಸ ಇದೆ ಬಾ'' ಅಂತ ಸುಶೀಲನ್ನ ಕೋಣೆಯೊಳಗೆ ಎಳೆದುಕೊಂಡು ಹೋಗಿ ಬಾಗಿಲು ಹಾಕಿಕೊಂಡ.

ಮ್ಯಾಗಜಿನ್

ವಿಭಾಗ

ಸಣ್ಣ ಕಥೆ

ಧಾರಿಣಿ

ಕಮಲಾ ಮೂರ್ತಿ

ಹಸಿರು ಪ್ರೀಮಿಯರ್ ಪದ್ಮಿನಿಗೊರಗಿ ನಿಂತ ಆಜಾನುಬಾಹು. ಕನ್ನಡಕದಡಿಯಲ್ಲಿ ಪಾದರಸದಂತೆ ಚಲಿಸುತ್ತಿರುವ ಜೋಡಿ ನಕ್ಷತ್ರ. ವೃದ್ಧಾಪ್ಯದತ್ತ ಜಾರುತ್ತಿರುವ ಕುರುಹಾಗಿ ಕಪ್ಪಿನಿಂದ ಬಿಳಿಯತ್ತ ಜಾರುತ್ತಿರುವ ತಲೆಯ ಕೂದಲೊಂದನ್ನು ಬಿಟ್ಟರೆ, ಅದೇ ನಿಲುವು, ಅದೇ ಚೂಪು ನೋಟ, ಅವನೇ, ಸ್ವಲ್ಪ ಕೂಡ ಸಂಶಯವಿಲ್ಲ.

ಎದುರಂಗಡಿಯ ಬಾಗಿಲಲ್ಲಿ ನಿಂತು ಯೋಚಿಸುತ್ತಿದ್ದ ಧಾರಿಣಿ ಬಿರಬಿರನೆ ಹೆಜ್ಜೆಯಿಡುತ್ತ ಅವನೆದುರಿಗೆ ಬಂದು ನಿಂತಳು. ಗರಬಡಿದವಳಂತೆ ಕಣ್ಣರಳಿಸಿ ಮೌನದಲ್ಲಿ ನಿಂತೇ ಇದ್ದಳು.

"ಅರೇ, ನೀನು ಧಾರಿಣಿ ಅಲ್ವೇ?''

"ಓ ಸನ್ನಿ, ನೀನಿನ್ನೂ ನನ್ನ ಮರೆತಿಲ್ಲ. ನನ್ನ ಸನ್ನಿ.'' ಆವೇಶದಿಂದ ಅವನ ಬಲದ ಕೈಯನ್ನಿಡಿದು ಮುತ್ತನೊತ್ತಿಯೇ ಬಿಟ್ಟಳು.

"ಹಾಂ ಹಾ, ಇದಕ್ಕೆ ರಾಜಬೀದಿ ಅಂತಾರೆ. ನೀನು ಅಂದು ಹೇಗಿದ್ದಿಯೋ ಇಂದೂ ಹಾಗೆ ಇದ್ದೀಯಾ. ಸೂಜಿ ಮೊನೆಯಷ್ಟೂ ಬದಲಾಗಿಲ್ಲ'' ಎಂದವನೇ ಸನ್ನಿ ಗ್ಲಾಸ್ ತೆಗೆದು ಕಣ್ಣೊರಿಸಿ ಕೊಂಡನು.

"ಛೇ ಛೇ ಏಕೆ ನರ್ವಸ್ ಆಗ್ತಾ ಇದ್ದೀಯಾ? ಹಾಗಾದ್ರೆ ನಾನೀಗ್ಲೆ ಹೊರಟೆ.''

"ಎಲ್ಲಿಗೆ, ನನ್ನ ಬಿಟ್ಟು?''

"ನನಗೆ ಯಾರಿದ್ದಾರೆ ಹೇಳು?''

"ಮತ್ತೆ ಶುರು ಮಾಡಿದೆಯಾ ನಿನ್ನ ಜಗಳಾನ?''

"ಬಾ ಬಾ ಎಲ್ಲಿಯಾದರೂ ಕುಳಿತು ಸ್ವಲ್ಪ ಗತವನ್ನು ಕೆದುಕುವ.''

ಒಂದೆರಡು ಗಂಟೆಗಳ ಕಾಲ ಇಬ್ಬರೂ ಅದೇನು ಮಾತನಾಡಿದರೋ ಗೊತ್ತಿಲ್ಲ. ಆದರೆ ಮನಸ್ಸು ತೃಪ್ತಿಯಾಗುವತನಕ ಪರಸ್ಪರ ನೋವು ನಲಿವುಗಳನ್ನು ಹಂಚಿಕೊಂಡಿದ್ದರು. ಬಿರುಕುಬಿಟ್ಟ ನೆಲ ವರ್ಷಧಾರೆಯಿಂದ ತೊಯ್ದಂತೆ, ಅವರಿಬ್ಬರ ಮನ ಸಂತಸದ ಚಿಲುಮೆಯಾಗಿತ್ತು.

ಸ್ವಪ್ನ, ಸುಂದರವಾದ ಸ್ವಪ್ನ. ಹಂಸತೂಲಿ ಕಾತಲ್ಪದಲ್ಲಿ ಪವಡಿಸಿದ ರಸಿಕನಿಗೆ ಸ್ವಲ್ಪವೇ ಮಂಪರು ಮತ್ತು ನಿಮೀಲನೇತ್ರವದನನಾಗಿ ಕಣ್ಸನ್ನೆಯಲ್ಲೇ ರತಿಯನ್ನು ಹತ್ತಿರಕ್ಕೆ ಕರೆಯುತ್ತಿದ್ದಾನೆ. ಅವಳಿಗೋ ಎಲ್ಲಿಲ್ಲದ ನಾಚಿಕೆ. ಮಂದಾನಿಲದ ತಂಗಾಳಿಯೊಂದಿಗೆ ಬೀಸಿ ಬರುತ್ತಿದ್ದ ಲಾವಂಚದ ಪರಿಮಳ. ದೂರದಲ್ಲೆಲ್ಲೋ ಕೋಗಿಲೆಯ ಕೂಗು, ಜೊತೆಗೆ ಪಕ್ಷಿಗಳ ಕಲರವ. ವಸಂತನೂ ಜೊತೆಗೂಡಿರಬೇಕು. ಎಲ್ಲೆಲ್ಲೂ ಗಿಡಮರಗಳಲ್ಲಿ ಚಿಗುರುವ ಆತುರ. ಪ್ರಕೃತಿಯೇ ಪ್ರೇಮಿಗಳಿಗೆ ಹರಸಲು ಸಜ್ಜಾದಂತಿದೆ.

ಬಳೆಗಳ ಕಿಂಕಿಣಿ ನಾದವನ್ನರಸಿ ರತಿಯ ಹುಡುಕಾಟ ಮನ್ಮಥನಿಗೆ. ಆದರೆ ಅವಳೋ ಅವನನ್ನು ಕೆಣಕುತ್ತ ಮರೆಯಾಗುತ್ತ ಆಟವಾಡಿಸುತ್ತಿದ್ದಾಳೆ. ಹಿತವಾದ ವೀಣೆಯ ಜೇಂಕಾರ ಅವನನ್ನು ಮತ್ತಷ್ಟು ಕೆಣಕುತ್ತಿದೆ. ಅದರ ಹಿಂದೆಯೇ ಬರುತ್ತಿರುವ ರಾತ್ರಿರಾಣಿಯ ಸುಗಂಧ. ಗೆಜ್ಜೆಯ ಜಣತ್ಕಾರವನ್ನರಸಿ ಪರಿತಪಿಸುತ್ತಿದ್ದಾನೆ. ಮರುಗಳಿಗೆಯೇ ಅವನನ್ನು ಬೆನ್ನಟ್ಟುವ ಬಿಂಕ, ಬಿಗುಮಾನ.

"ಬಳೆಗಳ ಕಿಂಕಿಣಿ ನಾದವನ್ನರಸಿ ರತಿಯ ಹುಡುಕಾಟ ಮನ್ಮಥನಿಗೆ. ಆದರೆ ಅವಳೋ ಅವನನ್ನು ಕೆಣಕುತ್ತ ಮರೆಯಾಗುತ್ತ ಆಟವಾಡಿಸುತ್ತಿದ್ದಾಳೆ.

ನನ್ನಲ್ಲಿ ಅವಳಿಗೆ ಅಷ್ಟೊಂದು ಪ್ರೀತಿಯಿದ್ದರೆ, ಅವಳೇ ಹೃದಯುದರಮನೆಯತನಕ ಬಂದು ಪ್ರೇಮದಾರತಿ ಎತ್ತಿ, ಮೃದುವಾದ ಅವಳ ತೊಡೆಯ ಮೇಲೆ ಮಲಗಿಸಿಕೊಂಡು, ರಸಮಯವಾದ ಕಾವ್ಯದ ಪಿಸುಮಾತಿನಲ್ಲಿ ನನ್ನ ತಣಿಸಲಿ. ಜೋಡಿ ಶಿಖರದಲ್ಲಿ ಬಚ್ಚಿಟ್ಟ ಅಮೃತ ವರ್ಷವನ್ನುಣಿಸಲಿ.

ಕೈ ನೀಡಿ ಕರೆದಿದ್ದಾನೆ, ಬಾಯಾರಿ ಬಳಲಿದ್ದಾನೆ. ಆರ್ದ್ರಗೊಂಡ ಎದೆಯ ಕೂಗಿಗೆ ಮಾರ್ನುಡಿ ಕೇಳಿಸುತ್ತಿಲ್ಲ. ಮೆಲ್ಲನೆ ಕಣ್ತೆರದು ನೋಡಿದರೆ ಯಾರೆಂದರೆ ಯಾರೂ ಇಲ್ಲ. ಎಲ್ಲ ಹೃದಯ ಇಲ್ಲದವರೇ. ಅಮೃತದ ಬಟ್ಟಲನ್ನು ನೆಕ್ಕಿ ಬರಿದು ಮಾಡಿ ಕಾಲಿ ಬಟ್ಟಲನ್ನು ನಿರ್ದಯೆಯಿಂದ ಬೀಸಿ ಬಿಸುಟು ಹೋದವರೆ. ಅಮೃತದ ಬಟ್ಟಲಲ್ಲಿ ಉಕ್ಕುಕ್ಕಿ ಸುರಿಯುವಾಗ, ನಾಮುಂದು ತಾಮುಂದೆಂದು ನುಗ್ಗಾಡುತ್ತ ಮುಕರಿ ಬಿದ್ದರು. ಇದೇ ಏನು ಪ್ರೀತಿ, ಪ್ರೇಮ. ಇದೇ ಏನು ಸ್ವರ್ಗ, ನಾನೆಂತಹ ಪುಣ್ಯವಂತ! ಕಣ್ಮಿಟುಕಿಸಿದರೆ ಸಾಕು ಸಾಲು ಸಾಲಾಗಿ ನಿಂತು ಸೇವೆಗೈಯುತ್ತಿದ್ದರು. ಇವರೆಲ್ಲ ಇರುವುದೇ ನನಗಾಗಿ, ನನ್ನ ಸುಖಕ್ಕಾಗಿ ಎಂದು ಭ್ರಮಿಸಿಹೋದೆ. ನಿರ್ವಂಚನೆಯಿಂದ ತನ್ನದೆಲ್ಲವನ್ನು ಕೈಯೆತ್ತಿ ನೀಡಿದೆ. ಅಮೃತದ ಬಟ್ಟಲನ್ನೇ ಕಾಮಧೇನುವೆಂದು ತಿಳಿದು ತಲೆಕೆಳಗಾಗಿ ಸುರಿದೆ. ಕಲ್ಪವೃಕ್ಷವೆಂದು ಅರಿತು ಕೊಡುಗೈದಾನಿಯಾದೆ.

ಒಮ್ಮೆಲೇ ಎಚ್ಚರ. ಸುತ್ತೆಲ್ಲ ಗಾಢಾಂಧಕಾರ. ಬೆಳಕಿನ ರೇಖೆಯ ಎಲೆಯು ಕಾಣಿಸದಂತಹ ಅಂಧಕಾರ. ಕೈಬೀಸಿ ಮಧುರವಾಗಿ ಕರೆದೆ. ಹತ್ತಲ್ಲ ನೂರುಬಾರಿ ಕರೆದೆ ಉಂ, ಹ್ಞೂಂ. ಓಗೊಡುವ ಆತ್ಮೀಯರಿಲ್ಲ, ನನ್ನವರೆಂದು ಹೇಳುವ ನೆಂಟರಿಲ್ಲ. ಪ್ರೀತಿಸುವೆನೆಂದು ಉಳಿಯುವ ಸಂಗಾತಿಯಿಲ್ಲ. ಮನದ ಸಂಕಟ ವಿಷವಾಗಿ ಆಳಕ್ಕಿಳಿದು ಬೆಂಕಿಯಂತೆ ಸುಡುತ್ತಿದೆ. ಚೂರಿ ಅಲುಗಿನಂತೆ ಕತ್ತರಿಸುತ್ತಿದೆ. ಜ್ವಾಲಾಮುಖಿಯಂತೆ ಕುದಿಯುತ್ತಿದೆ. ಕೃತಘ್ನರು ಮುಖವಾಡ ಧರಿಸಿದ ಮಾಯಾವಿಗಳು. ಇದೇ ಸ್ಥಿತಿಯಲ್ಲಿ ಅದೆಷ್ಟು ದಿನಗಳು, ವಾರಗಳು, ವರ್ಷಗಳು ಉರುಳಿದವೋ ತಿಳಿಯದು ಎಣಿಸಿದವರಾರು?

ಗಾಢ ಕತ್ತಲೆಯಲ್ಲೂ ಮಿಣುಕು ಹುಳುವಿನಂತೆ, ಸಣ್ಣ ದೀಪ ಮಿಂಚುತ್ತಿದೆ ದೂರದಲ್ಲಿ ಬಹಳ ದೂರದಲ್ಲಿ, ಇನ್ನೇನು ಆರಿಯೇ ಹೋಗುತ್ತಿದ್ದ ದೀಪಕ್ಕೆ ಎಣ್ಣೆ ಸುರಿದಂತೆ.

ದೀಪ ಪ್ರಜ್ವಲಿಸಿ ಉರಿದಂತೆ, ವಸಂತ ಮತ್ತೆ ಬಂದಂತೆ, ವೀಣೆಯ ಝೇಂಕಾರ ಮೊಳೈಸಿದಂತೆ, ಕೋಗಿಲೆ ಧ್ವನಿ ಏರಿಸಿದಂತೆ, ಧಾರಿಣಿ, ಅಲ್ಲಲ್ಲ ನೀನು ನನ್ನ ರತಿ ಹೃದಯದ ಒಡತಿ, ರಾಣಿ.

ಇಷ್ಟು ದಿನ ನನ್ನ ಒಂಟಿಯಾಗಿ ಬಿಟ್ಟು ಎಲ್ಲಿ ಹೋಗಿದ್ದೆ, ಇಲ್ಲ ನಾನು ನಾನೇ ನಿನ್ನನ್ನು ಕಟುಕನಂತೆ ದೂರ ದೂಡಿದ್ದೆ. ನಾನೆಂತಹ ದೂರ್ತ. ನಿನ್ನ ನೈಜ ಪ್ರೀತಿಗೆ ನಾನು ಕೊಟ್ಟಿದ್ದಾದರೂ ಏನನ್ನು, ನಿನ್ನ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳಲಾರದ ಮೂಢನಾಗಿದ್ದೆ.

ಹೌದು ಧಾರಿಣಿ. ನಿನ್ನ ಪ್ರೀತಿಯ ಸ್ವರೂಪವನ್ನು ತಿಳಿಯದಷ್ಟು ನಾನು ಅರಸಿಕನಾಗಿರಲಿಲ್ಲ. ಆದರೆ ಅಹಂನಿಂದ ಬೀಗುತ್ತ ನಿನ್ನ ಕಾಲಕಸವಾಗಿ ಕಂಡೆ. ನಭದಷ್ಟು ವಿಶಾಲವಾದ, ವಾರಿಧಿಯಷ್ಟು ಆಳವಾದ ನಿನ್ನ ಮಹಾನ್ ವ್ಯಕ್ತಿತ್ವವನ್ನೇ ಅಪಮಾನಗೊಳಿಸಿದ್ದೆ.

ಧಾರಿಣಿ ನನ್ನ ಕ್ಷಮಿಸು. ನೀನೊಬ್ಬಳು ನನ್ನ ಪಾಲಿಗೆ ಇದ್ದೀಯಲ್ಲ. ಸಾಕು ಸಾಕು ಈ ನೆನಪೇ ನನ್ನನ್ನು ನೂರು ವರ್ಷ ಉಳಿಸುತ್ತದೆ. ಎಲ್ಲರೂ ನನ್ನಿಂದ ದೋಚಿದರು, ಕೊಳ್ಳೆ ಹೊಡೆದರು. ಆದರೆ ನೀನು ನನ್ನ ಪ್ರೀತಿಯೊಂದೇ ಸಾಕು ಅವೆಲ್ಲ ತೃಣಸಮಾನವೆಂದು ನಗುತ್ತ ಮೌನವಾಗಿ ಸರಿದು ಹೋದೆ. ನಿನ್ನ ಪ್ರೀತಿಗೆ ಬೆಲೆ ಕಟ್ಟಲಾದೀತೇ?

ಅಲ್ಲ ಧಾರಿಣಿ, ಅಗಾಧವಾಗಿ ಪ್ರೀತಿಸಿದ ನೀನು ಅದ್ಹೇಗೆ ಈ ದೀರ್ಘ ಕಾಲ ನನ್ನಿಂದ ದೂರವಿದ್ದೆ. ನಿಜ ನಿಜ ಆ ಪ್ರೀತಿಗೆ ಆ ಶಕ್ತಿಯಿದೆ. ಅದು ಮಾತಿಗೆ ನಿಲುಕದ ಕಣ್ಣಿಗೆ ಕಾಣದ ಮಧುರಾನುಭೂತಿ. ಈ ಇಪ್ಪತ್ತು ವರ್ಷಗಳ ಅಗಲಿಕೆಯ ನಂತರದ ಸೇರುವಿಕೆಯಲ್ಲಿ ಅದೆಂತಹ ಆನಂದವಿದೆ. ಓಹ್ ನನ್ನ ಧಾರಿಣಿ, ನನ್ನ ರಾಣಿ, ನನ್ನನ್ನು ಕ್ಷಮಿಸಿಬಿಡು. ●

ಧಾರಾವಾಹಿ-೬

ಚೈತ್ರ ಚಂದನ



ಯು. ವಿ. ತಾರಿಣಿ ರಾವ್

"ಶ್ರೇಯಸ್ ಇಂಥ ಅನಾಥ ಹೆಣ್ಣನ್ನೇಕೆ ನೀನು ಮದುವೆಯಾಗಬೇಕಿತ್ತು. ಬೇಕಾದಷ್ಟು ಕುಲೀನ ಹುಡುಗಿಯರು ನಿನಗೆ ಸಿಗುತ್ತಿರಲಿಲ್ಲವೆ" ಎಂದು ಕೇಳಿದರೆ ಅದೆಷ್ಟು ವಾದಿಸಿದ್ದ.

"ಶ್ವೇತಳನ್ನು ಮದುವೆಯಾಗಬಹುದಿತ್ತು."

ಶ್ವೇತ ನನ್ನ ತಂಗಿ ಹಾಗೆ ಎಂದೆಲ್ಲ ಹೇಳಿಬಿಟ್ಟನಲ್ಲ. ಆಧುನಿಕವಾಗಿರುವ ಹುಡುಗಿ ಬೇಡವಂತೆ, ಹೀಗೆ ಇರಬೇಕಂತೆ. ನೋಡೋಣ. ಅದು ಹೇಗೆ ಅವಳು ಇಲ್ಲಿ ಇರುತ್ತಾಳೋ. ಹೇಗಾದರೂ ಇಲ್ಲಿಂದ ಹೊರಡಿಸಿ ಶ್ವೇತಳನ್ನೇ ಸೊಸೆ ಮಾಡಿಕೊಳ್ಳಬೇಕು. ಶಾಂತಜ್ಜಿ ಯೋಚಿಸುತ್ತಿದ್ದಂತೆ ನಿರ್ಧಾರ ಗಟ್ಟಿಯಾಗತೊಡಗಿತು.

"ಚೈತ್ರ ಬೆಳಗ್ಗೆ ಬೇಗ ತಯಾರಾಗು. ಫಾರಂ ಹೌಸ್‌ಗೆ ಕರ್ಕೊಂಡು ಹೋಗ್ತೀನಿ."

"ಅಂತೂ ರಾಯರಿಗೆ ದಯ ಬಂತು ಎಂಟು ದಿನಕ್ಕೆ."

"ಏನ್ಮಾಡ್ಲಿ ಚೈತ್ರ, ಇಪ್ಪತ್ತು ದಿನ ರಾಣಿ ಸಾಹೇಬ್ರತ್ರ ಕಾಲ ಕಳೆದದ್ದಕ್ಕೆ ದಂಡ. ಮಿ. ಪ್ರದೀಪ್ ಫಾರಂ ಹೌಸ್ ಚೆನ್ನಾಗೇ ಮ್ಯಾನೇಜ್ ಮಾಡ್ತಾರೆ. ನಾನು ಎದುರಿಗಿದ್ರೆ ಸರಿ. ಆಗ ಹಸುಗಳಿಗೆ ಇಂಜೆಕ್ಷನ್ ಮಾಡ್ಸಬೇಕಿತ್ತು. ಕಪ್ಪು ಜರ್ಸಿ ಹಸು ಕಾಲಿಗೇನೋ ಆಗಿತ್ತು. ಇವರಿಗ್ಯಾರಿಗೂ ನಿಗಾ ಇಲ್ಲ. ಎಲ್ಲ ಸರಿ ಮಾಡಕ್ಕೆ ಸಾಕಾಯ್ತು."

"ಶ್ರೀ ನಾನೂ ಬರ್ತೀನಿ ನಂಗೆ ಅದೆಲ್ಲ ತುಂಬಾ ಇಷ್ಟ." ದಂಪತಿಗಳು ಜೀಪಲ್ಲಿ ಹೊರಟರು. ಶಾಂಭವಿ ನಿಲಯದಿಂದ ಮೂರು ಮೈಲಿ ದೂರದಲ್ಲಿ ಫಾರಂ ಹೌಸ್ ಇತ್ತು. ಹತ್ತು ಹೆಕ್ಟೇರಿನ ಪ್ರದೇಶ. "ಮೊದಲು ಮಿಲ್ಕ್ ಡೈರಿ ಹತ್ರ ಹೋಗೋಣ." ಚೈತ್ರ ತುಂಬ ಉಲ್ಲಾಸದಿಂದ ಇದ್ದಳು.

ಅವಳ ಊಹೆಗೆ ಮೇಲ್ಪಟ್ಟು ಫಾರಂ ಇತ್ತು. ಎದುರು ಬದುರು ಎರಡು ಸಾಲುಗಳಲ್ಲಿ ಹಸುಗಳನ್ನು ಕಟ್ಟಿದ್ದರು. ಅವುಗಳ ಮುಂದಿನ ದೋಣಿಯಾಕಾರದ ಗೋದಲಿಗಳಲ್ಲಿ ಕತ್ತರಿಸಿದ ಹಸಿ ಹಸಿರು ಹುಲ್ಲು ಹಾಕಲಾಗುತ್ತಿತ್ತು. ಕುಡಿಯಲು ಸ್ವಚ್ಛವಾದ ನೀರು ಹರಿಯುತ್ತಿತ್ತು. ಹಸುಗಳನ್ನು ಶುಭ್ರಗೊಳಿಸಲು ಆಳುಗಳಿದ್ದರು. ಎಲ್ಲೆಲ್ಲೂ ಸಗಣಿ ಗಂಜಲದ ವಾಸನೆ ಕೊಳಕು ಇರಲಿಲ್ಲ. ಬೆಲೆಬಾಳುವ ಜರ್ಸಿ, ಸಿಂಧಿ ಜಾತಿಯ ಹಸುಗಳು ಅಲ್ಲಿದ್ದವು. ಒಂದೊಂದೂ ಹೊತ್ತಿಗೆ ಹತ್ತು ಹನ್ನೆರಡು ಲೀಟರ್ ಹಾಲು ಕರೆಯುವ ಹಸುಗಳು ಕಣ್ಣು ತುಂಬುವಂತೆ ಸಮೃದ್ಧವಾಗಿದ್ದವು. ಕೆಲವು ಹೈಬ್ರೀಡ್ ಹಸುಗಳನ್ನು ವಿಶೇಷ ಮುತುವರ್ಜಿಯಿಂದ ನೋಡಿಕೊಳ್ಳಲಾಗುತ್ತಿತ್ತು.

ಮತ್ತೊಂದು ಮನೆಯಲ್ಲಿ ಗಬ್ಬದ ಹಸುಗಳು, ಕೆಲವು ಕರೆಯಲು ರಬ್ಬರ್ ನಳಿಕೆ ಇದ್ದವು. ಆಳುಗಳು ಶಿಸ್ತಿನಿಂದ ಅಚ್ಚುಕಟ್ಟಾಗಿ ಕೆಲಸ ಮಾಡುತ್ತಿದ್ದರು. ಶಿವಮೊಗ್ಗೆಯಿಂದ ಡಾ. ಚಂದ್ರಕಾಂತ ದಿನವೂ ಹಸುಗಳನ್ನು ಪರೀಕ್ಷಿಸಲು ಬರುತ್ತಿದ್ದರು. ಹಸುಗಳ ಫಾರಂ ಹೌಸ್‌ನಲ್ಲೂ

ಫೋನ್ ಇತ್ತು.

ಕೋಳಿ ಪೌಲ್ಟ್ರಿಯಲ್ಲಿ ಬೆಳೆದ, ಬೆಳೆಯ ಬೇಕಿದ್ದ ಮರಿ ಕೋಳಿಗಳನ್ನು ಬೇರ್ಪಡಿಸಿಡಲಾಗಿತ್ತು. ಅಲ್ಲೂ ಅಷ್ಟೆ ಎಲ್ಲವೂ ಸಮರ್ಪಕ ಏರ್ಪಾಟುಗಳು. ಫಾರಂ ಹೌಸಿನಲ್ಲಿ ಹನ್ನೆರಡು ಆಳುಮನೆಗಳಿದ್ದವು. ಮುಖ್ಯ ಎರಡು ದೊಡ್ಡ ಮನೆಗಳಲ್ಲಿ ಮಿ. ಪ್ರದೀಪ, ನಂಜುಂಡಯ್ಯನವರಿದ್ದರು. ಎಸ್ಟೇಟಿ ಗೊಂದು ಜೀಪು ಇತ್ತು. ಫಾರಂ ಹೌಸ್‌ನಿಂದ ಸಿಟಿಗೆ ಓಡಾಡಲು ವ್ಯಾನ್ ಇತ್ತು. ಮಾರುಕಟ್ಟೆಗೆ ಹಾಲು, ಮೊಟ್ಟೆ ಅದರಲ್ಲಿ ಸರಬರಾಜಾಗು ತ್ತಿತ್ತು.

"ಗುಡ್‌ಮಾರ್ನಿಂಗ್ ಸಾಹೇಬ್, ಇದೇನೂ ಚಿಕ್ಕಮ್ಮಾವ್ರು ಬಂದ್ಬಿಟ್ಟಿದಾರೆ.'' ಮಿ. ಪ್ರದೀಪನ ಕಂಗಳಲ್ಲಿ ಅದೇನೋ ನೋಟ. "ಇನ್ಮೇಲೆ ಅಮ್ಮಾವ್ರು ಬರ್ತಿರ್‍ತಾರೆ ಮಿ. ಪ್ರದೀಪ್.''

"ಹೌದೇ.'' ಅವನ ತುಟಿಗಳಲ್ಲಿ ಅಪಹಾಸ್ಯದ ನಗು ತುಳುಕಿತು.

"ಬವ್ ಬವ್'' ನಾಲ್ಕು ನಾಯಿಗಳು ಎಲ್ಲೆಂದಿಲೋ ಓಡಿಬಂದವು. ಚಿಟ್ಟನೆ ಹೆದರಿ ಚೀರಿಕೊಂಡಳು ಚೈತ್ರ. ಎತ್ತರದ ಸುಪುಷ್ಟ ಆಕಾರದ ಕಪ್ಪನೆಯ ಡಾಬರ್‌ಮನ್ ನಾಯಿಗಳು ಅವಳೆದೆಯಲ್ಲಿ ಭೀತಿ ಹುಟ್ಟಿಸಿತು. "ಜಿಮ್ಮಿ, ರಾಣಿ, ಜಾಕಿ, ರೋಸಿ ಸುಮ್ಮನಿರಿ'' ಎಂದಕೂಡಲೇ ನಾಲ್ಕೂ ನಾಲಿಗೆ ಬಿಡುತ್ತ, ಶ್ರೇಯಸ್‌ನನ್ನು ಸುತ್ತಿಕೊಂಡವು. ಅಲ್ಸೇಶಿಯನ್ ಜಿಮ್ಮಿ ಅವನ ಮುಖದೆತ್ತರ ನಿಂತು ನೆಕ್ಕಿತು. "ಏ ವೆಂಕ ಇದನ್ಯಾಕೆ ಹೀಗೆ ಬಿಟ್ಟಿದ್ದೀಯ, ಮುಂಚೆ ಸರಪಣಿ ಕಟ್ಟು.'' ನಾಲ್ಕು ನಾಯಿಗಳ ಭೀಕರಾಕೃತಿ ಕಂಡು ಚೈತ್ರ ಇನ್ನೂ ಸಣ್ಣಗೆ ನಡುಗುತ್ತಿದ್ದಳು. ಅವು ಅವಳನ್ನೇ ಕೆಂಪು ಕಣ್ಣಿಂದ ನಿಟ್ಟಿಸಿದವು. ಕ್ರೂರತೆ ಅವುಗಳ ಕಣ್ಣಲ್ಲಿ ಸೂಸುತ್ತಿತ್ತು.

"ಏ ಜಿಮ್ಮಿ, ಇವಳು ನಿಮ್ಮ ಯಜಮಾನಿ. ಚೈತ್ರ ಸುಮ್ಮನೆ ನಿಂತುಕೋ ಹೆದರಬೇಡ.''

ಅವಳು ಗಟ್ಟಿಯಾಗಿ ಕಣ್ಮುಚ್ಚಿದಳು. ಶ್ರೇಯಸ್ ಅವಳ ಪಕ್ಕಕ್ಕೆ ಸರಿದಾಗ ಅವುಗಳು ಬುಸುಗುಟ್ಟುತ್ತ ಅವಳನ್ನು ಸುತ್ತು ಹಾಕಿದವು. ಅವಳ ಕೈ ನೆಕ್ಕಿದಾಗ ಅವಳಿಗೆ ತಾನು ಸತ್ತು ಹೋದಂತೆ ನಾಯಿಗಳು ತನ್ನನ್ನು ಕಚ್ಚಿದಂತೆ ಭಾಸವಾಯ್ತು. ಚೀತ್ಕಾರ ಹೊರಡದಷ್ಟು ಅವಳಿಗೆ ಗಾಬರಿಯಾಗಿತ್ತು. "ಚೈತ್ರ ಹೆದರಬೇಡ. ಕಣ್ಣುಬಿಡು ಪರವಾಗಿಲ್ಲ ಅವೇನೂ ಮಾಡಲ್ಲ.''

ಚೈತ್ರ ಬಿಳುಚಿಕೊಂಡೇ ಕಣ್ಣು ತೆರೆದಳು.

ಏನಾಶ್ಚರ್ಯ, ನಾಯಿಗಳು ಅವಳನ್ನೇ ಮೂಸುತ್ತ ನೋಡುತ್ತಿದ್ದವು. ಅವುಗಳ ಕಣ್ಣಲ್ಲಿನ ಕ್ರೂರತೆ ಮಾಯವಾಗಿದ್ದವು. ಅವಳ ನಡುಕ ನಿಲ್ಲುತ್ತಿದ್ದಂತೆ ಅವಳಲ್ಲಿ ಆತ್ಮವಿಶ್ವಾಸ ಹುಟ್ಟಿತು.

"ಚೈತ್ರ ಇದು ರಾಣೀ ಜಿಮ್ಮಿ, ಅಲ್ಸೇಶಿಯನ್ ಇವು. ಜಾಕಿ, ರೋಸಿ ಇವೆರಡೂ ಡಾಬರ್‌ಮನ್‌ಗಳು'' ಕಪ್ಪಗೆ ದೊಡ್ಡ ಅಗಲ ಮುಖದ ಅವು ನೋಡಲು ಭೀತಿ ಹುಟ್ಟಿಸಿದವು. "ರಾತ್ರಿ ಈ ನಾಲ್ಕೂ ಈ ಫಾರಮ್ಮನ್ನು ನೋಡಿಕೊಳ್ಳುತ್ತವೆ. ನಮ್ಮ ಡಾಗ್ ಹೌಸ್ ಕೂಡ ತುಂಬ ಚೆನ್ನಾಗಿದೆ.''

ವೆಂಕನೊಡನೆ ಆಳೊಬ್ಬ ಚೈನನ್ನು ತೊಡಿಸಲು ಅವುಗಳಿಗೆ ಪ್ರಯತ್ನಿಸಿದರು. ನಾಯಿಗಳು ಮಣಿಯದೆ ಪ್ರತಿಭಟಿಸಿದವು. "ಮೋಟಯ್ಯ ಕೊಡಿಲ್ಲಿ.'' ಮಿ. ಪ್ರದೀಪ್ ನಾಯಿಗೆ ಸರಪಳಿ ಬಿಗಿದರು. ಆಳುಗಳಿಬ್ಬರೂ ಅವನ್ನು ಎಳೆದೊಯ್ದರು.

ಇಲ್ಲಿಯವರೆಗೆ...

ಚೈತ್ರ ಬಡ ಅನಾಥ ಹುಡುಗಿ. ಶ್ರೀಮಂತ ತರುಣ ಶ್ರೇಯಸ್ ಅವಳನ್ನು ಮೆಚ್ಚಿ ಮದುವೆಯಾಗುತ್ತಾನೆ. ಆಕೆ ಅವನೊಂದಿಗೆ ಎಸ್ಟೇಟಿಗೆ ಬರುತ್ತಾಳೆ. ಅಲ್ಲಿನ ವಾತಾವರಣ ಅವಳಲ್ಲಿ ಆತಂಕ ಹುಟ್ಟಿಸುತ್ತದೆ.

.....ಮುಂದೆ ಓದಿ

"ಅಬ್ಬ ಎಷ್ಟು ಜೋರಾಗಿವೆ ನಾಯಿಗಳು." ಚೈತ್ರ ಪಿಸುನುಡಿದಳು. "ಡಾಗ್ ಹೌಸ್ ನೋಡ್ತಿ ಏನು?"

"ಸಾರಿ ಶ್ರೀ, ಇವತ್ತು ಬೇಡ."

ಮಿ. ಪ್ರದೀಪ್‌ನ ಕಣ್ಣಲ್ಲಿ ಎಂದಿನದೇ ನೋಟ. ತುಟಿಯಂಚಿನಲ್ಲಿ ಉದಾಸಭಾವ.

"ಸಾಹೇಬ್ರೆ ಕೌ ಹೌಸ್‌ಗೆ ಹೋಗಿಬಂದ ರೇನು. ಹೋಲೆಸ್ಟೈನ್ ಜಾತಿಯ ಹಸು ಗಬ್ಬವಿದೆ ಯಂತೆ."

"ಹೌದೇ ಒಳ್ಳೆಯದು ಚೆನ್ನಾಗಿ ನೋಡಿಕೊಳ್ಳಿ."

"ಚೈತ್ರ ನೀನು ಶಾಂಭವಿ ನಿಲಯಕ್ಕೆ ಹೋಗಿ ಬಿಡು. ತುಂಬಾ ಬಿಸಿಲೇರಿದ್ರೆ ಆಯಾಸವಾಗುತ್ತೆ. ಎಸ್ಟೇಟಿನ ಕೆಲಸ ಮುಗಿಸಿಕೊಂಡು ಬರ್ತೀನಿ."

"ಹರೀಶ್ ಸ್ವಲ್ಪ ಬಾ ಇಲ್ಲಿ."

ಅವಳಷ್ಟೇ ವಯಸ್ಸಿನ ಹುಡುಗನೊಬ್ಬ ಹತ್ತಿರ ಬಂದ. "ಈತ ನಂಜುಂಡಯ್ಯನವರ ಮೊಮ್ಮಗ ಬಿ.ಎಸ್ಸಿ. ಓದ್ತಾ ಇದ್ದಾನೆ. ಇವರನ್ನು ಮನೆಗ ಬಿಟ್ಟು ಬಾ."

"ಆಗ್ಲಿ ಅಂಕಲ್." ಹುಡುಗ ಕುಣಿಯುತ್ತ ಹೊರಟ. 10 ಹೆಕ್ಟೇರಿನ ಫಾರಂನಲ್ಲಿ ಅನೇಕ ಬಗೆಯ ಮರಗಿಡಗಳಿದ್ದವು.

ಹಸಿರು ತುಂಬಿದ ಫಾರಂ ಸುಂದರವಾಗಿತ್ತು.

"ನೀವು ಚಿಕ್ಕಮ್ಮ ತಾನೆ." ಹುಡುಗ ಬಹು ವಾಚಾಳಿಯಾಗಿದ್ದ.

"ನೀವ್ಯಾಕೆ ಜೀಪು ಡ್ರೈವ್ ಮಾಡ್ಬಾರ್ದು, ಸಿಟಿಯಲ್ಲಿ ಮಾಮೂಲಿ. ಬೇಕಿದ್ರೆ ಬೈಕು, ಜೀಪು ನಾನೇ ಕಲಿಸಿಕೊಡ್ತೇನೆ." ಹುಡುಗ ಮನತುಂಬ, ಬಾಯಿತುಂಬ ಹೇಳಿದ.

"ಹೌದು ಕಲಿಯಬೇಕು."

"ಕಲಿತರೆ ಒಳ್ಳೆಯದು. ಎಲ್ಲ ಕಡೆ ಓಡಾಡ ಬೌದು. ಗಿರಿಕನ್ಯೆಯ ಮಂಟಪ ನೋಡಿದ್ದೀರೇನೂ, ತುಂಬ ಚೆನ್ನಾಗಿದೆ. ಆದರೆ ತಾತ ನಾನು ಅಲ್ಲಿಗೆಲ್ಲ ಹೋಗಕ್ಕೆ ಬಿಡಲ್ಲ."

"ಯಾಕೆ ಬಿಡಲ್ಲ?"

"ಏನೋ ಗೊತ್ತಿಲ್ಲಪ್ಪ. ಅಲ್ಲೇ ಸ್ವಲ್ಪ ದೂರದಲ್ಲಿ ಕಾಣುತ್ತಲ್ಲ ಮರಡಿಹಳ್ಳಿ ಅಂತ ಅಲ್ಲೊಂದು ಸಮಾಧಿ ಇದೆ. ಅದರ ಬಗ್ಗೆ ಕೇಳಿದರೆ ನಿಂಗ್ಯಾಕೆ ಅಂತಾರೆ ತಾತ." ಹುಡುಗ ಸರಸರನೆ ಹೇಳಿದ,

"ನಿನ್ನೂರು ಯಾವುದು ಹರೀಶ್?"

ಅವನ ಸರಳತೆ ಅವಳನ್ನು ಆಕರ್ಷಿಸಿತ್ತು. "ಭದ್ರಾವತಿ ನಮ್ಮೂರು, ತಾತನ್ನ ನೋಡೋಕೆ ಇಲ್ಲಿ ಬರ್ತಿರ್ತೀನಿ."

ಶಾಂಭವಿ ನಿಲಯದ ಮುಂದೆ ಜೀಪು ನಿಂತಿತು. "ಮೇಡಂ ನಿಮಗೆ ಡ್ರೈವಿಂಗ್ ಹೇಳ್ಕೊಡಲೇನು? ಸಾಹೇಬ್ರನ್ನ ಕೇಳಿ ನೋಡಿ ಚಿಕ್ಕಮ್ಮ ಅನ್ನಲ್ಲ ಅಂತ ಕೋಪ ಮಾಡ್ಕೋಬೇಡಿ." ಜೀಪು ಹೊರಟುಹೋಯ್ತು.

ಹೌದು, ಈ ಶಾಂಭವಿ ನಿಲಯ, ಫಾರಂ ಹೌಸ್, ಗಿರಿಕನ್ಯೆಯಾಚೆಗೆ ಏನೋ ನಿಗೂಢತೆಯ ಬಲೆ ನೇಯ್ದುಕೊಂಡಂತೆ ಅವಳಿಗೆ ಭಾಸವಾಯ್ತು. ಇಷ್ಟೊಂದು ಜನ ಆಳುಕಾಳು ತುಂಬಿಕೊಂಡು ಶ್ರೀಮಂತವಾಗಿದ್ದ ಶಾಂಭವಿ ನಿಲಯ ಹೆದರಿಕೆಯಿಂದ ಮೌನವನ್ನು ಅಪ್ಪಿಕೊಂಡಂತೆ ತೋರಿತು.

ಮಧ್ಯಾಹ್ನ ಶ್ರೇಯಸ್ ಇನ್ನೂ ಬಂದಿರಲಿಲ್ಲ. ಫೋನ್ ರಿಂಗಾಯ್ತು. ಅದು ಶ್ರೇಯಸ್ಸನದೇ. ಬರಲು ತಡವಾಗುತ್ತೆ ಎಂದು ತಿಳಿಸಿದ್ದ.

ಕೆಳಗಿನ ಹಾಲಿನಲ್ಲೊಂದು ಫೋನ್ ಮಹಡಿ ಮೇಲೊಂದು ಫೋನಿತ್ತು.

"ಒಳಗೆ ಬರಬಹುದೇನೂ." ಪರಿಚಿತ ಸ್ತ್ರೀಯರು ಬಾಗಿಲಲ್ಲಿ ನಿಂತಿದ್ದರು. ಅವರನ್ನು ಹೇಗೆ ಸ್ವಾಗತಿಸಬೇಕೋ. ಅವರಿಗೂ ಈ ಮನೆಗೂ ಏನೂ ಸಂಬಂಧವೋ ಅರಿವಾಗಲಿಲ್ಲ.

ಬಂದವರು ಯಾವ ಸಂಕೋಚವೂ ಇಲ್ಲದವರಂತೆ ಒಳಗೆ ಬಂದು ಕೋಣೆಯಲ್ಲಿನ ಕುರ್ಚಿಯಲ್ಲಿ ಅಚ್ಚುಕಟ್ಟಾಗಿ ಕೂತರು.

"ನೋಡಮ್ಮ ಚಿಕ್ಕಮ್ಮ ಅಂತ ಕರಿಯುತ್



ನೀನಿನ್ನೂ ಚಿಕ್ಕವಳು. ನಾನು ನಾಗತ್ತೆ. ದೂರದ ಸಂಬಂಧ ಶ್ರೀಗೆ, ಅತ್ತೆಯಾಗಬೇಕು. ಇವರು ಚಂದಕ್ಕ ಅಂತ ದೂರದ ಅತ್ತಿಗೆಯಾಗಬೇಕು.''

ನಾಗತ್ತೆಯೇ ಪರಿಚಯಿಸಿಕೊಂಡರು.

ಬಂದ ದಿನ, ಪೂಜೆಯ ದಿನ ಮಾತ್ರ ಅವರಿಬ್ಬರನ್ನು ಕಂಡ ನೆನಪಾಯ್ತು. "ನೀವೂ ಇಲ್ಲೇ ಇರೋದೇನು?''

"ಹೌದಮ್ಮ ನಾವೂ ಇಲ್ಲೇ ಇದೀವಿ. ಮುಂಚೆ ನಮ್ಮೆಲ್ಲರ ಊಟ ತಿಂಡಿ ಕೋಣೆ ಎಲ್ಲ ಇಲ್ಲೇ ಆಗ್ತಿತ್ತು. ಆದರೆ ಹತ್ತು ವರ್ಷದಿಂದ ಶಾಂತಜ್ಜಿ ನಮ್ಮನ್ನು ಹಿಂಭಾಗದ ಕೋಣೆಗಳಿಗೆ ಕಳಿಸಿಬಿಟ್ಟರು. ಊಟ ತಿಂಡಿಗೆ ಭತ್ಯ ಕೊಡ್ತಾರೆ. ಹಬ್ಬ ಹರಿದಿನಕ್ಕೆ ಇಲ್ಲೇ ಎಲ್ಲ ಸೇರ್ತೀವಿ.'' ಇವುಗಳೆಲ್ಲ ಹೊಸ ವಿಷಯಗಳು ಚೈತ್ರಳಿಗೆ.

"ಎಷ್ಟುಮುದ್ದುಗಾರ ಹುಡುಗಿ, ಶ್ವೇತಳಿಗಿಂತ ಇವಳೇ ಚೆನ್ನಾಗಿದ್ದಾಳೆ ಅಲ್ವೆ ಚಂದಕ್ಕ.''

"ಹೌದು ಹೌದು'' ಎಂದಳು ಚಂದಕ್ಕ.

ಮತ್ತೆ ಶ್ವೇತಳ ಹೆಸರು. "ನಾಗತ್ತೆಯವರೇ ಈ ಶ್ವೇತ ಅಂದರೆ ಯಾರು?''

"ಗೊತ್ತಿಲ್ವೆ ಪಾಪ, ಶ್ವೇತ ಶಾಂತಜ್ಜಿಯ ಮೊಮ್ಮಗಳು, ಅವಳೂ ಚೆನ್ನಾಗಿದ್ದಾಳೆ. ತುಂಬ ದಿವಸವಾಯ್ತು ಇಲ್ಲಿಗೆ ಬರದೆ. ನೀವಂತೂ ದಂತದ ಬೊಂಬೆಯಾಗಿದ್ದೀರಿ. ಮಹಾರಾಣಿಯ ವರ್ಚಸ್ಸಿದೆ ಮುಖದಲ್ಲಿ.'' ಚಂದಕ್ಕ ವರ್ಣಿಸಿದಳು.

"ಚಂದಕ್ಕ ಇವರನ್ನು ನಾವೂ ಕೂಡ ರಾಣಿ ಅಂತ ಯಾಕೆ ಕರೀಬಾರದು. ಆಶಾರಾಣಿಯನ್ನು ಹಾಗೇ ಕರೀತಿರಲಿಲ್ವೆ.''

"ರಾಣಿ ಅಂದ್ರೆ ಶಾಂತಜ್ಜಿ ಹೊಟ್ಟೆಯುರಿಯುತ್ತೆ.''

"ಪೂಜೆ ದಿವಸ ನಿಮ್ಮನ್ನು ಶಾಂತಜ್ಜಿ ಅಷ್ಟೆಲ್ಲ ಗದರಿಸಿದರಲ್ಲ, ಜೋರು ಮಾಡಬೇಕಿತ್ತು. ಹಾಗೆಲ್ಲ ಸುಮ್ಮನಿರಬಾರದು.'' ಮಹಿಳಾಮಣಿಗಳ ಉದ್ದೇಶ ತಿಳಿಯಿತು ಚೈತ್ರಳಿಗೆ. "ನೋಡಿ ಇದು ನನ್ನ ಮನೆ, ನಂಗೆ ಹೇಗೆ ಬೇಕೋ ಹಾಗಿರ್ತೀನಿ, ಇನ್ನೊಬ್ಬರ್ತ್ರ ಹೇಳಿಸ್ಕೊಳ್ಳೋದು ನಂಗಿಷ್ಟವಿಲ್ಲ.''

"ಕೋಪಿಸ್ಕೋಬೇಡಿ, ನಿಮ್ಮತ್ತೆಯ ಒಡವೆಗ ನೀವು ನೋಡಿದ್ರೇನು?''

"ಅಯ್ಯೋ ಶಾಂತಜ್ಜಿ ಎಲ್ಲಿ ಕೊಡ್ತಾ ಅವನ್ನೆಲ್ಲ. ಇಡೀ ಶಾಂಭವಿ ನಿಲಯವೇ ತನ್ನದ ಅಂದುಕೊಂಡಿತ್ತು. ಆಶಾರಾಣಿ ಒಡವೆ ಎಲ್ಲ ಇದೆಯೋ ಇಲ್ಲ ಮಗನ ಮನೆಗೆ ಸಾಗಿಸಿಬಿಟ್ಟಿದೆಯೋ.''

"ನಮ್ಮತ್ತೆ ಹೇಗಿದ್ದರು ನೀವು ನೋಡಿದ್ರೇನು.

"ಓಹೋ ಒಳ್ಳೇ ಸ್ವಭಾವದಾಕೆ. ಅಂತಸ್ತಿ ತಕ್ಕ ಹಾಗಿದ್ರು. ಆದರೆ ಈ ಜೋಡಿದಾರರೇ ಸ ಇರಲಿಲ್ಲ. ಕಂಡ ಹೆಣ್ಣುಗಳೆಲ್ಲ ಬೇಕು ಚೆನ್ನಾಗಿದ್ದರಂತೂ ಮುಗಿಯಿತು ಕಥೆ.''

"ಜೋಡಿದಾರರು ಅವರ ಜೋಡು ನಳಿಕೆಯ ರೈಫಲ್ಲು ಕೈಲಿ ಹಿಡಿದು ಹೊರಟರೆ ಸಾಕು. ಎದುರಿ ಯಾರೂ ಬರ್ತಿರಲಿಲ್ಲ. ಎಷ್ಟೊಂದು ಸಲ ಬೇಟೆಯಾ ಪ್ರಾಣಿಗಳನ್ನೆಲ್ಲ ಹೊಡೆದುಕೊಂಡು ತರ್ತಿದ್ರು. ರಾತ್ರಿ ಎಲ್ಲರಿಗೂ ಗಮ್ಮತ್ತು.''

ಚೈತ್ರಳಿಗೆ ಒಂದೊಂದೇ ಹೊಸ ವಿಷಯಗಳ ತಿಳಿಯತೊಡಗಿತ್ತು. ಆದರೂ ಈ ಹೆಂಗಸರ ಇಂ ಹರಟೆ ಅವಳಿಷ್ಟವಾಗಲಿಲ್ಲ. ಬೆಲ್ಲು ಒತ್ತಿದಳು ಸ್ವಲ್ಪ ಹೊತ್ತಿಗೆ ಚೆಲುವಿ ಬಂದಳು. "ಚೆಲುವಿ ಇವರಿಗೆಲ್ಲ ಜ್ಯೂಸ್ ಬೇಕೋ ಕಾಫಿ ಬೇಕೋ ತಂದ್ಕೊಡು. ನಂಗೆ ತುಂಬ ತಲೆನೋಯ್ತಿದೆ.''

ಇಬ್ಬರ ಮುಖಕ್ಕೆ ಹೊಡೆದಂತಾಯಿತು. "ಹೌದಾ ಚಿಕ್ಕಮ್ಮ ನಮಗೇನೂ ಬೇಡ. ಬರ್ತೀವಿ

"ಐಸ್‌ಕ್ರೀಮ್ ತಂದ್ಕೊಡಲೆ ನಾಗತ್ತೆ?''

ನಾಗತ್ತೆಗೆ ಸಿಟ್ಟು ಬಂತು; ಬಾಯಿಬಿಡಲಿಲ್ಲ


"ಹಾಗಿದ್ರೆ ತಗೊಂಡ್ಬಾ ಬೇಗ.''

"ಅಮ್ಮಾವ್ರೆ ಸಾಹೇಬ್ರು ಐದು ನಿಮಿಷದಲ್ಲಿ ಬರ್ತಾರಂತೆ.''

"ಏನೂ ಶ್ರೀ ಬರ್ತಾನ್ಯೇ, ಬರ್ತೀನಮ್ಮ.'' ಚಾಟಿಯೇಟಿಗೆ ಹೊರಡುವ ಕುದುರೆಗಳಂತೆ ಇಬ್ಬರೂ ಹೊರಬಿದ್ದರು. ಅವರೆಲ್ಲ ಹೋಗುವುದನ್ನೇ ನೋಡುತ್ತ ನಿಂತಿದ್ದಳು ಚೆಲುವಿ.

(ಸಶೇಷ)

ಚುಕ್ಕಿ 23ರಿಂದ 13ರವರೆಗೆ





ಜಿ. ಕೆ. ಮಾಲತಿ
ಶಿವಮೊಗ್ಗ

ಪ್ರತಿಯೊಂದೂ ಹತ್ತು ರೂಪಾಯಿ ಬಹುಮಾನ ಪಡೆದಿದೆ


ರಂಗೋಲಿ

ಸೂಚನೆ

ರಂಗೋಲಿ ಚಿತ್ರಗಳನ್ನು ಕರಿಯ ಶಾಯಿ ಅಥವಾ ಪೆನ್ಸಿಲ್‌ಗಳಲ್ಲಿ ಮಾತ್ರ 'ಬರೆಯಿರಿ. ನೀಲಿ ಶಾಯಿಯಲ್ಲಿ ಬರೆಯಬೇಡಿ.

ರಂಗೋಲಿ ಚಿತ್ರಗಳೊಂದಿಗೆ ನಿಮ್ಮ ಪಾಸ್‌ಪೋರ್ಟ್ ಸೈಜಿನ ಕಪ್ಪು ಬಿಳುಪು ಛಾಯಾಚಿತ್ರವನ್ನು ಕಳುಹಿಸಲು ಮರೆಯದಿರಿ.

ಚುಕ್ಕೆ 15ರಿಂದ 8ರವರೆಗೆ





ಕೆ. ನಾಗರತ್ನ
ಕಂಬದಕೋಣೆ

ಚಿನ್ನದ ಪುತ್ಥಳಿ

ಧಾರಾವಾಹಿ—೧೩



ಎಚ್. ಕೆ. ಅನಸೂಯ ಸಂಪತ್

ಸಾವಿತ್ರಮ್ಮ ಮದುವೆಯ ದಿನ ಗೊತ್ತು ಮಾಡಿದರು.

ವರ್ಷ ತನ್ನ ಗೆಳತಿಯರಿಗೆಲ್ಲ ಕರೆಯೋಲೆ ಕೊಟ್ಟಳು. ಎಲ್ಲರ ಮದುವೆಗಿಂತ ಮೊದಲು ಅವಳದೇ ನಿಶ್ಕರ್ಷೆಯಾಗಿತ್ತು.

ಅವಳಿಂದ ವಿಷಯ ತಿಳಿದ ರಾಧಾ ಬೆಪ್ಪಾದಳು.

"ಅಂತೂ ಸವಾಲು ಹಾಕಿದಂತೆ ಶ್ರೀಮಂತನನ್ನೇ ಹೊಡೆದುಬಿಟ್ಟೆ" ಎಂದಳು.

"ನಾನು ಆ ದಿನವೇ ಹೇಳಿರಲಿಲ್ಲವೇ, ಯಾರ ಯಾರ ಅದೃಷ್ಟ ಹೇಗೆ ಇದೆಯೋ ಅಂತ" ಎಂದಳು ಪ್ರೀತಿ.

"ನೀವೆಲ್ಲ ಖಂಡಿತ ಮದುವೆಗೆ ಬನ್ನಿ" ಎಂದು ಕರೆದಳು ವರ್ಷ.

"ಬರದೆ ಇರುತ್ತೇವೆಯೇ, ನಿನ್ನ ಮನ್ಮಥನನ್ನು ನೋಡಲು ಬಂದೇ ಬರುತ್ತೇವೆ" ಎಂದರು ಎಲ್ಲರೂ. ಶುಭ ಮುಹೂರ್ತದಲ್ಲಿ ವರುಣ್ ವರ್ಷರ ಮದುವೆ ಅತ್ಯಂತ ವೈಭವದಿಂದ ನೆರವೇರಿತ್ತು. ಮದುವೆಗೆ ಅನೇಕ ಗಣ್ಯ ಉದ್ಯಮಿಗಳು, ಸರ್ಕಾರದ ಉನ್ನತ ಅಧಿಕಾರಿಗಳು ಹಾಜರಿದ್ದರು. ಆ ಮದುವೆಯ ಅದ್ದೂರಿಯನ್ನು ಕಂಡು ವರ್ಷಳ ಗೆಳತಿಯರು ಮೂಗಿನ ಮೇಲೆ ಬೆರಳಿಟ್ಟರು. ತಮ್ಮ ಯಾರ ಮದುವೆಯೂ ಇಷ್ಟು ಅದ್ದೂರಿಯಿಂದ ನೆರವೇರಲಾರದೇನೋ ಎನಿಸಿತು. ವರ್ಷಳ ಅದೃಷ್ಟಕ್ಕೆ ಕರುಬಿದರು.

"ವರ್ಷ, ನಿನ್ನ ಹಸ್ಬೆಂಡ್ ಹ್ಯಾಂಡ್‌ಸಮ್ ಕಣೇ." ಮೂವರು ಗೆಳತಿಯರೂ ಅವಳ ಕಿವಿಯಲ್ಲಿ ಪಿಸುಗುಟ್ಟಿದರು.

ವರ್ಷ ಗಂಡನನ್ನು ಹೆಮ್ಮೆ, ಅಭಿಮಾನದಿಂದ ನೋಡಿದಳು. ಅವಳು ರಿಸೆಪ್ಷನ್‌ಗೆ ಉಟ್ಟಿದ್ದ ಹದಿನೈದು ಸಾವಿರ ಬೆಲೆಬಾಳುವ ಸೀರೆ, ಮೈತುಂಬ ಆಭರಣ ಒಟ್ಟಿನಲ್ಲಿ ಸಾಲಂಕೃತ ಬೊಂಬೆ ಅವಳು.

"ನಾವಿನ್ನು ಬರ್ತೀವಿ ಕಣೇ."

"ಊಟ ಮಾಡಿಕೊಂಡು ಹೋಗಿ."

"ಹ್ಞಂ."

ರಿಸೆಪ್ಶನ್ ಮುಗಿದು ಊಟವಾದಾಗ ಹತ್ತೂವರೆಯಾಗಿತ್ತು.

ಅವನು ಪಂಚತಾರಾ ಹೋಟೆಲೊಂದರಲ್ಲಿ ತಮ್ಮ ಮೊದಲರಾತ್ರಿಯನ್ನು ಕಳೆಯಬೇಕೆಂದು ಏರ್ಪಾಡು ಮಾಡಿದ್ದ.

ಕುಮುದಮ್ಮ ಮಗಳನ್ನು, ಅಳಿಯನನ್ನು ತಮ್ಮ ಮನೆಗೆ ಕರೆದೊಯ್ಯಬಹುದೆಂದು ನಿರೀಕ್ಷಿಸಿದರು. ಮರುದಿನ ಅವರುಗಳನ್ನು ಮನೆ ಕರೆದೊಯ್ದು ಔತಣ ಮಾಡುವ ಆಸೆಯಿತ್ತು ನಿರಾಶೆಯಾಯಿತು.

"ಅಮ್ಮಾ, ಅರೇಂಜ್‌ಮೆಂಟ್ಸ್ ಆಗಿದೆ ನಾನೂ ವರ್ಷ ಹೋಗುತ್ತೇವೆ." ವರುಣ್ ತಾಯಿಗ ನುಡಿದ.

"ಹೋಗಲೇಬೇಕೇನೋ, ಇಲ್ಲಿಯೆ ಏರ್ಪಾಡು ಮಾಡುತ್ತೇವೆ."

"ಅಮ್ಮಾ ಬೆಳಗಿನಿಂದ ನೀನು ಹೇಳಿದಂತೆ ಕೇಳಿ ಹೊಗೆ ಕುಡಿದು ಸಾಕಾಗಿದೆ. ಈಗಲಾದರೂ ಹಾಯಾಗಿ ನಿದ್ರೆ ಮಾಡುತ್ತೇವೆ."

"ಸರಿಯಪ್ಪ" ಎಂದರು.

ವರ್ಷ ಅತ್ತೆಯ ಅಣತಿಯಂತೆ ಆ ಸೀ ಬದಲಾಯಿಸಿ ತಿಳಿಗೆಂಪಿಗೆ ಗೇಣುದ್ದ ಅಂಚಿರು

ಮೈಸೂರ್ ಸಿಲ್ಕ್ ಸೀರೆಯುಟ್ಟಳು. ತಾಯಿ ತಂದೆಗೆ ನಮಸ್ಕರಿಸಿದಾಗ ಅವರಿಬ್ಬರ ಕಂಗಳೂ ಒದ್ದೆಯಾದವು.

ವರುಣ್ ಆಗಲೇ ಕಾರನ್ನು ತಂದು ನಿಲ್ಲಿಸಿ ಅವಳಿಗಾಗಿ ಕಾಯುತ್ತಿದ್ದ. ವರ್ಷ ಬಂದು ಕುಳಿತಾಗ ಅವನು ಕಾರನ್ನು ಹೊರಡಿಸುತ್ತ ರೇಗಿದ,

"ಎಷ್ಟು ಹೊತ್ತು?"

"ಎಲ್ಲರಿಗೂ ಹೇಳಿ ಬರಬೇಕಲ್ಲ."

"ಎಲ್ಲಿ ಹೋಗುತ್ತಿದ್ದೀಯಾ ಹೇಳೋದಕ್ಕೆ, ನನ್ನ ಜೊತೆ ತಾನೇ ಬರುತ್ತಿದ್ದಿಯಾ."

ಅವಳು ಮಾತನಾಡಲಿಲ್ಲ. ಅವನ ಹತ್ತಿರ ಸರಿದು ಕುಳಿತಳು. ಆದರೆ ಅವನು ಸ್ವಲ್ಪವೂ ವಿಚಲಿತನಾಗದೆ ರಸ್ತೆಯ ಮೇಲೆ ನಿಗಾ ಇಟ್ಟು ಕಾರನ್ನು ಓಡಿಸುತ್ತಿದ್ದ.

ಅತಿ ದೊಡ್ಡ ಹೋಟೆಲ್ಲಿನ ದೊಡ್ಡ ಪೋರ್ಟಿಕೋದಲ್ಲಿ ಕಾರನ್ನು ಪಾರ್ಕ್ ಮಾಡಿ ರಿಸೆಪ್ಶನಿಸ್ಟ್ ಬಳಿ ಬಂದ. ಅವಳು ನಗುತ್ತ ರೂಮಿನ ಕೀ ಕೊಟ್ಟಳು. ವರುಣ್ ವರ್ಷಳ ಭುಜ ಬಳಸಿ ಮಹಡಿಯ ಮೇಲೆ ಕರೆದೊಯ್ದ.

ಬಾಗಿಲು ತೆರೆದ ಕೂಡಲೇ ಅವರನ್ನು ಸ್ವಾಗತಿಸಿದ್ದು "ವೆಲ್‌ಕಮ್ ಟು ನ್ಯೂ ಕಪಲ್" ಎಂಬ ಬರಹ.

ಒಳಗೆ ಅಡಿಯಿಟ್ಟಾಗ ಗಂಧರ್ವಲೋಕಕ್ಕೆ ಬಂದಿಳಿದಂತಾಯಿತು ವರ್ಷಳಿಗೆ.

ಹೂವಿನ ಹಾಸಿಗೆ ನಾಜೂಕಾಗಿ ಅಲಂಕೃತವಾಗಿತ್ತು.

ಟೇಬಲ್ಲಿನ ಮೇಲೆ ತಿಂಡಿಗಳು. ಹಾಲು, ಜೊತೆಗೆ ಮನಸ್ಸಿಗೆ ಮುದ ಕೊಡುವ ಪರಿಮಳ. ನೆಲದ ಮೇಲೆ ಅವರು ನಡೆಯುವ ಹಾದಿಗೆ ಕಾರ್ಪೆಟ್ ಮೇಲೆ ಹೂವು ಚೆಲ್ಲಿದ್ದರು.

ವರುಣ್ ಬಾಗಿಲನ್ನು ಲಾಕ್ ಮಾಡಿ ವರ್ಷಳನ್ನು ಅನಾಮತ್ತು ಎತ್ತಿಕೊಂಡು ಬಂದು ಹಾಸಿಗೆಯ ಮೇಲೆ ಮಲಗಿಸಿದ.

ವರ್ಷ ಕೈಗಳಿಂದ ಮುಖ ಮುಚ್ಚಿಕೊಂಡಳು.

"ವರ್ಷ, ನೀನು ತುಂಬ ಚೆನ್ನಾಗಿದ್ದೀಯಾ."

"ಎಷ್ಟು?"

"ಇಷ್ಟು" ಅವಳನ್ನು ಬಾಚಿ ತಬ್ಬಿಕೊಂಡ.

"ನಮ್ಮ ತಂದೆ ತಾಯಿಗೆ ನಾಳೆ ನಮ್ಮನ್ನು ನಮ್ಮ ಮನೆಗೆ ಕರೆದೊಯ್ಯುವ ಆಸೆರೀ."

"ಛೇ ಈಗ ಏಕೆ ಆ ಮಾತು." ರೇಗಿದ.

ಅವಳು ಸುಮ್ಮನಾದಳು. ಅವನ ಮೂಡ್ ಚೆನ್ನಾಗಿದೆಯೆಂದು ಆ ವಿಷಯ ಹೇಳಲು ಹೋಗಿದ್ದಳು. ಆದರೆ ಅವನು ರೇಗಿದ.

"ಈ ನೈಟಿ ಹಾಕ್ಕೋ." ಪಾರದರ್ಶಕ ತಿಳಿ ಗುಲಾಬಿ ನೈಟಿಯನ್ನು ತೆಗೆದು ಅವಳ ಕೈಗಿತ್ತ.

"ಈಗ ಬೇಡರೀ, ನನಗೆ ನಾಚಿಕೆ."

"ನಾಚಿಕೆ ಏಕೆ, ನಾನೇ ಹಾಕುತ್ತೀನಿ." ಅವನು ಅವಳ ಸೆರಗನ್ನು ಹಿಡಿದೆಳೆದಾಗ ಅವಳು ಬಿಡಿಸಿಕೊಂಡಳು.

ಅವನ ಬಲವಂತಕ್ಕೆ ನೈಟಿ ತೊಟ್ಟಾಗ ಅವಳಿಗೆ ನಾಚಿಕೆ.

"ನನಗೆ ಇಂತಾದ್ದೆಲ್ಲ ಅಭ್ಯಾಸವಿಲ್ಲ."

"ಅಭ್ಯಾಸ ಇಲ್ಲದಿದ್ದರೆ ಮಾಡಿಕೋ" ಎನ್ನುತ್ತ ಅವಳನ್ನು ತನ್ನ ಮೇಲೆ ಎಳೆದುಕೊಂಡು ಅಧರಗಳಿಗೆ ಚುಂಬಿಸಿದ.

"ಲೈಟ್ ಆರಿಸಿಬಿಡೋಣ." ಅವಳು ಮೆಲ್ಲಗೆ ನುಡಿದಳು.

ಕಳೆದ ಸಂಚಿಕೆಯಲ್ಲಿ....

ಸುಂದರವಾದ ಮೈಕಟ್ಟಿನ ಚಲುವೆ ವರ್ಷ. ಆಕೆಗೆ ಅನೇಕ ಕನಸುಗಳು. ಆದರೆ ಮನೆಯಲ್ಲಿನ ಬಡತನದಿಂದಾಗಿ ಅದಕ್ಕೆ ಕಡಿವಾಣ. ವಸಂತ್‌ನ ಜೊತೆ ಮದುವೆಯನ್ನು ಆಕೆ ನಿರಾಕರಿಸುತ್ತಾಳೆ. ಶ್ರೀಮಂತ ವರುಣ್‌ನ ಮೇಲೆ ಅವಳಿಗ ಅನುರಾಗ.

.....ಮುಂದೆ ಓದಿ

"ನೋ, ನನಗೆ ಬೆಳಕಿನಲ್ಲಿಯೇ ನನ್ನ ವರ್ಷಳನ್ನು ನೋಡುವ ಆಸೆ."

"ಬೇಡಾರೀ."

"ಬೇಕೂರೀ" ಎನ್ನುತ್ತ ಅವಳನ್ನು ಇಡಿಯಾಗಿ ತನ್ನವಳನ್ನಾಗಿಸಿಕೊಂಡಾಗ ವರ್ಷ ನಾಚಿಕೆಯಿಂದ ತನ್ನನ್ನು ಅವನಿಗರ್ಪಿಸಿಕೊಂಡಳು.

ರಾತ್ರಿ ಪೂರ್ತಿ ಅವಳನ್ನು ಬಳಸಿಯೇ ಮಲಗಿದ್ದ.

ಆದರೆ ಎಂದಿನಂತೆ ವರ್ಷಳಿಗೆ ಐದು ಗಂಟೆಗೆ ಎಚ್ಚರವಾಯಿತು. ಪಾಠಕ್ಕೆ ಹೋಗಲು ನಿತ್ಯವೂ ಆ ಹೊತ್ತಿಗೆ ಎದ್ದು ಸಿದ್ಧಳಾಗುತ್ತಿದ್ದಳು. ಆದರೆ ಈ ದಿನ ಜೀವನದಲ್ಲಿ ಎಂತಹ ಬದಲಾವಣೆಯಾಗಿ ಹೋಗಿದೆ.

ಗಂಡನ ಕೈಯನ್ನು ಮೃದುವಾಗಿ ಸರಿಸಿದಳು.

"ವರ್ಷ ಡಿಯರ್, ಎಲ್ಲಿಗೆ ಓಡಿ ಹೋಗುತ್ತಿದ್ದಿಯಾ?"

"ನನಗೆ ಬೇಗ ಎದ್ದೇ ರೂಡಿ. ನಾನು ಏಳುತ್ತೀನಿ."

"ಎದ್ದು ಏನು ಮಾಡುತ್ತೀಯಾ ಮಲಗಿಕೋ." ಅವಳನ್ನು ಎಳೆದುಕೊಂಡು ರಗ್ಗು ಹೊದಿಸಿದ.

"ಅವರೆಲ್ಲ ಕಾಯುತ್ತಿರುತ್ತಾರೆ. ಬೇಗ ಹೋಗೋಣ."

"ಡೋಂಟ್ ಬಿ ಸಿಲ್ಲಿ. ಹತ್ತು ಗಂಟೆಗೆ ಹೋದರಾಯಿತು."

"ಹಾಗಲ್ಲ, ಏನೇನೋ ಶಾಸ್ತ್ರಗಳು ಇರುತ್ತವೆ."

"ಅವರ ಶಾಸ್ತ್ರ ಇದ್ದದ್ದೇ. ಅದಕ್ಕೆ ನಾವು ಏಕೆ ಯೋಚಿಸಬೇಕು."

"ಎಲ್ಲರೂ ಏನಂದುಕೊಳ್ಳುತ್ತಾರೆ?"

"ನೋಡು ಯಾರು ಏನು ಬೇಕಾದರೂ ಅಂದುಕೊಳ್ಳಲಿ. ನೀನು ಮಾತ್ರ ನಾನು ಹೇಳಿದಂತೆ ಕೇಳಬೇಕು."

"....."

"ನನ್ನ ಅಂತಸ್ತಿಗೆ ತಕ್ಕ ಹಾಗೆ ವರ್ತಿಸಬೇಕು. ಈಗ ನೀನು ಹಿಂದಿನ ವರ್ಷ ಅಲ್ಲ. ವರ್ಷ ವರುಣ್, ಗೊತ್ತಾಯಿತಾ?"

"ಗೊತ್ತು."

"ಸರಿ ಮತ್ತೆ ಮಲಗಿಕೋ."

ಅವನ ಒತ್ತಾಯಕ್ಕೆ ಅವಳು ಮಣಿದಳು. ಅವನು ಅವಳನ್ನು ಮುದ್ದಿಸತೊಡಗಿದ.

ಕೊನೆಗೆ ಇಬ್ಬರೂ ಎದ್ದಾಗ ಒಂಬತ್ತು ಗಂಟೆಯಾಗಿತ್ತು.

ವರ್ಷ ಸ್ನಾನ ಮಾಡಿ ಬರುವ ವೇಳೆಗೆ ಡೈನಿಂಗ್ ಟೇಬಲ್ ಮೇಲೆ ತಿಂಡಿ ಸಿದ್ಧವಾಗಿತ್ತು. ವರುಣ್ ಸ್ನಾನ ಮುಗಿಸಿ ಬಂದ.

"ವರ್ಷ, ಬ್ರೆಡ್ ಟೋಸ್ಟ್ ಜ್ಯಾಮ್ ನಿನಗೆ ಇಷ್ಟ ತಾನೇ."

ಬ್ರೆಡ್ ಬೇಡವೆನ್ನಲು ನಾಲಿಗೆ ಹಾತೊರೆದರೂ ಅವನಿಗೆ ಬೇಸರವಾಗಬಹುದೆಂದು ಸುಮ್ಮನಾದಳು. ಬಲವಂತಕ್ಕೆ ತಿಂಡಿ ತಿಂದು ಹೊರಟಾಗ ಹತ್ತು ಗಂಟೆಯಾಗಿತ್ತು.

ಎಲ್ಲರೂ ಅವರಿಗಾಗಿ ಕಾಯುತ್ತಿದ್ದರು. ಸಾವಿತ್ರಮ್ಮನ ಆಸೆಯಂತೆ ಸತ್ಯನಾರಾಯಣನ ಪೂಜೆ ಸಾಂಗವಾಗಿ ನೆರವೇರಿತು. ಜೊತೆಗೆ ಮೃಷ್ಟಾನ್ನ ಭೋಜನವೂ ಆಯಿತು.

ಕುಮುದಮ್ಮ ಹೊರಡುವ ಸಮಯದಲ್ಲಿ ತಮ್ಮ ಮನದ ಅಭಿಲಾಷೆಯನ್ನು ಸಾವಿತ್ರಮ್ಮನ ಬಳಿ ತೋಡಿಕೊಂಡರು.

"ಸಾವಿತ್ರಮ್ಮನವರೇ, ಅವರಿಬ್ಬರನ್ನು ನಮ್ಮ ಮನೆಗೆ ಒಂದರ್ಧ ಗಂಟೆ ಕಳುಹಿಸಿಕೊಡಿ."

"ಓಹ್ ಅದಕ್ಕೇನಂತೆ ಧಾರಾಳವಾಗಿ ಕರೆದುಕೊಂಡು ಹೋಗಿ. ಅದಕ್ಕೆ ನನ್ನನ್ನು ಕೇಳಬೇಕೆ" ಎಂದರು.

ವರುಣ್‌ಗೆ ವಿಷಯ ತಿಳಿದಾಗ ಅವನು ಕೂಗಾಡಿದ.

"ಈಗ ಅವರ ಮನೆಗೆ ಹೋಗಬೇಕೆ ಸಾಧ್ಯವಿಲ್ಲ. ಹೋಟೆಲ್ ತಾಜ್‌ನಲ್ಲಿ ಒಂದು



ಪಾರ್ಟಿಯಿದೆ. ನಾವು ಹೋಗಬೇಕು.''

"ವರುಣ್ ಹಾಗಂದರೆ ಹೇಗೋ. ಪಾಪ ಆಕೆ ಆಸೆಪಟ್ಟು ಕರೆಯುತ್ತಿದ್ದಾರೆ. ಹೋಗಿ ಬನ್ನಿ.''

"ಅಮ್ಮಾ, ನನ್ನನ್ನು ಕೇಳದೆ ನೀನು ಹೇಗೆ ಒಪ್ಪಿಕೊಂಡೆ?''

"ಈಗ ಒಪ್ಪಿಕೊಂಡಾಗಿದೆ. ಇಬ್ಬರೂ ಹೋಗಿ ಅವರ ಮನೆಯ ದೇವರಿಗೆ ನಮಸ್ಕರಿಸಿ ಅನಂತರ ಪಾರ್ಟಿಗೆ ಹೋಗಿ.''

"ಸಾಧ್ಯವಿಲ್ಲ ಅಮ್ಮಾ.''

".....''

"ವರ್ಷ ಬಾ ಇಲ್ಲಿ.''

ವರ್ಷ ಅವನ ಮುಂದೆ ಬೊಂಬೆಯಂತೆ ನಿಂತಳು.

"ನೋಡು ವರ್ಷ, ನಾವು ಈಗ ಬರುವುದಕ್ಕೆ ಆಗುವುದಿಲ್ಲ ಅಂತ ನಿಮ್ಮ ತಾಯಿಗೆ ಹೇಳು. ನಾವು ತಾಜ್‌ನಲ್ಲಿ ಪಾರ್ಟಿಗೆ ಹೋಗಬೇಕು.''

"ಐದು ನಿಮಿಷ ಹೋಗಿ ಬರೋಣ.''

"ವರ್ಷ.'' ಗುಡುಗಿದ.

ಅವನ ಕೂಗಿಗೆ ಅವಳು ನಡುಗಿದಳು. ತಾಯಿಯ ಬಳಿಗೆ ಹೋಗಿ,

"ಅಮ್ಮಾ ಇವರು ನಾನು ಯಾವುದೋ ಪಾರ್ಟಿಗೆ ಹೋಗುತ್ತಿದ್ದೇವೆ. ಸಂಜೆಗೆ ಬರುತ್ತೇವೆ.''

"ವರ್ಷ ಹೆತ್ತವರು ಮದುವೆಯಾದ ಕೂಡಲೇ ದೂರವಾದೆವೇನೇ? ನಿನ್ನ ಗಂಡನಿಗೆ ಹೇಳಿ ಒಪ್ಪಿಸು.''

"ಇಲ್ಲಮ್ಮ ಅವರು ಒಪ್ಪುವುದಿಲ್ಲ. ನಮ್ಮ ಅತ್ತೆ ಹೇಳಿದುದಕ್ಕೆ ಅವರ ಮೇಲೇ ರೇಗಿದರು.''

"ಸರಿಯಮ್ಮ. ಎಷ್ಟಾದರೂ ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ತಾನೇ? ಮದುವೆ ಮಾಡಿಕೊಟ್ಟ ಮೇಲೆ ಮುಗಿಯಿತು. ನೀನು ಅವರ ಮನೆಯ ವಸ್ತು'' ಎನ್ನುತ್ತ ನಿಟ್ಟುಸಿರುಗರೆದರು.

"ಏಕೆ ಹಾಗಂತೀರಿ ಕುಮುದಮ್ಮ. ಹೆಣ್ಣು ಮಕ್ಕಳಿಗೆ ತವರು ಯಾವಾಗಲೂ ಹೆಚ್ಚು. ಅವನು ಸ್ವಲ್ಪ ಹಟವಾದಿ. ಅದಕ್ಕೆ ಅವನ ಮಾತೇ ನಡೆಯಬೇಕು ಎನ್ನುವ ಹಟದಿಂದ ಕರೆದುಕೊಂಡು ಹೋಗುತ್ತಿದ್ದಾನೆ. ನೀವು ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ.'' ಸಾವಿತ್ರಮ್ಮ ನುಡಿದರು.

"ಅಮ್ಮಾ ತುಂಬ ದೊಡ್ಡ ಮಾತಾಯಿತು. ನೀವು ಏಕೆ ಬೇಜಾರು ಮಾಡಿಕೊಳ್ಳುತ್ತೀರಿ. ಅವರಿಗೆ ಬಿಡುವಾದಾಗ ಬರಲಿಬಿಡಿ'' ಎಂದರು.

ವರುಣ್ ವರ್ಷ ಪಾರ್ಟಿಗೆ ಹೋದನಂತರ ಕಲ್ಯಾಣ ಮಂಟಪ ಕಾಲಿ ಮಾಡಿ ಮನೆಗೆ ಹೊರಟರು.

ಮಗಳನ್ನು ಬಿಟ್ಟು ಹೋಗಲು ಹೆತ್ತವರಿಗೆ ಬೇಸರ. ಅದೂ ಅಲ್ಲದೆ ನಾದಿನಿ ರಮಾ ಮದುವೆಗೆ ಬಂದಿದ್ದಾಗ ನೇರವಾಗಿಯೇ ಕುಮುದಮ್ಮನನ್ನು ದಬಾಯಿಸಿದ್ದಳು.

"ಏನು, ಅತ್ತಿಗೆ, ಮಗಳಿಗೆ ಶ್ರೀಮಂತ ವರ ಸಿಕ್ಕಿದ ಅಂತ ವಸಂತ್ ಬೇಡವಾದ ಅಲ್ಲವೇ? ಮೊದಲೇ ಈ ವಿಚಾರ ಹೇಳೋದಕ್ಕೆ ಏನಾಗಿತ್ತು'' ಎಂದು ರೇಗಿದ್ದಳು.

"ನಮಗೇ ಗೊತ್ತಿರಲಿಲ್ಲ ರಮಾ, ಅವರಾಗಿಯೇ ಕೇಳಿದರು. ಒಪ್ಪಿಕೊಂಡೆವು.''

"ಆಗ ನಿಮಗೆ ವಸಂತ್‌ನ ಜ್ಞಾಪಕ ಬರಲಿಲ್ಲವೇ?''

"ನಾವು ಏನು ಹೇಳಿ ಪ್ರಯೋಜನ ರಮಾ, ವರ್ಷ ಸಹ ಅವನನ್ನು ಮದುವೆಯಾಗಲು ಮನಪೂರ್ವಕ ಒಪ್ಪಿದ್ದಳು. ಹೀಗಿರುವಾಗ ನಾನು ಏನು ಹೇಳಲೂ ಸಾಧ್ಯವಿರಲಿಲ್ಲ.''

"ಹ್ಞುಂ ಎಷ್ಟಾದರೂ ಶ್ರೀಮಂತ, ಐ.ಎ.ಎಸ್. ಆಫೀಸರ್. ಅವನು ಸಿಕ್ಕಿರುವಾಗ ನನ್ನ ಮಗ ವಸಂತ ಏಕೆ ಬೇಕು ಅವಳಿಗೆ?''

"ರಮಾ ಏನೋ ಋಣಾನುಬಂಧವಿರಲಿಲ್ಲ ಆಗಲಿಲ್ಲ. ನೀನು ಬೇಜಾರು ಮಾಡಿಕೊಳ್ಳಬೇಡ.''

"ನಿಮಗೇನು ಗೊತ್ತು ನೀವು ನಮಗೆ ಮಾಡಿರುವ ಆಘಾತ. ವರ್ಷ ಮನಸ್ಸು ಬದಲಿಸಬಹುದು ಅಂತ ವಸಂತ್ ಕಾಯುತ್ತಿದ್ದ. ಆದರೆ ಈಗ ಅವನಿಗೆ ಎಷ್ಟು ಬೇಜಾರು.''

".....''

(ಸಶೇಷ)

ರಾಗಸಂಗಮ

ಲಾಟರಿ

ಬಹುಮಾನ ರೂ. 200

* ಓದುಗರಿಗಾಗಿ 'ರಾಗಸಂಗಮ' ನಡೆಸುವ ಒಂದು ನೂತನ 'ಲಾಟರಿ ಡ್ರಾ' ಇದು.
* ಈ ಲಾಟರಿಗಾಗಿ ನೀವು ಒಂದು ಪೈಸೆ ಕೂಡ ಹಣ ಕೊಡುವ ಅಗತ್ಯವಿಲ್ಲ.
* 'ರಾಗಸಂಗಮ' ಪತ್ರಿಕೆಯನ್ನು ಕೊಂಡು ಓದುವ ಪ್ರತಿಯೊಬ್ಬರೂ ಈ 'ಲಾಟರಿ ಡ್ರಾ' ನಲ್ಲಿ ಭಾಗವಹಿಸಬಹುದು.
* 'ಪದರಂಗ' 'ಜಾಣ್ಮೆ ಸ್ಪರ್ಧೆ' ಮುಂತಾದುವುಗಳನ್ನು ನಡೆಸಿದರೆ ಒಂದು ವರ್ಗದ ಓದುಗರು ಮಾತ್ರ ಅದರಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.
* ಆದರೆ 'ರಾಗಸಂಗಮ' ಓದುಗರೆಲ್ಲರೂ ಆಸಕ್ತಿಯಿಂದ ಭಾಗವಹಿಸಬೇಕೆಂಬ ಉದ್ದೇಶದಿಂದ, ಅವರ ವಯಸ್ಸು, ವಿದ್ಯಾಭ್ಯಾಸ, ಬುದ್ಧಿವಂತಿಕೆ, ಇವುಗಳನ್ನು ಆಧಾರವಾಗಿಟ್ಟು ಸ್ಪರ್ಧೆಯನ್ನು ನಡೆಸದೆ ಬಹಳ ಸುಲಭವಾದ ಈ 'ಲಾಟರಿ ಡ್ರಾ'ವನ್ನು ನಡೆಸುತ್ತೇವೆ.
* ನೀವು ಮಾಡಬೇಕಾದ್ದು ಬಹಳ ಸುಲಭವಾದದ್ದು ಹಾಗೂ ಶ್ರಮವಿಲ್ಲದ್ದು.
* ನಿಮಗಾಗಿ ಈ ಪುಟದಲ್ಲಿ 'ಲಾಟರಿ ಡ್ರಾ ಸಂಖ್ಯೆ'ಯೊಂದಿಗೆ ಕೂಡಿದ ನಮ್ಮ ವಿಳಾಸವನ್ನು ಮುದ್ರಿಸಿದ್ದೇವೆ. ಇದನ್ನು ಕತ್ತರಿಸಿ ತೆಗೆದು ಅಂಚೆ ಕಾರ್ಡಿನ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಿ, ಹಾಗೂ ಅದೇ ಮಗ್ಗುಲಿನ, ಬಲಬದಿಗೆ ಮೀಸಲಾಗಿರುವ ಖಾಲಿ ಜಾಗದಲ್ಲಿ ಇದೇ ಪುಟದಲ್ಲಿ ಸೂಚಿಸಿರುವ ವಿವರಗಳನ್ನು ಬರೆದು ಕೊನೆಯ ತಾರೀಖು ಮತ್ತು ಸಮಯದೊಳಗೆ ನಮ್ಮ ಕೈ ಸೇರುವಂತೆ ಕಳುಹಿಸಿ.

ನೆನಪಿಡಿ : ನಮ್ಮ ವಿಳಾಸವನ್ನು ಮಾತ್ರ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಬಹುದೇ ವಿನಾ ಬೇರೆ ಏನನ್ನೂ ಅಂಟಿಸಬಾರದು. ಇತರ ವಿವರಗಳನ್ನೆಲ್ಲಾ ಕೈಯಲ್ಲೇ ಬರೆದು ಕಳುಹಿಸಬೇಕು.

* ಪ್ರತಿ ವಾರವೂ ಲಾಟರಿ ಟಿಕೆಟ್ಟುಗಳನ್ನು 'ಡ್ರಾ' ಪದ್ಧತಿಯಲ್ಲಿ ಆಯ್ಕೆ ಮಾಡಿ, ನಾಲ್ವರು ಅದೃಷ್ಟಶಾಲಿ ಓದುಗರಿಗೆ ತಲಾ ರೂ. 50 ರಂತೆ ರೂ. 200 ಬಹುಮಾನ ನೀಡಲಾಗುವುದು.
* 'ಡ್ರಾ'ನಲ್ಲಿ ಯಶಸ್ವಿಯಾದವರ ಹೆಸರು ಮತ್ತು ವಿಳಾಸ ಪ್ರಕಟವಾಗುವ 'ರಾಗಸಂಗಮ'ದ ಸಂಚಿಕೆ : 5-7-92.
* ನಿಮ್ಮ 'ಲಾಟರಿ ಟಿಕೇಟ್' ಅಂಚೆ ಕಾರ್ಡುಗಳು ನಮ್ಮ ಕಚೇರಿಗೆ ಬಂದು ಸೇರಬೇಕಾದ ಕೊನೆಯ ತಾರೀಖು ಮತ್ತು ಸಮಯ : ಶುಕ್ರವಾರ 12-6-91 ಸಂಜೆ 5 ಗಂಟೆ.

ಅಂಚೆ ಕಾರ್ಡಿನ ವಿಳಾಸದ ಸ್ಥಳದಲ್ಲಿ ಇದನ್ನು ಕತ್ತರಿಸಿ ಅಂಟಿಸಿ.

ರಾಗಸಂಗಮ ಲಾಟರಿ ಡ್ರಾ – ೧.೨೯

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646
41, ಕೋಟೆ 'ಬಿ' ಬೀದಿ
ಬೆಂಗಳೂರು – 560 002
BANGALORE - 560 002

ಅಂಚೆ ಕಾರ್ಡಿನ ವಿಳಾಸದ ಮಗ್ಗುಲಲ್ಲಿರುವ ಖಾಲಿ ಸ್ಥಳದಲ್ಲಿ ಈ ಕೆಳಕಂಡಂತೆ ಬರೆದು ಅದರ ಕೆಳಗೆ ತಾರೀಕಿನೊಂದಿಗೆ ಕೂಡಿದ ನಿಮ್ಮ ಸಹಿಯನ್ನು ಮಾಡಬೇಕಾದದ್ದು ಅವಶ್ಯ.

ಶುಲ್ಕವೇ ಇಲ್ಲದ ಈ 'ರಾಗಸಂಗಮ ಲಾಟರಿ ಡ್ರಾ' ನಲ್ಲಿ ನಾನು ಭಾಗವಹಿಸಲು ಇಚ್ಛಿಸುತ್ತೇನೆ. ಇದರಲ್ಲಿ ಸಂಪಾದಕರ ತೀರ್ಪೇ ಅಂತಿಮ ಹಾಗೂ ಕಾನೂನುಬದ್ಧವಾದದ್ದು ಎಂದು ಅರಿತಿದ್ದೇನೆ.

ಅಂಚೆ ಕಾರ್ಡಿನ ಪೂರ್ಣ ಖಾಲಿ ಇರುವ ಮುಂಬದಿಯಲ್ಲಿ ಈ ಕೆಳಗೆ ಕೇಳಿರುವ ವಿವರಗಳನ್ನು ಓದಲು ಸಾಧ್ಯವಾಗುವಂತೆ ಸ್ಪಷ್ಟವಾಗಿ ಬರೆಯಿರಿ.

ನಿಮ್ಮ ಹೆಸರು ; ಸಂಪೂರ್ಣ ವಿಳಾಸ ; ಅಂಚೆ ; ಪಿನ್‌ಕೋಡ್ ; ಹೋಬಳಿ ; ತಾಲ್ಲೂಕ್ ; ಜಿಲ್ಲೆ ; ರಾಜ್ಯ.

ಒಂದು ಪುಟದ ಮಿನಿ ಕಥೆ

ಫಾಲ್ಗುಣ

ಜಿ. ಜಿ. ಹೆಗಡೆ

ಮಗನ ಮಾತು ಕೇಳಿದ ರುಕ್ಮಿಣಿಬಾಯಿ ಹೌಹಾರಿದರು. ತಮ್ಮನಿಗೆ ಹೆಣ್ಣು ಹುಟ್ಟಿದಾಗಲೇ ಅವಳನ್ನು ಸೊಸೆಯಾಗಿ ಸ್ವೀಕರಿಸುವುದಾಗಿ ಮಾತು ಕೊಟ್ಟಿದ್ದರು. ಆದರೆ ಈಗ ಮಗ ಅದಕ್ಕೆ ಸಿದ್ಧನಿಲ್ಲ. ಆಫೀಸಿನಲ್ಲಿ ತನ್ನ ಜೊತೆ ಕೆಲಸ ಮಾಡುತ್ತಿರುವವಳನ್ನು 'ಲವ್' ಮಾಡುತ್ತಿರುವುದಾಗಿಯೂ ಮದುವೆಯಾದರೆ ಅವಳನ್ನೇ ಮದುವೆಯಾಗುತ್ತೇನೆಂದು ಅದಲ್ಲವಾದರೆ ಹಾಗೆಯೇ ಬ್ರಹ್ಮಚಾರಿಯಾಗಿಯೇ ಉಳಿದು ಬಿಡುವುದಾಗಿ ಬೆದರಿಕೆ ಹಾಕುತ್ತಿದ್ದಾನೆ.

"ನೋಡ್ರಿ ನೀವಾದ್ರೂ ಒಂದು ಮಾತು ಮಗನಿಗೆ ಹೇಳ್ಬಾರ್ದಾ?" ರುಕ್ಮಿಣಿಬಾಯಿ ಕಂಬನಿ ಒರೆಸಿಕೊಳ್ಳುತ್ತ ಪ್ರಶ್ನಿಸಿದಳು. "ನೋಡು ರುಕ್ಕು, ಮದುವೆ ಆಗೋನು ಅವನು, ನಾಳೆಗೆ ಜೀವನ ಮಾಡೋನು ಅವನು. ಇದರಲ್ಲಿ ಬಲವಂತದ ಪ್ರಶ್ನೇನೆ ಇಲ್ಲ. ಮೇಲಾಗಿ ಹುಡುಗಿ ನೋಡೋಕೆ ಚೆನ್ನಾಗಿ ಇದ್ದಾಳೆ. ಜಾತಿ ಕೂಡ ಬೇರೆ ಅಲ್ಲ. ಅವಳ ಜಾತಕಾನೂ ಹೊಂದಿಬರುತ್ತೆ. ಅಂತಾದ್ರಲ್ಲಿ..." ನೀಲಕಂಠರಾಯರು ಹೇಳಿದಾಗ "ಅಂದ್ರೆ ನೀವೂ ಇದ್ರಲ್ಲಿ ಶಾಮೀಲೇನ್ರಿ?" ಎಂದು ಪ್ರಶ್ನಿಸುತ್ತ ದೊಡ್ಡ ದನಿಯಲ್ಲಿ ಅಳಲಾರಂಭಿಸಿದಳು.

"ಏನಾಯ್ತು ಅಂತ ಅಳ್ತಾ ಇದೀಯಾ ಮಮ್ಮಿ. ನಿನ್ನ ತಮ್ಮನ ಮಗಳಿಗಿಂತ ನಾನು ಮೆಚ್ಚಿದೋಳು ಚೆನ್ನಾಗಿದ್ದಾಳೆ. ಸಾಯಂಕಾಲ ಒಂದ್ಸಾರಿ ಅವ್ಳನ್ನ ಕರ್ಕೊಂಬರ್ತೀನಿ. ಆಮೇಲೆ ನಿನ್ನ ಅಭಿಪ್ರಾಯ ಹೇಳು." ಹರ್ಷವರ್ಧನ ಎಲ್ಲ ಮಾತುಗಳಿಗೆ ವಿರಾಮ ಹಾಕಿ ಹೊರಕ್ಕೆ ನಡೆದುಬಿಟ್ಟ.

ಸಾಯಂಕಾಲ ಆರು ಗಂಟೆಯ ಸಮಯ. ಗೇಟು ತೆರೆದ ಶಬ್ದವಾದಾಗ ತಲೆ ಎತ್ತಿದರು. ಮಗ ಹರ್ಷನ ಜೊತೆಯಲ್ಲಿ ಇನ್ನೋರ್ವ ಹುಡುಗಿ. ದುಂಡು ಮೋರೆ, ಬಿಳಿಯ ಬಣ್ಣ, ಆಕರ್ಷಕವಾದ ದೇಹ ರಚನೆ, ಮೋರೆಯ ಮೇಲೆ ಸೌಮ್ಯವಾದ ಮುಗುಳ್ನಗೆ. ಒಂದಿಷ್ಟೂ ಮೇಕಪ್ ಇಲ್ಲ. ಇಂಥ ಹುಡುಗಿಗೆ ತಮ್ಮ ಮಗ ಸೋತಿದ್ದರೆ ಆಶ್ಚರ್ಯವಿಲ್ಲ ಎನ್ನಿಸಿತು. ತಮ್ಮನ ಮಗಳಿಗೆ ಹೋಲಿಸಿದರೆ ಖಂಡಿತವಾಗಿಯೂ ಈಕೆ ಸೌಂದರ್ಯವತಿ. ಅವಳೋ ಫ್ಯಾಶನ್ ಪ್ರಿಯೆ. "ಮಮ್ಮಿ ಇವಳು ಕುಸುಮಾ ಅಂತ. ನನ್ನ ಬಾಳಸಂಗಾತಿ ಆಗೋಳು." ಹರ್ಷವರ್ಧನ ತಾಯಿಯ ಆಲೋಚನೆಯನ್ನು ತುಂಡರಿಸಿದ.


ಕುಸುಮಾ ರುಕ್ಮಿಣಿಬಾಯಿ ಕಾಲಿಗೆರಗಿದಳು. ಒಮ್ಮೆಲೆ ಕುಸುಮಳನ್ನು ಎಬ್ಬಿಸಿ ಅಪ್ಪಿಕೊಂಡುಬಿಟ್ಟರು ರುಕ್ಮಿಣಿಬಾಯಿ. ಹರ್ಷವರ್ಧನನ ಎದೆ ಸಂತಸದಿಂದ ಉಬ್ಬಿತು.

ಮುಂದೆ ಒಂದೇ ತಿಂಗಳಲ್ಲಿ ಕುಸುಮಾ ಹರ್ಷವರ್ಧನನ ಪತ್ನಿಯಾದಳು. ಮನೆ ತುಂಬಿಸಿಕೊಳ್ಳುವ ಶಾಸ್ತ್ರವೂ ನೆರವೇರಿತು. ಮರುದಿನ ಮಗಳು ಹೊರಟು ನಿಂತಾಗ ಸ್ಟೇಶನ್‌ವರೆಗೆ ಹೋಗಿ ಬರಲೆಂದು ನೀಲಕಂಠ ರಾಯರೂ ಸಿದ್ಧರಾದರು. "ನೀನ್ಯಾಕೆ ಹೋಗ್ತೀಯಾ, ನಾನೇ ಕಳಿಸಿ ಬರ್ತೀನಿ" ಎಂದ ಹರ್ಷವರ್ಧನ. "ನೀನಿನ್ನು ಮದುಮಗ, ಕುಸುಮ ಹೊಸಬಳು. ಅವಳಿಗೆ ಕಂಪೆನಿ ಕೊಡು" ಎಂದು ಹಾಸ್ಯ ಮಾಡುತ್ತ ರಿಕ್ಷಾದಲ್ಲಿ ಕುಳಿತರು.

ಎರಡು ಮೂರು ತಾಸು ಉರುಳಿದರೂ ನೀಲಕಂಠರಾಯರು ಬಸ್‌ಸ್ಟ್ಯಾಂಡಿನಿಂದ ಬರಲಿಲ್ಲ. ರುಕ್ಮಿಣಿ ಬಾಯಿಗೆ ಕಳವಳ. ಅಷ್ಟರಲ್ಲಿ ಪಕ್ಕದ ಮನೆಯ ಹುಡುಗಿ ಬಂದು "ಹರ್ಷಾ ಅಂಕಲ್ ನಿಮಗೆ ಫೋನು" ಎಂದಾಗ ಹರ್ಷವರ್ಧನ್ ರಿಸೀವ್ ಮಾಡಲು ಹೋದ. ತಿರುಗಿ ಬಂದಾಗ ಮೋರೆ ಬಾಡಿತ್ತು. "ಯಾರದ್ದೋ ಫೋನ್" ಪ್ರಶ್ನಿಸಿದರು ರುಕ್ಮಿಣಿಬಾಯಿ. "ಸುಶ್ರೂತ ಕ್ಲಿನಿಕ್‌ನಿಂದ ಮಮ್ಮಿ. ಪಪ್ಪಾ ಸ್ಟ್ಯಾಂಡಿನಿಂದ ತಿರುಗಿ ಬರೋವಾಗ ರಿಕ್ಷಾ ತಾಗಿ ಬಿದ್ರಂತೆ. ಮೈ ಕೈ ತರಚಿದೆಯಂತೆ. ಹೋಗಿ ಕರ್ಕೊಂಡು ಬರ್ತೀನಿ" ಎಂದು ಹೇಳಿದವನು ಅಲ್ಲಿ ನಿಲ್ಲದೆ ಹೋಗಿಬಿಟ್ಟ.

"ಹ್ಹಾ ತುಂಬ ಚೆನ್ನಾಗಿದೆ ಸೊಸೆ ಫಾಲ್ಗುಣ. ಮನೆಗೆ ಬಂದು ಇನ್ನೂ ಎರಡು ದಿನ ಆಗಿಲ್ಲ ಆಗ್ಲೆ ಮಾವನಿಗೆ ಆ್ಯಕ್ಸಿಡೆಂಟ್." ರುಕ್ಮಿಣಿಬಾಯಿಯ ತಮ್ಮ ಹೇಳಿದ. ಅಲ್ಲಿಯೇ ಇದ್ದ ರುಕ್ಮಿಣಿಬಾಯಿಗೆ ಕ್ರೋಧ ಉಕ್ಕಿ ಬಂತು. "ನಿನ್ನ ಮಗಳನ್ನು ಮಾಡಿಕೊಂಡು ಬಂದಿಲ್ಲ ಅಂತ ಬಾಯಿಗೆ ಬಂದಂತೆ ಹೇಳ್ಬೇಡ ಕಣೋ. ಸೊಸೆ ಫಾಲ್ಗುಣ ಚೆನ್ನಾಗಿರೋದ್ರಿಂದಲೇ ಅವ್ರಿಗೆ ಬರೇ ತರಚಿದ ಗಾಯ ಆಗಿದೆ. ಅದಲ್ಲಾಂದ್ರೆ ಇನ್ನು ಏನು ಆಗ್ತಿತ್ತೋ ಯಾರಿಗ್ಗೊತ್ತು" ಎಂದಾಗ ಎಲ್ಲರೂ ಅವಾಕ್ಕಾಗಿ ಕುಳಿತರು.

ಬಾ ಗೆಳತಿ ಬರೆಯೋಣ



ಹುಟ್ಟಿದ್ದಾಯಿತು! ಸಾಗಬೇಕಲ್ಲ ಸಾವಿನವರೆಗೂ
ಅನಿವಾರ್ಯ ಪಯಣ
ಅದಕ್ಕಾಗಿಯೇ ಸಂಧಿಸಿದ್ದೇವೆ ನಾವು
ಬಾ ಗೆಳತಿ ಸಾಗೋಣ
ನಾವಿರುವವರೆಗೂ ನಮ್ಮದೇ ನೆರಳು
ನಮ್ಮಡಿಗಳ ಕೆಳಗೆ
ಅಂತೆಯೇ ನೂರು ಕಷ್ಟಗಳ ಅಮಾವಾಸ್ಯೆಯಿರುಳು
ಈ ಬಾಳಿಗೆ
ತೊರೆದೆಲ್ಲ ವ್ಯರ್ಥ ಭೀತಿ ಚಿಂತೆಗಳ
ಕಾಯೋಣ ತೆರೆಯಲಿರುವ ಬೆಳದಿಂಗಳ ನಾಳೆಗೆ
ಕಣ್ತುಂಬುವುದು ಹಾದಿಯಲಿ ಕೆಲವೊಮ್ಮೆ
ಅನಂತ ಶಾಂತಿಯ ಬಿತ್ತುವ ಹಸಿರು ನೋಟಗಳು
ಜೊತೆಗೆ ಕಂಬನಿಯೊಡನೆ ನೆತ್ತರುಕ್ಕಿಸುವ
ಬದುಕಿನ ಭೀಕರ ರಣಗಾಯಗಳು
ಮುಚ್ಚಿಟ್ಟು ನಮ್ಮೊಳಗಿನ ಬೆಚ್ಚುವೆದೆಗಳ
ತೆರೆದೆದೆಯ ನದಿಯಾಗಿ ಭೋರ್ಗರೆದು ಹರಿಯೋಣ
ನಮ್ಮೊಳೊಗೊಬ್ಬರು ದಣಿದು ಕಣ್ಮುಚ್ಚಿ
ಮಲಗುವ ಮುನ್ನ
ಬಾ ಗೆಳತಿ ಬರೆಯೋಣ ಒಂದಾಗಿ
ಈ ವಿಶಾಲ ವಿಶ್ವದೆದೆಯ ಮೇಲೆ
ಸ್ವಪ್ನದಲ್ಲಿ ಕಂಡ ಸ್ವರ್ಗ ತೀರಕ್ಕಲ್ಲ
ನಮ್ಮ ಈ ಪಯಣ
ಸಾವಿನಾಚೆಗೂ ನಿಲ್ಲಬಲ್ಲ ಪ್ರೀತಿಗಾಗಿ ಎಂದು.

ಎಂ. ಲತಾಮಣಿ

ಸ್ವಚ್ಛಂದ ಸ್ವಪ್ನಗಳು

ಧಾರಾವಾಹಿ—೨೦

ತಮಿಳು ಮೂಲ :
ಪಿ. ಕೆ. ಪ್ರಭಾಕರ್

ಕನ್ನಡಕ್ಕೆ :
ಕಲ್ಯಾಣಿ ಮೂರ್ತಿ
ರಾಮನಾಥಪುರ

ಪ್ರತಿ ನಿಮಿಷಕ್ಕೂ ಮೂಡನ್ನು ಬದಲಾಯಿಸುವರಲ್ಲ. ಇದು ಇವರಿಗೆ ಹೇಗೆ ಸಾಧ್ಯ ಎಂದು ಆಶ್ಚರ್ಯವಾಯ್ತು.

ಆ ರೂಮಿನ ಮಂಚ, ಹೂವುಗಳಿಂದ ಅಲಂಕರಿಸಲ್ಪಟ್ಟಿತ್ತು. ಟೇಬಲಲ್ಲಿ ತಟ್ಟೆಯ ತುಂಬ ಸಿಹಿ ಪದಾರ್ಥಗಳು, ಹಣ್ಣು ಹಂಪಲುಗಳಿದ್ದವು ಒಂದು ಕಟ್ಟು ಊದುಬತ್ತಿ ಗಮಗಮಿಸುತ್ತಿತ್ತು. ಮದುವೆಯ ರಿಸಪ್ಶನ್‌ನಲ್ಲಿ ಕೊಡಲ್ಪಟ್ಟಿದ್ದ ಬಹುಮಾನಗಳ ಪಾರ್ಸಲ್‌ಗಳು ಒಂದೆಡೆ ಜೋಡಿಸಲ್ಪಟ್ಟಿತ್ತು. ರೇಶ್ಮೆ ಪಂಚೆ, ರೇಶ್ಮೆ ಜುಬ್ಬದಲ್ಲಿದ್ದ ವಿಜಯಕುಮಾರ್ ಬಂದು ಪಾರ್ಸಲ್‌ನ ರಿಬ್ಬನನ್ನು ಬಿಚ್ಚುತ್ತಿದ್ದ.

ರೂಮಿನ ಬಾಗಿಲ ಬಳಿ ಗೆಜ್ಜೆ ಶಬ್ದ ಕೇಳಿ ಅದನ್ನು ಹಾಗೇ ಬಿಟ್ಟು ಮುಗುಳ್ನಗೆಯ ಮುಖದಿಂದ ತಿರುಗಿ ನೋಡಿದ.

ರೇಶ್ಮೆ ಸೀರೆಯಲ್ಲಿದ್ದ ಪದ್ಮಿನಿ ಚೆನ್ನಾಗಿ ಅಲಂಕೃತಳಾಗಿದ್ದಳು. ಮೈತುಂಬ ಆಭರಣಗಳು. ಅವಳನ್ನು ಸುತ್ತುವರೆದಿದ್ದ ಕೆಲವು ಹೆಂಗಸರು, ಹುಡುಗಿಯರು. ಪಕ್ಕದಲ್ಲಿ ನಿಂತಿದ್ದ ಅತ್ತಿಗೆ ಅವಳ ಕಿವಿಯಲ್ಲಿ "ಇನ್ನೊಂದು ಸೀರೆಯನ್ನು ಮಂಚದ ಕೆಳಗಿಟ್ಟಿದ್ದೇನೆ. ಅವಶ್ಯಕತೆ ಬಂದಾಗ ಬದಲಾಯಿಸಿಕೋ. ಒಳಗೆ ಹೋಗಿ ಕಾಲಿಗೆರಗಿ ಆಶೀರ್ವಾದ ಪಡೆ. ಮುಂದಿನದು ಈಗಿನ ಕಾಲದ ಹುಡುಗಿಯರಿಗೆ ಹೇಳಬೇಕಾಗಿಲ್ಲ" ಎಂದು ಹೇಳಿ ಕೆನ್ನೆ ಚಿಗುಟಿದಳು.

"ಅಳಿಯಂದಿರು ಬಹಳ ಹೊತ್ತಿನಿಂದ ಕಾಯುತ್ತಲಿದ್ದಾರೆ. ಅಡ್ವೈಸ್ ಮಾಡಿದ್ದು ಸಾಕು. ಎಲ್ಲ ಅವರೇ ಮಾಡ್ಕೋತಾರೆ. ನೀವು ಬನ್ನಿ" ಎಂದು ವಿಜಯಾಳ ಕೈ ಹಿಡಿದು ಎಳೆದರು ಒಬ್ಬಾಕೆ. ಉಳಿದವರಿಗೆಲ್ಲ ನಗು.

ಪದ್ಮಿನಿಗೆ ಈ ಕೀಟಲೆಗಳೆಲ್ಲ ಮನಸ್ಸಿಗೆ ಹೋಗಲಿಲ್ಲ. ಆದರೂ ಏನು ಮಾಡುವುದು. ಅವರೊಂದಿಗೆ ಬೆರೆತು ಒಣ ನಗು ನಕ್ಕಳೇ ಹೊರತು ಕುತೂಹಲವಾಗಲಿ, ನಾಚಿಕೆಯಾಗಲೀ ಕಾಣಲಿಲ್ಲ.

ತನ್ನ ಹಿಂದೆ ಬಾಗಿಲು ಹಾಕಲ್ಪಟ್ಟಿತು. ತಾನು ಒಂಟಿಯಾದುದರ ಅರಿವಾಯ್ತು. ಎದುರಿನಲ್ಲಿ ಕೈಗಳೆರಡನ್ನೂ ಜಂಬದಿಂದ ಕಟ್ಟಿಕೊಂಡು ನಿಂತಿದ್ದ ವಿಜಯ್‌ಕುಮಾರ್.

"ಬಾ ಪದ್ಮಿನಿ." ಮೆಲ್ಲಮೆಲ್ಲನೆ ಹೆಜ್ಜೆ ಇಟ್ಟು ಬಂದಳು. ಕಾಲಿಗೆರಗಿ ನಮಸ್ಕರಿಸಬೇಕೇ, ಬೇಡವೇ ಎಂದು ಏನೂ ತೋಚಲಿಲ್ಲ. ಏತಕ್ಕಾಗಿ ಇದು? ನಾನು ನಿನಗೆ ಪ್ರಿಯವಾದವಳೆಂದೆ? ಇದನ್ನು ತೋರ್ಪಡಿಸುವ ಬಗೆ ಹೀಗೇನಾ,

ನಾಟಕೀಯವಾಗಿರುವುದಿಲ್ಲವೆ. ಹೃದಯಾಂತರಾಳ ದಲ್ಲಿ ಇಬ್ಬರೂ ಸರಿಸಮರಲ್ಲವೆ? ಲೈಫ್ ಪಾರ್ಟ್ನರ್ ಎನ್ನುತ್ತೇವಲ್ಲ. ಕಾಲಿಗೆ ಬಿದ್ದು, ಹೆಂಗಸು ಎಂದೂ ಆದರಿಸಲ್ಪಡತಕ್ಕವಳು, ಕರುಣೆ ತೋರಬೇಕಾದವಳು ಎಂದು ಮುದ್ರೆ ಒತ್ತಿಸಿಕೊಳ್ಳುವ ಸಂಪ್ರದಾಯ ಗಳನ್ನೆಲ್ಲ ಏಕೆ ಎಲ್ಲರೂ ಯಾವ ಪ್ರಶ್ನೆಯನ್ನು ಮಾಡದೆ ಅನುಸರಿಸಿ ಬರುತ್ತಿದ್ದಾರೆ?

"ಏನು ಪದ್ಮಿನಿ ಯೋಚನೆ ಮಾಡ್ತಾ ಇದ್ದೀಯ, ಕುಳಿತುಕೋ." ತಾನೂ ಕುಳಿತು ಪಕ್ಕದಲ್ಲಿ ಅವಳಿಗೆ ಸ್ಥಳ ಕಾದಿರಿಸಿದ.

ಮೆಲ್ಲಗೆ ಕುಳಿತು "ವಿಜಯ್, ನಾನೀಗ ನಿಮ್ಮ ಕಾಲಿಗೆ ಬಿದ್ದು ನಮಸ್ಕಾರ ಮಾಡಬೇಕೆ?" ಎಂದು ಕೇಳಿದಳು.

"ಅದೆಲ್ಲ ಏತಕ್ಕೆ, ಹೊರಗೆ ಹೇಳಿ ಕಳುಹಿಸಿದರೆ? ಅವಶ್ಯಕತೆ ಇಲ್ಲ. ಈ ಅಲಂಕಾರವೆಲ್ಲ ನೀನು ಮೆಚ್ಚಿ ಮಾಡಿಸಿಕೊಂಡಿರುವೆಯೇನು?"

"ನಿಜವಾದ ಉತ್ತರ ಹೇಳಲೆ?"

"ಊಂ."

"ಇಷ್ಟವಿರಲಿಲ್ಲ. ನೋಡಿ ಆರು ನೆಕ್ಲೆಸ್ ಸಿಕ್ಕಿಸಿದ್ದಾರೆ ಉತ್ಸವದ ದೇವರಂತೆ, ಪ್ಲೀಸ್ ವಿಜಯ್ ಎಲ್ಲವನ್ನೂ ತೆಗೆಯಲೇ?"

"ಅಯ್ಯೋ ಅದನ್ನೇ ನಾನು ಹೇಳುತ್ತಿ ರುವುದು. ಅಂದು ಹೋಟೇಲಿನಲ್ಲಿ ಈಸಿಯಾಗಿ, ಫ್ರೀಯಾಗಿ ಕುಳಿತು ಮಾತನಾಡಿದೆವಲ್ಲ ಹಾಗೇನೇ ಈ ನಿಮಿಷವೂ. ಇನ್ನು ಹೇಳಲು ಹೋದರೆ ಈ ಫಂಕ್ಷನನ್ನು ಹೀಗೆ ಗ್ರ್ಯಾಂಡಾಗಿ ಮಾಡುವುದೇ ಅಬದ್ಧವು. ಇದೆಷ್ಟು ಪರ್ಸನಲ್ ವಿಷಯ. ಈ ಮಂಚವನ್ನು ಅಲಂಕರಿಸಿದ್ದವನಿಗೆ ಚುಡಾಯಿಸುವ ನಗು ಬಂದಿರಲೇಬೇಕು. ಬಾಗಿಲು ಹಾಕಿ ಹೊರಗಿಂದ ಹಾಡುತ್ತಿರುವರಲ್ಲ, ಇದೂ ಡೀಸೆಂಟಾಗಿ ಕಾಣುವುದೆ? ಏನು ಮಾಡುವುದು. ನಮಗೆ ಸಂಪ್ರದಾಯಗಳ ಬಗ್ಗೆ ಅಕ್ಕರೆ ಆಸಕ್ತಿ ಇಲ್ಲದಿದ್ದರೂ ಕುಟುಂಬದ ಹಿರಿಯರಿಗಾಗಿ ಎಲ್ಲವನ್ನು ಸಹಿಸಿಕೊಳ್ಳಬೇಕಾಗಿದೆ."

ಆಭರಣಗಳನ್ನು ಕಳಚುತ್ತಿದ್ದ ಪದ್ಮಿನಿ ಒಮ್ಮೆ ನಿಂತು ಆತನತ್ತ ಸಂತೋಷದ ದೃಷ್ಟಿ ಬೀರಿದಳು.

"ಏನಮ್ಮಾ ಹಾಗ್ ನೋಡ್ತಾ ಇದ್ದೀಯ?"

"ನೀವು ಹೇಳಿದ್ದೆಲ್ಲ ನನ್ನ ಮನಸ್ಸಿನಲ್ಲೂ ಇತ್ತು. ಇದನ್ನು ನಿಮ್ಮ ಹತ್ತಿರ ಹೇಳುವುದು ಹೇಗೆಂದು ಯೋಚಿಸುತ್ತಿದ್ದೆ. ನೀವೇ ಹೇಳಿದಿರಿ."

"ಪದ್ಮಿನಿ, ನನ್ನ ಹತ್ತಿರ ನೀನು ಯಾವುದೇ ಅಂಜಿಕೆಯಿಲ್ಲದೆ ಏನನ್ನಾದರೂ ಹೇಳಬಹುದು."

"ರೇಷ್ಮೆ ಸೀರೆ ಬಹಳ ಭಾರ. ಇದನ್ನು ಚೇಂಜ್ ಮಾಡುತ್ತೇನೆ."

"ಓಹೋ ಬದಲಾಯಿಸಿ ಅನಂತರ ಕರೆ."

ವಿಜಯ್‌ಕುಮಾರ್ ಎದ್ದು ಅಟ್ಯಾಚ್ ಬಾತ್ ರೂಮಿಗೆ ಹೋದ. ಪದ್ಮಿನಿ ರೇಷ್ಮೆ ಸೀರೆ ಬಿಚ್ಚಿ ಮಂಚದ ಮೇಲಿನ ಹಾಸಿಗೆಯ ಕೆಳಗಿದ್ದ ವಾಯಿಲ್ ಸೀರೆಯನ್ನುಟ್ಟು "ವಿಜಯ್" ಎಂದೊಡನೆ,

ಅವಳ ಹತ್ತಿರ ಬಂದು "ಖಂಡಿತವಾಗ್ಲೂ ನಾನು ನೋಡಲಿಲ್ಲ" ಎಂದ.

"ಗೊತ್ತು, ನೀವೊಬ್ಬರು ಜಂಟಲ್‌ಮ್ಯಾನ್ ಅಲ್ಲವೆ."

"ಹೆಂಡತಿ ಸೀರೆ ಉಡುವಾಗ ನೋಡುವ ಪತಿ ಜಂಟಲ್‌ಮ್ಯಾನ್ ಅಲ್ಲವೆ?"

"ಹೊಸ ಹೆಂಡತಿ ಹಳಬಳಾಗಬೇಕು" ಎಂದು ನಾಚಿ ಹೇಳಿದಳು.

ನಿಂತಿದ್ದ ಅವಳನ್ನು ಕೈ ಹಿಡಿದು ತನ್ನತ್ತ

ಇಲ್ಲಿಯವರೆಗೆ...

ಪದ್ಮಿನಿ ಸಮಾನತೆಯಲ್ಲಿ ನಂಬಿಕೆಯುಳ್ಳ ಮಧ್ಯಮ ವರ್ಗದ ಮಹಿಳೆ. ತನ್ನ ವಿಚಾರಗಳನ್ನು ಒಪ್ಪುವವನೊಂದಿಗೆ ಆಕೆ ಮದುವೆಯಾಗುತ್ತಾಳೆ. ಪತಿಯ ಮನೆಯವರು ಬಹಳ ಆಚಾರವಂತರು.

...ಮುಂದೆ ಓದಿ

ಎಳೆದು ಮಂಚದ ಮೇಲೆ ಕುಳ್ಳಿರಿಸಿಕೊಂಡು "ಪದ್ಮಿನಿ, ನಿದ್ರೆ ಬರ್‍ತಾ ಇದೆಯಾ?"

"ಊಹುಂ."

"ನನಗೆ ಬರ್‍ತಾ ಇದೆಯಲ್ಲ."

"ಸ್ವಲ್ಪ ಹೊತ್ತು ಏನಾದರೂ ಮಾತನಾಡೋಣ ವಿಜಯ್."

"ಆಗಲಿ ಅದಕ್ಕೇನಂತೆ?"

"ನಾವು ಭೇಟಿಯಾಗಲು ಪ್ರಾರಂಭಿಸಿದ್ದು, ರಿಂಗ್ ಮಾಡಿ, ನೇರವಾಗಿ, ಲೆಟರ್‌ನಲ್ಲಿ ಎಲ್ಲದರಲ್ಲೂ ನಾನೇ ಪಟಪಟ ಮಾತನಾಡಿದ್ದೇನೆ ವಿಜಯ್."

ಆಕೆಯ ಕೈಯನ್ನು ತನ್ನ ಮಡಿಯಲ್ಲಿಟ್ಟುಕೊಂಡು 'ಸರಿ, ಈಗ ನಾನು ಏನು ಮಾತನಾಡಲಿ? ಮದುವೆ ಆಯ್ತು ನೀನು ನನ್ನ ಪತ್ನಿಯೂ ಆಗಾಯ್ತು. ಅಸಹ್ಯವಾದ ಸಂಭಾಷಣೆಗಳಾಗಬೇಕೆ? ಅದೇ ನನ್ನನ್ನು ನೀನು ಮೆಚ್ಚಿರುವೆಯಾ ಎಂಬ ಪ್ರಶ್ನೆ, ನಾನೂ ನನ್ನ ಫ್ರೆಂಡ್ಸ್ ಏಳೆಂಟು ಮಂದಿಯನ್ನು ಕೇಳಿದೆ. 'ಮೊದಲ ರಾತ್ರಿಯ ಮಾತುಕತೆ ಏನೋ' ಎಂದಾಗ ಟಾಗ್ ಎಂದು ಈ ಪ್ರಶ್ನೆಯನ್ನು ಹೇಳುವ. ಈ ಪರಿಸ್ಥಿತಿಯಲ್ಲಿ ಮೆಚ್ಚುಗೆ ಆಗಿದ್ದೀಯ ಎನ್ನುವುದರ ಹೊರತು ಮತ್ತೇನು ಬರಲು ಸಾಧ್ಯ? ಯಾವಳಾದರೊಬ್ಬಳು ನಿನ್ನನ್ನು ಮೆಚ್ಚಲಿಲ್ಲ, ಬೇರೆ ಮಾರ್ಗವಿಲ್ಲದೆ ಕತ್ತು ಚಾಚಿದೆ ಎಂದರೆ ಹೇಗಿರುತ್ತೆ ಪದ್ಮಿನಿ."

"ಹಲವಾರು ಮದುವೆಗಳಲ್ಲಿ ಮದುಮಗಳ ಮನಸ್ಸಿಂದ ಬರುವ ಉತ್ತರ ಅದುವೇ ವಿಜಯ್. ಎಷ್ಟು ಹುಡುಗಿಯರಿಗೆ ತಮ್ಮ ಇಚ್ಛೆಯಂತೆ, ಕಲ್ಪನೆಯಂತೆ ಬಾಳುವ ಫಲ ದೊರಕಿದೆ?"

"ನಿನಗೆ ದೊರಕಿದೆಯಾ ಪದ್ಮಿನಿ?"

"ಹಾಗೇ ಅನಿಸುತ್ತಿದೆ."

"ಅನಿಸುತ್ತಿದೆಯೋ ಖಂಡಿತವಾಗ್ಲೂ ದೊರಕಿದೆಯೋ?"

"ತಕ್ಷಣ ಹೇಗೆ ಖಂಡಿತವಾದ ಉತ್ತರ ಹೇಳಲಿ. ಈಗ ತಾನೇ ನಾವಿಬ್ಬರೂ ಪರಸ್ಪರ ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದ್ದೇವೆ."

"ಮನಃಪೂರ್ವಕವಾಗಿ" ಎಂದ.

"ಮತ್ತೆ ಹೇಗೆ ಸಾಧ್ಯ?"

"ಶರೀರದ, ಇನ್ನೂ ಬೇಕಾದಷ್ಟು ತಿಳಿಯಬೇಕಾಗಿದೆ" ಎಂದು ಅವಳ ಕೈ ಬಳೆಗಳನ್ನು ಸರಿಸುತ್ತ ಅಂಗೈಯಲ್ಲಿ ಮುತ್ತಿಟ್ಟ.

"ಚೀ" ಎಂದಳು ತಲೆ ಎತ್ತದೆ.

"ಅಬ್ಬಾ ಕೊನೆಗೂ ನಿನ್ನ ನಾಚಿದ ಮುಖ ನೋಡಿ ಆಯ್ತು. ಇನ್ನು ಪಕ್ಕದಲ್ಲಿದ್ದು ನೋಡಬೇಕು" ಎಂದು ಅವಳ ಮುಖಕ್ಕೆ ತನ್ನ ಮುಖವಿಟ್ಟು ಇನ್ನೂ ಸಮೀಪಕ್ಕೆ ಹೋದ. ಅಂಜುತ್ತ ಸರಿದು, ಮುದುರಿ ಅನಂತರ ಅವನ ಮೊದಲ ಮುತ್ತನ್ನು ತನ್ನ ಕೆನ್ನೆಯಲ್ಲಿ ಅನುಭವಿಸಿದ ಪದ್ಮಿನಿ ಕಣ್ಣುಗಳನ್ನು ಮುಚ್ಚಿದಳು.

"ವಿಜಯ್ ▫ ಲವ್ ಯು" ಎಂದು ಆಕೆಯ ತುಟಿಗಳು ಶಬ್ದವಿಲ್ಲದೆ ಉಚ್ಚರಿಸಿದವು. ಈ ಪ್ರೀತಿ, ವಿಶ್ವಾಸ, ಸಂತೋಷ ಜೀವನ ಪರ್ಯಂತವಿರಲೆಂದು ಆಕೆಯ ಮನಸ್ಸು ಹೇಳಿಕೊಂಡಿತು.

ಆಫೀಸಿನಲ್ಲಿ ಲೀವ್ ಎಕ್ಸ್‌ಟೆಂಡ್ ಮಾಡಿ ಪದ್ಮಿನಿ, ವಿಜಯ್‌ಕುಮಾರ್ ನೀಲಗಿರಿ ಎಕ್ಸ್‌ಪ್ರೆಸ್‌ನಲ್ಲಿ ತಮ್ಮ ಹನೀಮೂನ್ ಪ್ರಯಾಣ ಪ್ರಾರಂಭಿಸಿದರು.

ಮಾರನೆಯ ದಿನ ಕೊಯಮುತ್ತೂರಿನಿಂದ ಬಸ್ಸಲ್ಲಿ ಹೊರಟು ಸುತ್ತಲೂ ಮಂಜು ಕವಿದಿದ್ದ ತುಂತುರು ಹನಿಯು ಪನ್ನೀರಿನ ಬೀಸಣಿಗೆಯಿಂದ ಬೀಸುತ್ತಿರುವಂತೆ ಇದ್ದ ಊಟಿ ತಲುಪಿದರು. ಮೊದಲೇ ರಿಸರ್ವ್ ಮಾಡಿದ್ದ ಹೋಟೆಲ್‌ನ ರೂಮಿಗೆ ಬಂದೊಡನೆ ಕೈಗಳನ್ನು ಒದರಿ ಮೈ ಮುರಿದಳು ಪದ್ಮಿನಿ. ಷೂ ಕಳಚಿದ ವಿಜಯ್.

"ಪ್ರಯಾಣ ಮಾಡಿದ್ದು ಆಯಾಸವಾಗಿದೆಯಲ್ಲವೆ?"

"ನಿನ್ನೆ ರಾತ್ರಿ ರೈಲಿನಲ್ಲಿ ಸರಿಯಾಗಿ ನಿದ್ರೆಯೇ ಬರಲಿಲ್ಲ. ಇವತ್ತು ನಿದ್ರೆ ಮಾಡಿದರೆ ಸರಿಯಾಗ



ಬಹುದು. ನಿನ್ನೆ ಹೊರಡುವಾಗ ನೀವೇಕೆ ಮುಖ ಊದಿಸಿಕೊಂಡಿದ್ದೀರಿ ವಿಜಯ್?''

"ಅದೇನಿಲ್ಲ ಬಿಡು.''

"ನನಗೆ ಹೇಳಬಾರದ ವಿಷಯವಾದರೆ ಬೇಡ.''

"ಅದಲ್ಲ ಪದ್ಮಿನಿ, ಈ ಟೂರಿಗೆ ಕಾರ್ ತೆಗೆದುಕೊಂಡು ಬರೋಣವೆಂದಿದ್ದೆ. ಅಪ್ಪನ್ನ ಕೇಳಿದಾಗ ಬೇಡ ರೈಲಿನಲ್ಲೇ ಹೋಗಿ ಎಂದರು. ಕಾರಿನಲ್ಲಿ ಬಂದಿದ್ದರೆ ಒಂದು ರೀತಿ ಮಜವಾಗಿರುತ್ತಿತ್ತು.''

"ಹೀಗೆಂದು ಹೇಳಬಹುದಿತ್ತಲ್ಲ.''

"ಯಾರು ನಾನೇ, ನಮ್ಮ ತಂದೆಯ ಹತ್ತಿರವೆ?''

"ಏಕೆ ಮೊದ ಮೊದಲಿಗೆ ಪರಸ್ಥಳಕ್ಕೆ ಹೋಗುತ್ತಿದ್ದೇವೆ. ಕಾರಿದ್ದರೆ ನಾಲ್ಕಾರು ಸ್ಥಳಗಳಿಗೆ ಹೋಗಿ ಬರಲು ಅನುಕೂಲವಾಗಬಹುದು. ಒಬ್ಬ ಡ್ರೈವರನ್ನು ಕರೆದುಕೊಂಡು ಹೋಗುತ್ತೇನೆಂದು ನಿಧಾನವಾಗಿ ಹೇಳಬೇಕಿತ್ತು. ಸರಿ ಎಂದು ಒಪ್ಪುತ್ತಲೇ ಇದ್ದರು.''

"ಒಂದು ನೀಳವಾದ ವಾಕ್ಯವನ್ನು ನಾನಾಗಲೀ, ನನ್ನ ಅಣ್ಣನಾಗಲೀ ಇಲ್ಲಿಯವರೆಗೂ ಅವರೆದುರು ನಿಂತು ಹೇಳಿಲ್ಲ. ಯಾವ ವ್ಯವಹಾರವೇ ಆಗಲಿ ವಿಷಯ ಹೇಳುತ್ತಿದ್ದವಷ್ಟೇ. ತೀರ್ಮಾನ ಅವರದ್ದೇ. ಅದಕ್ಕೆ ಎದುರುತ್ತರವಿಲ್ಲ.''

ಸೂಟ್‌ಕೇಸ್ ತೆರೆದು ಡ್ರೆಸ್ಸಿಂಗ್ ಸಾಮಾನುಗಳನ್ನೆಲ್ಲ ಡ್ರೆಸ್ಸಿಂಗ್ ಟೇಬಲ್‌ಗೆ ಜೋಡಿಸುತ್ತ ನಕ್ಕಳು ಪದ್ಮಿನಿ.

"ಏತಕ್ಕೆ ನಗು?''

"ನೀವು, ನಿಮ್ಮ ಅಣ್ಣ ಇಬ್ಬರೂ ಸ್ಕೂಲಿನಲ್ಲಿ ಮಕ್ಕಳು ಟೀಚರ್ಸ್ ಜೊತೆಯಲ್ಲಿ ಗಂಭೀರ ಭಯ ಭಕ್ತಿಯಿಂದ ನಡೆದುಕೊಳ್ಳುವಂತೆ ದೂರದಲ್ಲಿ ನಿಲ್ಲುವುದು. ನಿಮ್ಮ ಕಿವಿಗಳಿಗೇ ಕೇಳಿಸದಂತೆ ಮಾತನಾಡುವುದು ಇದನ್ನೆಲ್ಲ ಜ್ಞಾಪಿಸಿಕೊಂಡಾಗ ನಗು ಬರುತ್ತೆ. ಈ ಭಯ ಏತಕ್ಕೆ?''

"ಭಯ ಅಲ್ಲ ಪದ್ಮಿನಿ ಮರ್ಯಾದೆ.''

"ಅದಕ್ಕೆ ಇಷ್ಟೊಂದಾ, ನ್ಯಾಚುರಾಲಿಟೀನೆ ಇಲ್ಲ ವಿಜಯ್.''

"ನನಗೆ ಅರ್ಥವಾಗುತ್ತೆ ಪದ್ಮಿನಿ, ನಮ್ ಸಹಜ ಗುಣದ ತಂದೆ ಸಿಗಲಿಲ್ಲವಲ್ಲ. ಚಿ ವಯಸ್ಸಿನಿಂದಲೂ ನಾವು ಸ್ವಲ್ಪ ದೂರ ಸರಿದೆ ಪಳಗಿದೆವು. ಬಹಳ ಕಷ್ಟದಲ್ಲಿದ್ದವರು ಸ್ವಯ ಸಂಪಾದನೆ ಮಾಡಿ, ನಮ್ಮನ್ನು ಓದಿಸಲು ಬಹ ಕಷ್ಟಪಟ್ಟಿದ್ದಾರೆ. ಎಲ್ಲರೊಡನೆಯೂ ಖುಶಿಯಾಗಿ ಮಾತನಾಡಿ ಪಳಗುವುದಿಲ್ಲವೇ ಹೊರತು ಎಲ್ಲರಲ್ಲೂ ಹೇರಳವಾದ ಪ್ರೀತಿ ವಾತ್ಸಲ್ಯಗಳುಂಟು. ನಿನ್ನ ಹತ್ತಿರ ಹೇಗೆ ಮಾತನಾಡುತ್ತಾರೆ?''

"ನನ್ನೊಡನೆ ಮಾತನಾಡುವ ಸಂದರ್ಭ ಇನ್ನೂ ಬಂದಿಲ್ಲವಲ್ಲ. ನಿನ್ನೆ ಸಂಜೆ ಕಾಫಿಗೆ ಹೇ ಕಳುಹಿಸಿದರು. ತೆಗೆದುಕೊಂಡು ಹೋಗಿ ಕೊಟ್ಟೆ ಪೇಪರ್ ನೋಡುತ್ತಲೇ ಕುಡಿದರು. ಅನಂತ 'ಯಾರು ಮಾಡಿದ್ದು?' ಎಂದರು. 'ನಾನೇ' ಎಂದೆ ಮತ್ತೆ ಪೇಪರ್‌ನಲ್ಲಿ ಮಗ್ನರಾದರು. ಕಾಫಿ ಹೇಗಿತ್ತೆಂದು ತಿಳಿಯಲು ನನಗೆ ಆಸೆ. ಅವರು ಏನೂ ಹೇಳಲಿಲ್ಲ. ನಾನು ಸ್ವಲ್ಪ ಅಂಜಿಕೆಯಿಂ ಆಮೇಲೆ ಅತ್ತೆಯನ್ನು ಕೇಳಿ ತಿಳಿದುಕೊಂಡೆ ಚೆನ್ನಾಗಿತ್ತೆಂದು ಅವರ ಬಳಿ ಹೇಳಿದರಂತೆ.''

"ಅವರು ಏನು ಮಾತನಾಡಬೇಕಾದರೂ ಅಮ್ಮನ ಹತ್ತಿರವೇ, ಅದೂ ಮೂಡ್ ಸರಿಯಾಗಿದ್ದರೆ.''

"ಕಾಫಿ ಚೆನ್ನಾಗಿದೆಯಮ್ಮಾ ಎಂದು ನನ್ ಹತ್ತಿರ ಒಮ್ಮೆ ಹೇಳದಿದ್ದರೆ ನನಗೆಷ್ಟು ಆನಂದವಾಗುತ್ತಿತ್ತು.''

"ಹೌದು, ಅದೇ ಅವರ ಸ್ವಭಾವ ಹೇಳಿದ ನಲ್ಲ. ಸರಿ, ನನ್ನ ಹತ್ತಿರ ಪಟಪಟಾಂತ ಇಷ್ಟು ಮಾತನಾಡುತ್ತಿರುವೆಯಲ್ಲ ಅವರನ್ನೇ ಕೇಳಿ ನೋಡಬೇಕಿತ್ತು?''

"ಏನೂಂತ?''

"ಕಾಫಿ ಹೇಗಿದೇಂತ ಹೇಳಲೇ ಇಲ್ಲವಲ್ಲ ಮಾವ ಅಂತ.''

(ಸಶೇಷ)

'ರಾಗಸಂಗಮ' ಲಾಟರಿ ಡ್ರಾ-೧೨೩

ಬಹುಮಾನ ರೂ. 200 ಇದ್ದ ಈ ಲಾಟರಿ ಡ್ರಾನಲ್ಲಿ ಒಟ್ಟು 1119 ಜನ ಭಾಗವಹಿಸಿದ್ದು ಈ ಕೆಳಕಂಡ ನಾಲ್ಕು ಜನ ಡ್ರಾನಲ್ಲಿ ವಿಜೇತರಾಗಿದ್ದಾರೆ. ವಿಜೇತರುಗಳಿಗೆ ಬಹುಮಾನದ ಹಣ ತಲಾ ರೂ. 50ರಂತೆ 3 ದಿನಗಳೊಳಗಾಗಿ ಕಳುಹಿಸಿ ಕೊಡಲಾಗುವುದು. ವಿಜೇತರಿಗೆ ಶುಭಾಶಯಗಳು.

ವಿಜೇತರ ಹೆಸರು ಮತ್ತು ವಿಳಾಸ :

1. **ಸುಮಾ ವಿದ್ಯಾಧರ್,** C/o ಅಂಗಡಿ ಸುಬ್ಬಣ್ಣ, **ಬೆಳಗೊಳ,** ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.
2. **ಆರ್. ಅಶ್ವಿನಿ,** D/o. ಎಸ್. ರಾಜೇಶ್, 7, 5ನೇ ಅಡ್ಡರಸ್ತೆ, ಸೋಮೇಶ್ವರ ನಗರ, ಜಯನಗರ ಒಂದನೇ ಹಂತ, **ಬೆಂಗಳೂರು**– 560 011.
3. **ರಾಜು ಕೋಟಿ,** C/o ಪವನ್ ಲ್ಯಾಬೋರೇಟರಿ, ವಡ್ಡರ ಬಂಡೆ, ಕೆ. ಸಿ. ರಸ್ತೆ, **ಬಳ್ಳಾರಿ**–583 101.
4. **ಎಂ. ಬಿ. ಗೀತಾ,** 420, 8ನೇ ಮುಖ್ಯರಸ್ತೆ, 50 ಅಡಿ ರಸ್ತೆ, ಹನುಮಂತನಗರ, **ಬೆಂಗಳೂರು**– 560 050.

ವಿ.ಸೂ. : **'ರಾಗಸಂಗಮ'**ದ ಮುಂಬರುವ ಸಂಚಿಕೆಯಲ್ಲಿ ವಿಜೇತರುಗಳ ಭಾವಚಿತ್ರವನ್ನು ಪ್ರಕಟಿಸಲಿರುವುದರಿಂದ ವಿಜೇತರುಗಳು ತಮ್ಮ ಕಪ್ಪುಬಿಳುಪು ಪಾಸ್‌ಪೋರ್ಟ್ ಆಕಾರದ ಭಾವಚಿತ್ರವನ್ನು ಈ ಕೂಡಲೇ (ಎಂದರೆ ಒಂದು ವಾರದೊಳಗಾಗಿ) ನಮ್ಮ ಕೈ ಸೇರುವಂತೆ ಕಳುಹಿಸಿ ಕೊಡಬೇಕಾಗಿ ಕೋರುತ್ತೇವೆ.

ಮುಂದಿನ ಸಂಚಿಕೆ

ಶುಕ್ರವಾರ 12–6–92ರಂದು ಎಲ್ಲೆಡೆ ಲಭ್ಯ

ಈ ಸಂಚಿಕೆಯಲ್ಲಿ

ಸದಾನಂದ ಅವರ

ನವಜೀವನ ಗಾನ

ಸಂಪೂರ್ಣ ಕಾದಂಬರಿ ಪ್ರಕಟವಾಗುತ್ತದೆ

ಪ್ರಶ್ನೋತ್ತರ

'ಕೆಎಸ್ನಾರ್'

* ಉ. ಮ. ಮಹೇಶ್, ಜಲಪುರಿ

ಕೆಎಸ್ನಾರ್ ಎಂದರೆ ಕಮಲಾ ಸುಂದರ್ ರಾಜನ್ ಅಂತ ನಾನು, ಅಲ್ಲ ಎಂದು ಸ್ನೇಹಿತ. ನಮ್ಮಿಬ್ಬರಲ್ಲಿ ಯಾರ ಅನಿಸಿಕೆ ನಿಜ?

— ಇಬ್ಬರಲ್ಲೂ ಅರ್ಧ ನಿಜಾಂಶವಿದೆ.

* ಎಸ್. ಎ. ಚಂಗಾವಿ, ಸಿ. ಎಸ್. ಪುರ

ತಿನ್ನಲು ಅನ್ನ, ಉಡಲು ಬಟ್ಟೆ, ಇರಲು ಒಂದು ಮನೆ. ಇಷ್ಟಿದ್ದರೆ ಮನುಷ್ಯನಿಗೆ ಸಾಕೇ? ಅಥವಾ ಇನ್ನೇನಾದರೂ ಬೇಕೆ?

— ಇದೆಲ್ಲಕ್ಕಿಂತ ಮಿಗಿಲಾಗಿ ನೆಮ್ಮದಿ ಇರಬೇಕು.

* ಚಂದ್ರಶೇಖರ್ ಸಘಲಿಂಗ, ಕುಂಟಾಡಿ

ಇಂದಿನ ಕಾಲದಲ್ಲಿ ಹೆಂಗಸರು ಬಸ್ಸು, ಲಾರಿಗಳ ಡ್ರೈವರ್‌ಗಳಾದರೆ ಏನಾಗಬಹುದು ಕೆಎಸ್ನಾರ್‌ರವರೇ?

— ಖಂಡಿತವಾಗಿಯೂ ಅಪಘಾತಗಳು ಕಡಿಮೆಯಾಗುತ್ತವೆ.

* ಗಂಗಾಧರ ಮಟ್ಟೆ
ಸುಳ್ಯ

ನಮ್ಮ ಪ್ರಕಟವಾದ ಪ್ರಶ್ನೆಗೆ5 ರೂಪಾಯಿ. ಆದರೆ ನಿಮ್ಮ ಉತ್ತರಕ್ಕೆ ಎಷ್ಟು ಬೆಲೆ ಸ್ವಾಮಿ?

— ನಿಮ್ಮ ಅಭಿಮಾನಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ.

* ವಿ. ರಾಜಶೇಖರ ಮೂರ್ತಿ;
ಮಂಡ್ಯ

ಅಂಕಲ್ ಜನ್ಮ ಕೊಡುವ ತಾಂ ದೇವರಾದರೆ, ಪ್ರೇಮ ನೀಡುವ ಹೆಂಡತಿ?

— ದಾರಿದೀಪ.

* ಅಶೋಕ ಆಚಾರ್ಯ,
ಹೆಜಮಾಡಿ

ದೇವಸ್ಥಾನದ ಗಂಟೆಗೂ, ಶಾಲೆ ಗಂಟೆಗೂ ಇರುವ ವ್ಯತ್ಯಾಸವೇನು?

— ಶಾಲೆಯ ಗಂಟೆ ವಿದ್ಯಾರ್ಥಿಗಳನ ಆಕರ್ಷಿಸಿದರೆ, ದೇವಸ್ಥಾನದ ಗಂಟೆ ಭಕ್ತಾದಿಗಳನ ಆಕರ್ಷಿಸುತ್ತದೆ.

* ರವೀಂದ್ರ ಎನ್. ನಾಯಕ್,
ಮುಂಬಯಿ

ಕೆಎಸ್ನಾರ್‌ರವರೇ ತಮ್ಮ ಮದು ಆಗಿದೆಯೇ ಬೇಗ ತಿಳಿಸಿ?

— ಅಳಿಯನನ್ನು ಹುಡುಕುತ್ತಿರುವೆನೆಂದ ಹೇಳಿದರೆ ನಂಬುವಿರಾ?

* ಎಸ್. ಶಿವರಾಮು, ಮಂಡ್ಯ

ಗುರು ನೀವು ಮುಂದಿನ ರಾಷ್ಟ್ರಪತಿಗಳಾದ ಎಷ್ಟು ಟಿ.ಎಂ.ಸಿ. ನೀರನ್ನು ತಮಿಳುನಾಡಿ ಕೊಡುತ್ತೀರಾ?

— ಇದು ಮುಖ್ಯಮಂತ್ರಿಗಳ ತೀರ್ಮಾನಿಸಿಕೊಳ್ಳಬೇಕಾದ ಪುಟ್ಟ ವಿಷಯ ರಾಷ್ಟ್ರಪತಿಗಳವರೆಗೂ ಬರಬಾರದ ವಿಷಯ.

* ಬಿ. ಜಿ. ಗಾಣಿಗೇರ, ಮಂಗಳೂರ

ಚಿನ್ನಕ್ಕೂ ವಾಸನೆ ಇದ್ದಿದ್ದರೆ ಏನಾಗುತ್ತಿತ್ತು ಸ್ವಾಮೀಜಿ?

— ಮೂಗು, ಕತ್ತು, ಕೈಗೆ ಬದಲ ಮುಡಿಯನ್ನೇರುತ್ತಿತ್ತು.

ಪ್ರಶ್ನಿಕರಿಗೂ ತಲಾ ರೂ. 5ರಂತೆ ಬಹುಮಾನವನ್ನು ಈಗಾಗಲೇ ಕಳಿಸಲಾಗಿದೆ

* ದಿನಕರ್, **ಕಂಬ್ಳಕಟ್ಟೆ**

ದೇವಸ್ಥಾನದಲ್ಲಿ ರಾಜಕೀಯ ಪ್ರವೇಶಿಸಿದರೆ ಭಕ್ತರ ಗತಿ ಏನು?

– ಈಗಾಗಲೇ ಪ್ರವೇಶಿಸಿಲ್ಲವೆಂದು ಹೇಳಿದವರಾರು?

* ಮಂಗಳ, **ಮೈಸೂರು**

ನಗುನಗುತಾ ಇದ್ದರೆ ಯಾವ ಕಾಯಿಲೇನೂ ಇರೋಲ್ಲ ಅಂತಾ ಹೇಳ್ತಾರಲ್ಲ. ಇದು ಎಷ್ಟರ ಮಟ್ಟಿಗೆ ನಿಜ ಸಾರ್?

– ದುಡಿಮೆಯೂ ನೆಮ್ಮದಿಯೂ ಇದ್ದರೆ ಸಂತಸವೂ, ನಗುವೂ ನಮ್ಮ ಪಾಲಿಗಿರುತ್ತದೆ. ಆಗ ಕಾಯಿಲೆ ದೂರವಾಗುವುದರಲ್ಲಿ ಆಶ್ಚರ್ಯವಿಲ್ಲ.

* ಹೆಚ್. ಎಸ್. ಮಂಜುನಾಥ್; **ರಾಮನಗರ**

ವಯಸ್ಸಾಗಿದೆಯೆಂದು ಎಚ್ಚರಿಸಿದರೆ ಮುದುಕರೇಕೆ ಕೋಪಗೊಳ್ಳುತ್ತಾರೆ?



– ತಮ್ಮನ್ನು ಎಲ್ಲರೂ ದೂರ ಮಾಡುವರೆಂಬ ಕೀಳರಿಮೆ ವಯೋಧಿಕದಲ್ಲಿ ಉದ್ಭವಿಸುವುದರ ಪರಿಣಾಮ.

* ವೀರಭದ್ರಯ್ಯ, **ಕಣ್ವಿಮಠ**

ಶ್ರೀಮಂತರಿಗೆ ಎಲ್ಲ ಇರುತ್ತೆ, ಅದೃಷ್ಟವೂ ಸಹ ಅವರಿಗೇ ಲಭಿಸುತ್ತಲ್ಲ ಯಾಕೆ?



– ಎಲ್ಲ ಲಭಿಸಿದರೂ ನೆಮ್ಮದಿ ಮಾತ್ರ ಕೈಗೆಟುಕದಿರಲಾಗಿರುತ್ತದೆ.

* ಆರ್. ಆರ್ಕೇಶ್ವರ, **ಮೈಸೂರು**

ಹೊಗೆಸೊಪ್ಪು, ತಂಬಾಕು ಕ್ಯಾನ್ಸರಿಗೆ ಕಾರಣವೆಂದು ಸಾರುವ ಸರ್ಕಾರವೇ ಮತ್ತೊಂದು ತರದಲ್ಲಿ ಅವುಗಳನ್ನು ಬೆಳೆಯಲು ಧನಸಹಾಯ ಮಾಡುತ್ತದಲ್ಲ?

– ಉಪದೇಶ ಪರರಿಗೆ. ಅದನ್ನು ಸರ್ಕಾರ ಪಾಲಿಸಿದರೆ ಖಜಾನೆ ಕಾಲಿ.

* ಪಿ. ಕಾತ್ಯಾಯಿನಿ; **ಮೈಸೂರು**

ಡೈವೋರ್ಸ್‌ಗಳೂ ಸ್ವರ್ಗದಲ್ಲೇ ನಿರ್ಧರಿಸಲ್ಪಟ್ಟಿರುತ್ತದೆಯೇ?

– ಮದುವೆಗಳು ಸ್ವರ್ಗದಲ್ಲಿ ನಿಶ್ಚಯಿಸಲ್ಪಡುವಾಗ ವಿಚ್ಛೇದನಗಳೂ ಸಹ ಸ್ವರ್ಗಕ್ಕೇ ಸೇರಿದ್ದು.

* ಹೆಚ್. ಕೆ. ಅನ್ನಪೂರ್ಣ ಶೆಟ್ಟಿ, **ಹೊಳೇಹೊಪ್ಪ**

ಅಂಕಲ್ ಮನುಷ್ಯರ ದುರ್ಗುಣಗಳು ಯಾವಾಗ ಬಯಲಿಗೆ ಬರುತ್ತದೆ?

– ಹಣವಿಲ್ಲದಿರುವಾಗ.

* ಮಕ್ಕಳ ಕಥೆ

ಎರಡು ಕಪ್ಪೆಗಳು

ಎಂ. ಶಿವಾಜಿರಾವ್

ಎರಡು ಕಪ್ಪೆಗಳಿದ್ದವು. ಒಂದು ಚೆನ್ನಪಟ್ಟಣದ ನಿವಾಸಿ. ಇನ್ನೊಂದು ರಾಮನಗರದ ನಿವಾಸಿ. ರಾಮನಗರದ ಕಪ್ಪೆಗೆ ಪಕ್ಕದ ಚೆನ್ನಪಟ್ಟಣವನ್ನು ನೋಡುವ ಆಸೆಯುಂಟಾಯಿತು. ಅಂತೆಯೇ ಚೆನ್ನಪಟ್ಟಣದ ಕಪ್ಪೆಗೆ ರಾಮನಗರವನ್ನು ನೋಡುವ ಆಸೆಯುಂಟಾಯಿತು. ಎರಡೂ ಪ್ರಯಾಣ ಪ್ರಾರಂಭಿಸಿದವು. ಸ್ವಲ್ಪ ಹೊತ್ತಿನಲ್ಲಿ ಎರಡೂ ಕಪ್ಪೆಗಳು ಒಂದು ಸ್ಥಳದಲ್ಲಿ ಭೇಟಿಯಾದವು.

"ಏನಣ್ಣ ಎಲ್ಲಿಗೆ ಹೊರಟಿದ್ದೀಯೆ? ಎಲ್ಲಿಂದ ಬರುತ್ತಿದ್ದೀಯೆ?'' ರಾಮನಗರದ ಕಪ್ಪೆ ಚೆನ್ನಪಟ್ಟಣದ ಅಕ್ಕನನ್ನು ವಿಚಾರಿಸಿತು.

"ನಾನು ಚೆನ್ನಪಟ್ಟಣದಿಂದ ಬರುತ್ತಿದ್ದೇನೆ. ರಾಮನಗರದ ಹೇಗಿದೆಯೋ ನೋಡ ಬೇಕೆಂದು ಹೊರಟಿದ್ದೇನೆ.'' ಚೆನ್ನಪಟ್ಟಣದ ಕಪ್ಪೆ ಹೇಳಿತು:

"ರಾಮನಗರದಿಂದ ನಾನು ಹೊರಟಿದ್ದೇನೆ. ಚೆನ್ನಪಟ್ಟಣ ಹೇಗಿದೆಯೋ ನೋಡ ಬೇಕೆಂದು ಹೊರಟಿದ್ದೇನೆ.''

"ನಾವಿಬ್ಬರೂ ಅಕ್ಕಪಕ್ಕದ ಊರಿನವರು. ಬೇರೆ ಊರು ಹೇಗಿದೆಯೋ ನೋಡಬೇಕೆಂಬ ಆಸೆ ಇರುವುದು ಸಹಜವಲ್ಲವೆ?''

"ಅದಕ್ಕೇ ನಾನು ಹೊರಟಿರುವುದು.''

ಇಬ್ಬರೂ ಸ್ವಲ್ಪ ದೂರ ನಡೆದರು. ದಾರಿಯಲ್ಲಿ ಒಂದು ಎತ್ತರವಾದ ಸ್ಥಳ ಸಿಕ್ಕಿತು. ರಾಮನಗರದ ಕಪ್ಪೆಗೆ ಒಂದು ಯೋಚ[ನೆ] ಹೊಳೆಯಿತು. ಅದು ಚೆನ್ನಪಟ್ಟಣದ ಕಪ್ಪೆ[ಗೆ] ಹೇಳಿತು, "ದಾರಿಯಲ್ಲಿ ಶತ್ರುಗಳ ಕಾ[ಟ] ಬಹಳ. ಹದ್ದುಗಳೂ, ಕಾಗೆಗಳೂ ನಮ್ಮನ್ನು ನೋಡಿದರೆ ಎತ್ತಿ ಹಾರಿ ಹೋಗುತ್ತವೆ. ಅವುಗ[ಳ] ಕೈಗೆ ಸಿಕ್ಕದೆ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಆದ್ದರಿಂದ ಒಂದು ಉಪಾಯ ಮಾಡೋಣ.''

"ಏನು?''

"ಆ ಎತ್ತರವಾದ ಗುಡ್ಡವಿದೆಯಲ್ಲ, ಅದನ್ನು ಹತ್ತಿ ನಿಂತುಕೊಂಡರೆ ನನಗೆ ನಿಮ್ಮೂರು ಕಾಣಿಸುತ್ತದೆ. ನಿನಗೆ ನಮ್ಮೂರು ಕಾಣಿಸುತ್ತದೆ. ಅಲ್ಲಿಂದಲೇ ನೋಡಿ ಪಕ್ಕದ ಊರುಗಳು ಹೇಗಿವೆ ಎಂದು ತಿಳಿದುಕೊಳ್ಳಬಹುದು. ಅಷ್ಟು ದೂರ ಏಕೆ ನಡೆಯಬೇಕು?''

"ಭೇಷ್, ಒಳ್ಳೆಯ ಉಪಾಯ. ಅಷ್ಟು ದೂರ ನಡೆದು ಹೋಗಬೇಕೆಂದರೆ ಶ್ರಮ, ಅಲ್ಲದೆ ಅಪಾಯ. ಆದ್ದರಿಂದ ನೀನು ಹೇಳಿದ ಉಪಾಯ ಚೆನ್ನಾಗಿದೆ. ಹಾಗೆಯೇ ಮಾಡೋಣ.''

ಎರಡೂ ಕಪ್ಪೆಗಳು ಗುಡ್ಡ ಹತ್ತಿದವು. ಮೇಲ್ಭಾಗದ ಸ್ಥಳವು ಮಟ್ಟವಾಗಿತ್ತು. ದೂರದ ಪ್ರದೇಶವು ಚೆನ್ನಾಗಿ ಕಾಣಿಸುತ್ತಿತ್ತು.

ಕಪ್ಪೆಗಳು ಗುಡ್ಡ ಹತ್ತಿ ನಿಂತು ತಂತಮ್ಮ ಹಿಂಭಾಗದ ಕಾಲುಗಳ ಮೇಲೆ ನಿಂತವು.

"ಹೇಗೆ ನಿಲ್ಲೋಣ?'' ಒಂದು ಕಪ್ಪೆ ಕೇಳಿತು.

"ಎದುರು ಬದುರಾಗಿ ನಿಲ್ಲೋಣ. ನೀನು ರಾಮನಗರದ ಕಡೆಗೆ ತಿರುಗಿ ನಿಂತುಕೋ. ನಾನು ಚೆನ್ನಪಟ್ಟಣದ ಕಡೆಗೆ ನಿಂತು ನೋಡುತ್ತೇನೆ. ಆಗ ನಮ್ಮೂರು ಹೇಗಿದೆ ಎಂದು ನಿನಗೆ ತಿಳಿಯುತ್ತದೆ. ನಿಮ್ಮೂರು ಹೇಗಿದೆ ಎಂದು ನನಗೆ ಗೊತ್ತಾಗುತ್ತದೆ.''

"ಭೇಷ್, ಭೇಷ್."

ಎರಡು ಕಪ್ಪೆಗಳು ಹಾಗೆಯೇ ನಿಂತು ನೋಡಲಾರಂಭಿಸಿದವು. ಸ್ವಲ್ಪ ಹೊತ್ತು ನಿಂತು ನೋಡಿದ ಮೇಲೆ ರಾಮನಗರದ ಕಪ್ಪೆ ಹೇಳಿತು. "ನಿಮ್ಮೂರು ನಮ್ಮ ಊರಿನ ಹಾಗೆಯೇ ಇದೆ. ಏನೇನೂ ವ್ಯತ್ಯಾಸವಿಲ್ಲ."

"ನಿಮ್ಮೂರು ಸಹ ನಮ್ಮ ಊರಿನ ಹಾಗೆಯೇ ಇದೆ. ಸ್ವಲ್ಪವೂ ಬದಲಾವಣೆ ಇಲ್ಲ. ನಾವು ಅಷ್ಟು ದೂರ ಸುಮ್ಮನೆ ವ್ಯರ್ಥವಾಗಿ ನಡೆದು ಹೋಗುವುದು ತಪ್ಪಿತು."

"ನೀನು ಒಳ್ಳೆಯ ಐಡಿಯಾ ಹೇಳಿದೆ. ಆದ್ದರಿಂದ ಹೋಗುವುದು ತಪ್ಪಿತು. ಬಾ ಇಳಿದು ಹೋಗೋಣ."

ಎರಡೂ ಕಪ್ಪೆಗಳು ಗುಡ್ಡ ಇಳಿದು ಕೆಳಗೆ ಬಂದವು.

"ರಾಮನಗರಕ್ಕೆ ನಾನು ಹಿಂದಿರುಗಿ ಹೋಗುತ್ತೇನೆ."

"ನಾನು ಚೆನ್ನಪಟ್ಟಣಕ್ಕೆ ವಾಪಾಸು ಹೋಗುತ್ತೇನೆ.

ಆಗಲಿ ಎಂದು ಎರಡು ಕಪ್ಪೆಗಳೂ ತಂತಮ್ಮ ಊರಿನತ್ತ ತಿರುಗಿದವು.

ಕಪ್ಪೆಗಳಿಗೆ ಕಣ್ಣುಗಳು ತಲೆಯ ಮುಂಭಾಗದಲ್ಲಿರುವುದಿಲ್ಲ, ಪಕ್ಕದಲ್ಲಿರುತ್ತವೆ.



ಅವುಗಳಿಗೆ ಹಿಂಭಾಗದಿಂದ ಮಾತ್ರ ಕಾಣುತ್ತವೆ. ಆದ್ದರಿಂದ ರಾಮನಗರದ ಕಪ್ಪೆಗೆ ರಾಮನಗರವೇ ಕಾಣಿಸಿತ್ತು. ಚೆನ್ನಪಟ್ಟಣದ ಕಪ್ಪೆಗೆ ಚೆನ್ನಪಟ್ಟಣ ಮಾತ್ರ ಕಾಣಿಸಿತ್ತು. ದಡ್ಡ ಕಪ್ಪೆಗಳಿಗೆ ಇದು ತಿಳಿಯಲಿಲ್ಲ. ತಂತಮ್ಮ ಊರನ್ನೇ ಬೇರೆ ಊರು ಎಂದು ಅವು ತಿಳಿದಿದ್ದವು.

ರಾಗಸಂಗಮ ಚಿತ್ರ ವಿಮರ್ಶೆ

ನಗರದಲ್ಲಿ ನಾಯಕರು

ಲಾಂಛನ : ನ್ಯೂ ಡೈನಾಮಿಕ್ ಮೂವಿ ಮೇಕರ್ಸ್
ನಿರ್ಮಾಪಕರು : ವೆಂಕಟೇಶ್–ರಘು ಬಾಬು
ನಿರ್ದೇಶನ : ಸಾಯಿಪ್ರಕಾಶ್
ಸಂಭಾಷಣೆ : ಕುಣಿಗಲ್ ನಾಗಭೂಷಣ್
ಛಾಯಾಗ್ರಹಣ : ಜಾನಿಲಾಲ್
ಸಂಗೀತ : ರಾಜ್ ಕೋಟಿ
ತಾರಾಗಣ : ಮಾಲಾಶ್ರೀ, ಸುನಿಲ್, ಗುರುದತ್, ಬಾಲರಾಜ್, ಶ್ರೀಧರ್, ಜೈಜಗದೀಶ್, ಮುಖ್ಯಮಂತ್ರಿ ಚಂದ್ರು, ಕಾಮಿನೀಧರನ್, ಉಮೇಶ್ ಮತ್ತು ಇತರರು.

ಪ್ಲಸ್ ಅಂಶಗಳು :

1) ಜಾನಿಲಾಲ್ ಅವರ ರಾತ್ರಿಯ ದೃಶ್ಯಗಳ ಮನಮೋಹಕ ಚಿತ್ರಣ.

2) ರಾಜ್ ಕೋಟಿಯವರ ಹಿನ್ನೆಲೆ ಸಂಗೀತ.

ಮೈನಸ್ ಅಂಶಗಳು :

1) ಪಾತ್ರಕ್ಕೆ ಹೊಂದಲಾರದೆ ಕೇವಲ ಗಿಮಿಕ್ ಮಾಡುವ ಮಾಲಾಶ್ರೀ.

2) ಬೋರು ಹೊಡೆಸುವ ನಿರೂಪಣೆಯ ಪ್ರಥಮಾರ್ಧ.

ವಿಮರ್ಶೆ :

ಈಗಾಗಲೇ ಮೂರು ದಾಕ್ಷಿಣಾತ್ಯ ಭಾಷೆಗಳಲ್ಲಿ ಬಂದು ಹೋಗಿರುವ 'ನಗರದಲ್ಲಿ ನಾಯಕರು' ಕಳೆದ ವಾರ ಬಿಡುಗಡೆಯಾದ ಹೊಸ ರೀಮೇಕ್ ಸರಕು. ಎರಡು ವರ್ಷದ ಹಿಂದೆ ಮಲೆಯಾಳಿ ಭಾಷೆಯಲ್ಲಿ 'ಇನ್ ಹರಿಹರನಗರ್' ಎನ್ನುವ ಚಿತ್ರ ಬಿಡುಗಡೆಯಾದಾಗ ಹೊಸ ನಟ ನಟಿಯರಿದ್ದ ನಾವೆಲ್ಟಿಯಿಂದಲೇ ಈ ಚಿತ್ರ ಯಶಸ್ವಿಯಾಯಿತು. ಅನಂತರ ತೆಲುಗು ಹಾಗೂ ತಮಿಳಿನಲ್ಲಿ ಕ್ರಮವಾಗಿ 'ಮಧುರಾ ನಗರಿಲೊ' ಹಾಗೂ 'ಎಂ.ಜಿ.ಆರ್. ನಗರಿಲ್' ಎಂದು ಈಗಾಗಲೇ ಬಿಡುಗಡೆಯಾಗಿವೆ. ಆ ಭಾಷೆಯ ಚಿತ್ರಗಳಲ್ಲೂ ಅಷ್ಟೇನೂ ಖ್ಯಾತನಾಮರಾಗದ ಕಲಾವಿದರನ್ನೇ ಆರಿಸಿ ಉತ್ತಮ ನಿರೂಪಣೆಯ ಚಿತ್ರ ತಯಾರಿಸಲಾಗಿತ್ತು. ಆದರೆ ಮಲೆಯಾಳಮ್‌ನಲ್ಲಿ ಯಶಸ್ಸು ಕಂಡಷ್ಟು ಈ ಚಿತ್ರ ಬೇರೆ ಯಾವ ಭಾಷೆಯಲ್ಲೂ ಯಶಸ್ಸು ಕಾಣಲಿಲ್ಲ ಎನ್ನುವುದು ಬೇರೆಯ ಮಾತು. ಈಗ ಕನ್ನಡದಲ್ಲಿ ಮೂರನೆಯ ರೂಪಾಂತರದಲ್ಲಿ ಬಿಡುಗಡೆಯಾಗಿರುವ 'ನಗರದಲ್ಲಿ ನಾಯಕರು' ಚಿತ್ರದ ಮುಖ್ಯ ದೋಷವೆಂದರೆ ಮಾಲಾಶ್ರೀಯನ್ನು ಆಕೆಗೆ ಸ್ವಲ್ಪವೂ ಒಪ್ಪದ ಪಾತ್ರದಲ್ಲಿ ನಾಯಕಿಯನ್ನಾಗಿ ಆರಿಸಿರುವುದು. ಜೊತೆಗೆ ಪ್ರೇಕ್ಷಕರು ಮಾಲಾಶ್ರೀಗಾಗಿ ನಿರೀಕ್ಷಿಸುವಂತಹ ಸರಕು ಚಿತ್ರದಲ್ಲಿಲ್ಲ. ಆಕೆ ಆಕರ್ಷಕವಾದ ಉಡುಪುಗಳನ್ನು ಧರಿಸಿ ಕನಸಿನ ದೃಶ್ಯಗಳಲ್ಲಿ ನಾಲ್ವರು ನಾಯಕರ ಜೊತೆ ಹಾಡುವುದನ್ನು ಬಿಟ್ಟರೆ ಬೇರೆ ಏನೂ ಕೆಲಸವಿಲ್ಲ. ಇಂತಹ ಪಾತ್ರಕ್ಕೆ ಮಾಲಾಶ್ರೀಯನ್ನೇ ಆರಿಸಬೇಕೆ?

ನಾಲ್ವರು ಗೆಳೆಯರ ಪಾತ್ರದಲ್ಲಿ ಸುಧಾಕರ್ ತಮ್ಮ ಚೇಷ್ಟೆ ಹಾಗೂ

'ಕಚ್ಚಿಬಿಡ್ತೀನಿ' ಎನ್ನುವ ಮಾಮೂಲಿ ಡೈಲಾಗ್‌ನಿಂದ ರಂಜಿಸುತ್ತಾರೆ. ಗುರುದತ್ ಪರವಾಗಿಲ್ಲ. ಖಳನಾಯಕನಿಗೆ ಬಹಳ ಶ್ರೀಮಂತ ಕಾಸ್ಟ್ಯೂಮ್‌ಗಳನ್ನು ನೀಡಿ ವೈಭವೀ ಕರಿಸಲಾಗಿದೆ. ಆತ ಸಂಯಮದಿಂದಲೇ ನಟಿಸಿದ್ದಾನೆ. ಬಹಳ ಚಿಕ್ಕ ಪಾತ್ರಗಳಲ್ಲಿ ಕಾಣಿಸಿಕೊಂಡರೂ ಶ್ರೀಧರ್, ಜೈಜಗದೀಶ್ ಹಾಗೂ ತಾರಾ ಚೊಕ್ಕವಾಗಿ ಅಭಿನಯಿಸಿದ್ದಾರೆ. ಮುಖ್ಯಮಂತ್ರಿ ಚಂದ್ರುಗೆ ಜಾಸ್ತಿ ಕೆಲಸ ಇಲ್ಲ.



'ನಗರದಲ್ಲಿ ನಾಯಕರು' ಚಿತ್ರದ ಪ್ರಮುಖ ಆಕರ್ಷಣೆಯೆಂದರೆ ಜಾನಿಲಾಲ್ ಅವರ ಛಾಯಾಗ್ರಹಣ. ಅದರಲ್ಲೂ ರಾತ್ರಿ ದೃಶ್ಯಗಳ ಚಿತ್ರಣ ರಮ್ಯವಾಗಿದೆ. ರಾಜ್ ಕೋಟಿಯವರ ಹಿನ್ನೆಲೆ ಸಂಗೀತವೂ ಚಿತ್ರದ ಮೆರುಗಾಗಿದೆ. ದ್ವಿತೀಯಾರ್ಧದಲ್ಲಿ ಚಿತ್ರದ 'ಟೆಂಪೋ' ಏರುತ್ತಾ ಪ್ರೇಕ್ಷಕರ ಆಸಕ್ತಿ ಕೆರಳಿಸುತ್ತದೆ. ಆದರೆ ಚಿತ್ರದ ಮೊದಲಾರ್ಧ ಬೋರ್ ಹೊಡೆಸುತ್ತದೆ.

'ನಗರದಲ್ಲಿ ನಾಯಕರು'ವಿನಂತಹ ಸಾಧಾರಣ ನಿರೂಪಣೆಯ ಚಿತ್ರಕ್ಕಾಗಿ ರೀಮೇಕ್ ಹಕ್ಕುಗಳನ್ನು ಪಡೆದುಕೊಳ್ಳಬೇಕಾಗಿತ್ತೆ?

○ ಆರ್. ಜಿ. ವಿಜಯಸಾರಥಿ

32/100


ಅತಿ ಸಾಧಾರಣ: 40ರ ಕೆಳಗೆ ಸಾಧಾರಣ: 41–50
ಉತ್ತಮ : 51–60 ಅತ್ಯುತ್ತಮ : 61ರ ಮೇಲೆ

ಸಿನಿ ಬಿಟ್ಸ್

ಒಳ್ಳೆಯ ತಿರುವಿಗಾಗಿ ಕಾಯುತ್ತಿರುವ ವನಿತಾ ವಾಸು

1991ರಲ್ಲಿ ಯಾವುದೇ ಒಳ್ಳೆಯ ಚಿತ್ರಗಳಲ್ಲಿ ಅಭಿನಯಿಸಲಾಗದೆ ಹೊಸ ಅವಕಾಶಗಳನ್ನೂ ಪಡೆಯಲಾಗದೆ ಉಳಿದುಹೋದ ವನಿತಾ ವಾಸುವಿಗೆ ಇದ್ದಕ್ಕಿದ್ದಂತೆ ವೃತ್ತಿಜೀವನದಲ್ಲಿ ಶುಭ ತಿರುವು ಸಿಗುವ ಲಕ್ಷಣಗಳು ಕಾಣಸಿಗುತ್ತಿವೆ. ಸುನಿಲ್‌ಕುಮಾರ್ ದೇಸಾಯಿ ಅವರು ತಮ್ಮ ನಿರ್ದೇಶನದ ಭಾರಿ ಬಂಡವಾಳದಲ್ಲಿ ತಯಾರಾಗುವ 'ಸಂಘರ್ಷ' ಚಿತ್ರಕ್ಕೆ ವನಿತಾ ವಾಸುವನ್ನು ಮುಖ್ಯ ಪಾತ್ರಕ್ಕೆ ಆರಿಸಿರುವುದರೊಂದಿಗೆ ಆಕೆಯ ವೃತ್ತಿ ಜೀವನಕ್ಕೆ ಮತ್ತೊಂದು ತಿರುವು ಸಿಕ್ಕಿದೆ. ಈ ಚಿತ್ರದಲ್ಲಿ ವಿಷ್ಣುವರ್ಧನ್, ದೇವರಾಜ್ ಹಾಗೂ ಗೀತಾ ಅವರುಗಳು ಅಭಿನಯಿಸುತ್ತಾರೆ. ಇದಲ್ಲದೆ ಕಟ್ಟೆ ರಾಮಚಂದ್ರ ನಿರ್ದೇಶನದ ಹೊಸ ಚಿತ್ರದಲ್ಲೂ ವನಿತಾ ವಾಸು ಅಭಿನಯಿಸುತ್ತಾರೆ. ಆಕೆಗೆ ಈ ಮೊದಲು ಒಳ್ಳೆಯ ಪಾತ್ರ ನೀಡಿದ ಸುರೇಶ್ ಹೆಬ್ಳೀಕರ್ ಅವರು ತಮ್ಮ 'ಚಮತ್ಕಾರ' ಚಿತ್ರದಲ್ಲಿ ಮತ್ತೊಂದು ಒಳ್ಳೆಯ ಪಾತ್ರವನ್ನು ನೀಡಿದ್ದಾರೆ. ವನಿತಾ ವಾಸು ಈಗಾಗಲೇ ನಿರ್ಮಾಪಕ, ನಿರ್ದೇಶಕ ಸಮಿವುಲ್ಲಾ ಅವರ 'ಒಬ್ಬರಿಗಿಂತ ಒಬ್ಬರು' ಚಿತ್ರದ ಚಿತ್ರೀಕರಣವನ್ನು ಮುಗಿಸಿದ್ದಾರೆ.

ಮೊನ್ನೆ ತಾನೇ ಮದುವೆಯಾಗಿರುವ



ವನಿತಾ ವಾಸುವಿಗೆ ಮದುವೆಯನಂತರ ಅದೃಷ್ಟ ಖುಲಾಯಿಸಿದೆಯೇ? ಆಕೆ ಇನ್ನು ಮುಂದೆ ಒಳ್ಳೆಯ ಚಿತ್ರಗಳಲ್ಲಿ ಅಭಿನಯಿಸುತ್ತಾರೆಯೇ ಎನ್ನುವುದನ್ನು ಕಾದು ನೋಡಬೇಕು.


○ ಸ್ವರ್ಣ

ಕ್ರೀಡಾಂಗಣ

ಗೇಬ್ರಿಯೆಲಾ ಸಬಾಟಿನಿ : ಮುಕ್ತ ಫ್ರೆಂಚ್ ಟೆನಿಸ್ ಹಾಗೂ ವಿಂಬಲ್ಡನ್ ಪ್ರಶಸ್ತಿಗೆ ಸಿದ್ಧತೆ

1990ರ ಮುಕ್ತ ಅಮೆರಿಕನ್ ಟೆನಿಸ್ ಚಾಂಪಿಯನ್‌ಶಿಪ್‌ನ ನಿರ್ಣಾಯಕ ಪಂದ್ಯದಲ್ಲಿ ಸ್ಟೆಫಿ ಗ್ರಾಫ್‌ರನ್ನು ಸೋಲಿಸಿ ತಮ್ಮ ಮೊತ್ತಮೊದಲ ಗ್ರಾಂಸ್ಲಾಂ ಪ್ರಶಸ್ತಿ ಪಡೆದ ಗೇಬ್ರಿಯೆಲಾ ಸಬಾಟಿನಿಯವರು ಕಳೆದ ವರ್ಷ ನಾಲ್ಕು ಪ್ರತಿಷ್ಠಿತ ಗ್ರಾಂಸ್ಲಾಂ ಟೂರ್ನಿಗಳಲ್ಲಿ ಒಂದರಲ್ಲೂ ಗೆಲ್ಲಲಾಗಲಿಲ್ಲ. ವಿಂಬಲ್ಡನ್‌ನಲ್ಲಿ ಬಿಟ್ಟರೆ ಉಳಿದ ಮೂರು ಗ್ರಾಂಸ್ಲಾಂ ಸ್ಪರ್ಧೆಯಲ್ಲೂ ಮೋನಿಕಾ ಸೆಲೆಸ್ ಗೆದ್ದರು. ವಿಂಬಲ್ಡನ್‌ನ ನಿರ್ಣಾಯಕದಲ್ಲಿ ಸ್ಟೆಫಿ ಗ್ರಾಫ್ ಅವರನ್ನು ಎದುರಿಸಿದ ಗೇಬ್ರಿಯೆಲಾ ಸಬಾಟಿನಿ ಗೆಲ್ಲುವ ಛಲವಿಲ್ಲದೆ ಸೋಲಬೇಕಾಯಿತು. ಈಗ ಈ ವರ್ಷ ಫ್ರೆಂಚ್ ಹಾಗೂ ವಿಂಬಲ್ಡನ್ ಸ್ಪರ್ಧೆಗಳಲ್ಲಿ ತಮ್ಮ ಅತ್ಯುತ್ತಮ ಪ್ರದರ್ಶನ ನೀಡಿ ಪ್ರಶಸ್ತಿಗಳನ್ನು ಗೆಲ್ಲಲೇಬೇಕೆಂದು ಸಬಾಟಿನಿ ನಿರ್ಧರಿಸಿರುವುದಾಗಿ ಹೇಳಿಕೊಂಡಿದ್ದಾರೆ.

ಇತ್ತೀಚೆಗೆ ನಡೆದ ಮುಕ್ತ ಇಟಾಲಿಯನ್ ಸ್ಪರ್ಧೆಯಲ್ಲಿ ಗೇಬ್ರಿಯೆಲಾ ಸಬಾಟಿನಿ ನಿರ್ಣಾಯಕ ಪಂದ್ಯದಲ್ಲಿ ಮಹಿಳಾ ಟೆನಿಸ್‌ನ ನಂಬರ್ ಒನ್ ಆಟಗಾರ್ತಿ ಮೋನಿಕಾ ಸೆಲೆಸ್ ಅವರನ್ನು ಸೋಲಿಸಿ ಹೆಚ್ಚು ಆತ್ಮವಿಶ್ವಾಸ ಪಡೆದುಕೊಂಡಿದ್ದಾರೆ. ಗ್ಯಾಬ್ ಈ ವರ್ಷ ಮತ್ತೊಂದು ಗ್ರಾಸ್ಲಾಂ ಪ್ರಶಸ್ತಿ ಪಡೆಯಬಲ್ಲರೆ?



ಗೇಬ್ರಿಯೆಲಾ ಸಬಾಟಿನಿ

○ ಕ್ರೀಡಾಪ್ರಿಯ

ನಿಮ್ಮ ಭವಿಷ್ಯ

ಸ್ವಾಮಿ ನಿತ್ಯಾನಂದ

(ಭಾನುವಾರ 7–6–92ರಿಂದ
ಶನಿವಾರ 13–6–92ರವರೆಗೆ)

ರಾಶಿ	ಹೆಸರಿನ ಪ್ರಥಮ ಅಕ್ಷರ
ಮೇಷ	ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ
ವೃಷಭ	ಇ, ಉ, ಎ, ಒ, ವ, ವಿ, ವು, ವೆ, ವೊ
ಮಿಥುನ	ಕ, ಕಿ, ಕು, ಘ, ಙ, ಛ, ಕೆ, ಕೊ, ಹ
ಕಟಕ	ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ
ಸಿಂಹ	ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ
ಕನ್ಯಾ	ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ
ತುಲಾ	ರ, ರಿ, ರು, ರೆ, ರೊ, ತ, ತಿ, ತು, ತೆ
ವೃಶ್ಚಿಕ	ತೊ, ನ, ನಿ, ನು, ನೆ, ನೊ, ಯ, ಯಿ, ಯು
ಧನುಸ್ಸು	ಯೆ, ಯೊ, ಬ, ಬಿ, ಬು, ಧಿ, ಭ, ಢ, ಬೆ
ಮಕರ	ಬೊ, ಜ, ಜಿ, ಖಿ, ಖು, ಖೆ, ಖೊ, ಗ, ಗಿ
ಕುಂಭ	ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ
ಮೀನ	ದಿ, ದು, ಞ, ಝು, ಥ, ದೆ, ದೊ, ಚ, ಚಿ

ಮೇಷ

ಹಣಕಾಸು ಭದ್ರವಾಗಿರುತ್ತದೆ. ಖರ್ಚು ಕಟ್ಟುಪಾಡಿನೊಳಗಿರುತ್ತದೆ. ಸಾಲದ ನಿರ್ಬಂಧ ಇರಲಾರದು. ನೆಲ, ವಾಹನ ಕೊಳ್ಳಲವಕಾಶವಾಗುವಷ್ಟು ಆದಾಯ ಸಿಗುತ್ತದೆ. ಉದ್ಯಮದಲ್ಲಿ ಮುನ್ನಡೆ ಕಂಡುಬಾರದಿದ್ದರೂ ಕೆಲವು ರೀತಿಯ ಒಳ್ಳೆಯ ಬದಲಾವಣೆಗಳು ಉಂಟಾಗುತ್ತವೆ. ವ್ಯಾಪಾರದಲ್ಲಿ ಸಂಪೂರ್ಣ ಪ್ರಯತ್ನ ಹೂಡಬೇಕಾಗುತ್ತದೆ. ಸಂಸಾರದಲ್ಲಿ ಇಕ್ಕಟ್ಟುಗಳಿವೆ.

ವೃಷಭ

ಕುಟುಂಬ ಜೀವನದಲ್ಲಿ ಹೇಳಿಕೊಳ್ಳುವಂತಾ ವಿಶೇಷತೆಯೇನೂ ಘಟಿಸದು. ವ್ಯಾಪಾರದಲ್ಲಿ ತತ್ಸಮಯದಲ್ಲಿ ಯಾವುದೇ ಫಲ ನಿರೀಕ್ಷಿಸಲಾಗ ದಾದರೂ ಒಳ್ಳೆಯ ಕಾಲವೊಂದು ನಿಮಗಾಗಿ ಕಾದಿದೆ. ಉದ್ಯೋಗದಲ್ಲಿ ಕೆಲಸ ಹಗುರವಾಗುತ್ತದೆ. ಮಹಿಳೆಯರು ಮನಸ್ಸಂತೋಷ ಕಾಣುವರು. ಉದ್ಯಮದಲ್ಲಿ ಶ್ರಮ, ವೆಚ್ಚ ಹೆಚ್ಚುತ್ತದೆ. ದಾಂಪತ್ಯ ಜೀವನ ತೃಪ್ತಿಕರವಾಗಿರುತ್ತದೆ. ಮನಚಂಚಲತೆ ಇರುತ್ತದೆ.

ಮಿಥುನ

ಕುಟುಂಬದಲ್ಲಿ ಅಭಿವೃದ್ಧಿ ಇದೆ. ಹಣಕಾಸಿನ ಓಡಾಟ ಧಾರಾಳದ್ದಾಗಿರುತ್ತದೆ. ವ್ಯಾಪಾರ ಕಳೆಗಟ್ಟಿಕೊಳ್ಳುತ್ತದೆ. ಸಮಾಜ ಸೇವೆ ಗವುರವ, ಘನತೆಯನ್ನು ಹೆಚ್ಚಿಸುತ್ತದೆ. ವಸ್ತು ವಿಷಯದಲ್ಲಿ ತುಸು ಸಂಕಟ ತೋರಿಬರುತ್ತದೆ. ವೃತ್ತಿಯಲ್ಲಿ ಚಂಚಲತೆ ಕಂಡು ಬರುತ್ತದೆ. ಸ್ತ್ರೀಯರು ಹೊಸ ಪ್ರಯತ್ನಗಳಿಂದ ಹೊಸ ಬದುಕು ಕಾಣುತ್ತಾರೆ. ಉದ್ಯೋಗದಲ್ಲಿರುವವರಲ್ಲಿ ಎಚ್ಚರಿಕೆ ಅಗತ್ಯ.

ಕಟಕ

ಉದ್ಯಮವು ಹಲವು ಅಡೆತಡೆಗಳನ್ನು ಕಾಣುತ್ತದೆ. ವ್ಯಾಪಾರದಲ್ಲಿ ಮೋಸ ಹೋಗುವಿರಿ. ವಸ್ತ್ರಾಭರಣಗಳನ್ನು ಕೊಳ್ಳಲವಕಾಶವಾಗುತ್ತದೆ. ತಾಯಿ ಕಡೆಯ ಸ್ವತ್ತು ಸಕಾಲದಲ್ಲಿ ಸಹಾಯಕ್ಕೆ ಬರುತ್ತದೆ. ಆದಯವು ಚೆನ್ನಾಗಿರುತ್ತದೆ. ಉದ್ಯೋಗದಲ್ಲಿರುವವರು ಹಲವು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಕಲಾರಂಗದಲ್ಲಿರುವವರು ಓಡಾಡಿದ್ದಷ್ಟೆ ಬಂತು.

ಸಿಂಹ

ಕುಟುಂಬ ಜೀವನವು ಉನ್ನತಿಯನ್ನು ಕಾಣುತ್ತದೆ. ದೇಹಾರೋಗ್ಯ ಚೆನ್ನಾಗಿರುತ್ತದೆ. ವ್ಯಾಪಾರದಲ್ಲಿ ಮುಂದನೆಲೆ ಕಂಡು ಬರುತ್ತದೆ. ಕೆಲವು ಬೇಕಾದ ವಸ್ತು ಇತ್ಯಾದಿ ನಿರ್ಬಂಧದಲ್ಲಿ

ಬೀಳುತ್ತದೆ. ದಾಂಪತ್ಯದಲ್ಲಿ ಸಿಹಿಸುಖವಿದೆ. ಉದ್ಯೋಗದಲ್ಲಿ ಮೇಲಧಿಕಾರಿಯ ಮೇಲಾಟವೇ ನಡೆಯುತ್ತದೆ. ಕೊಡುಕೊಳ್ಳುವುದರಲ್ಲಿ ಸಹಜ ತಕರಾರಿದೆ. ಸ್ನೇಹಿತರ ಸಹಕಾರ ಪಡೆಯಿರಿ.

ಕನ್ಯಾ

ವ್ಯಾಪಾರೋದ್ಯಮ ರಂಗದಲ್ಲಿ ಹಿನ್ನಡೆಯೇ ಕಾಣಬರುತ್ತಿದೆ. ಹೆಚ್ಚಿನ ಆದಾಯವೇನೂ ಕಂಡು ಬರುತ್ತಿಲ್ಲ. ಉದ್ಯೋಗದಲ್ಲಿ ಯಾವ ಕೆಡುಕೂ ನಡೆಯದು. ಕುಟುಂಬ ಜೀವನದಲ್ಲಿ ಕೆಲವು ಸಮಸ್ಯೆಗಳು ತಲೆಯೇರುವವು. ಜೀವನಾವಶ್ಯಕ ವಸ್ತುಗಳ ಕಯ್ಗೆಟಕುವಂತಾಗುತ್ತದೆ. ಎಲ್ಲದರಲ್ಲೂ ಎಚ್ಚರಿಕೆಯ ನಿಧಾನದ ಹೆಜ್ಜೆ ಪ್ರಯೋಜನಕಾರಿ. ದಾಂಪತ್ಯ ಸುಖವಿದೆ.

ತುಲಾ

ಸಾಮಾನ್ಯವಾಗಿ ಯಾವುದೇ ರೀತಿಯ ಕಷ್ಟನಷ್ಟಗಳು ತೋರಿಬರುವುದಿಲ್ಲ. ಕುಟುಂಬದಲ್ಲಿ ಶಾಂತಿ ನೆಮ್ಮದಿ ನೆಲೆಸುತ್ತದೆ. ಉದ್ಯೋಗದಲ್ಲಿ ಎಣಿಸಿದ್ದೆಲ್ಲ ಆಗದಿದ್ದರೂ ನಿಮ್ಮ ಘನತೆಗೆ ಕುಂದಿಲ್ಲ. ವ್ಯಾಪಾರದಲ್ಲಿ ಸುಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಉದ್ಯಮ ಎಂದಿನಂತೆ ಇರುತ್ತದೆ. ಹೊರ ವ್ಯವಹಾರ ದಲ್ಲಿ ಒಳ್ಳೆ ಹೆಸರು ಮಾಡುವಿರಿ. ಕಲಾವಿದರು ಬೆಳಗುತ್ತಾರೆ.

ವೃಶ್ಚಿಕ

ಉದ್ಯಮದಲ್ಲಿ ಕೆಲವು ತಡೆಗಳು ಎದುರಾದರೂ ಬೇಗನೆ ದೂರಾಗುತ್ತವೆ. ಹೊರ ವ್ಯವಹಾರದಲ್ಲಿ ಅಲೆದಾಟ ಹೆಚ್ಚಿದರೂ ಕೊನೆಯಲ್ಲಿ ಅದರಿಂದ ಒಳಿತೇ ಆಗಲಿದೆ. ಹಣಕಾಸು ಸವುಕರ್‍ಯ ಸರಳವಾಗಿರುತ್ತದೆ. ಉದ್ಯೋಗದಲ್ಲಿ ಶ್ರಮ ತಗ್ಗಿದರೂ ಅನಿಶ್ಚಿತತೆ ಮುಂದುವರಿಯುತ್ತದೆ. ಮನೆ ಮಂದಿಯೆಲ್ಲ ಸೇರಿ ಜೋರಾಗಿ ಶುಭ ಕಾರ್‍ಯವೊಂದನ್ನ ನಡೆಸುತ್ತೀರಿ.

ಧನುಸ್ಸು

ವ್ಯಾಪಾರದಲ್ಲಿ ಸಂಪೂರ್ಣ ಪ್ರಯತ್ನ ಹೇರಿದರೆ ಮಾತ್ರ ಮುನ್ನಡೆ ಸಾಧ್ಯವಾಗುತ್ತದೆ. ಕುಟುಂಬ ಜೀವನವು ಯಾವುದೇ ತಂಟೆ ತಕರಾರಿಲ್ಲದೆ ಸುಗಮವಾಗಿ ಸಾಗುತ್ತದೆ. ಹಣಕಾಸಿನ ಪರಿಸ್ಥಿತಿ ಚೆನ್ನಾಗಿಯೇ ಇರುತ್ತದೆ. ಮಕ್ಕಳಿಂದಾಗಿ ಮನೋ ಸಂಕಟಕ್ಕೀಡಾಗಬೇಕಾಗಬಹುದು. ಉದ್ಯೋಗದಲ್ಲಿ ಒಳ್ಳೆ ಆದಾಯ ಬಡ್ತಿ ಕಾಣುವಿರಿ. ಕಲಾವಿದರು ಹೊಸ ನೆಲೆ ಕಾಣುವರು.

ಮಕರ

ಕುಟುಂಬ ಜೀವನದಲ್ಲಿ ತ್ರುಪ್ತಿಕರ ಮುನ್ನಡೆ ಸಾಧ್ಯವಾಗುತ್ತದೆ. ಉದ್ಯಮದಲ್ಲಿ ಯಾವುದೇ ರೀತಿಯ ಎಡರುತೊಡರುಗಳು ಎದುರಾಗುವುದಿಲ್ಲ. ಉದ್ಯೋಗದಲ್ಲಿ ಇನ್ನೂ ಹೆಚ್ಚಿನ ಅಕ್ಕರೆ ತೋರಬೇಕು. ಹಣಕಾಸಿನ ಪರಿಸ್ಥಿತಿ ಏನೋ ತಾನೋ ಎಂದಿರುತ್ತದೆ. ಸ್ತ್ರೀಯರಿಗಿದು ಅನುಕೂಲ ಕಾಲ. ಬಂಧು ಬಾಂಧವರು ಬಂದು ಒಳ್ಳೆಯದಾಗುವುದು. ಶಾಂತ ರೀತಿಯಿಂದಿರಿ.

ಕುಂಭ

ಕುಟುಂಬ ಜೀವನದಲ್ಲಿ ಹೆಚ್ಚಿನ ಆಸಕ್ತಿ ತೋರಲು ಸಾಧ್ಯವಾಗುವುದಿಲ್ಲ. ಏನೋ ಒಂದು ಚಂಚಲತೆ ಎಲ್ಲ ವ್ಯವಹಾರಗಳಲ್ಲೂ ಗೋಚರಿಸು ತ್ತದೆ. ಉದ್ಯೋಗದಲ್ಲಿ ಕೆಲಸದ ಭಾರ ಹೆಚ್ಚುತ್ತದೆ. ವ್ಯಾಪಾರದಲ್ಲಿ ಲಾಭವಿದೆ. ವ್ಯವಹಾರದಲ್ಲಿ ಬೇರೆಯವರ ಸಹಕಾರ ತಗ್ಗುತ್ತದೆ. ಮನೋ ದೃಢತೆಯೊಡನೆ ಮುಂದಡಿಯಿಟ್ಟರೆ ಎಲ್ಲವೂ ನಿಮ್ಮಂತಾಗುತ್ತದೆ.

ಮೀನ

ಉದ್ಯಮವು ನಿಧಾನವಾಗಿ ಪಲ ಕೊಡಲಿದೆ. ಉದ್ಯೋಗದಲ್ಲಿ ಯಾವುದೇ ರೀತಿಯ ತೊಂದರೆ ಇಲ್ಲ. ಒಂದು ದಿಢೀರ್ ತಿರುವು ಒಳಿತನ್ನುಂಟು ಮಾಡಲಿದೆ. ಹಣಕಾಸಿನ ವಿಷಯದಲ್ಲಿ ಕೆಲವು ಸಮಸ್ಯೆಗಳು ತಲೆಯೆತ್ತಿ ಕಾಡಲಿವೆ. ಖರ್ಚುಗಳು ಹೆಚ್ಚಿ ಕಾಡುವವು. ಬಂಧುಗಳ ಸಹಾಯ ಪಡೆಯುವ ಸಾಮರ್ಥ್ಯ ತೋರಬೇಕು.

ನಿಮ್ಮ ಪತ್ರಗಳು

ಬಿ. ಪ್ರಭಾಕರ, ಕಡೂರು

24–5–92ರ 'ರಾಗ ಸಂಗಮ'ದ ನಿತ್ಯಾರವರ ಮುಖಪುಟ ಬಹಳ ಚೆನ್ನಾಗಿತ್ತು. ಎಸ್. ಜೆ. ಸುಜಾತರವರ 'ನಾಳೆ ನನ್ನದು' ಸಂಪೂರ್ಣ ಕಾದಂಬರಿ ಬಹಳ ಕುತೂಹಲಕಾರಿಯಾಗಿತ್ತು.

ರಾಧಾದೇವಿ, ಮೈಸೂರು

ಎಸ್. ಜೆ. ಸುಜಾತರವರ ಕಾದಂಬರಿ 'ನಾಳೆ ನನ್ನದು' ಬಹಳ ಚೆನ್ನಾಗಿತ್ತು. ಮಹಿಳೆಯ ಹೋರಾಟಕ್ಕೆ ಸ್ಫೂರ್ತಿ ನೀಡುತ್ತವೆ ಇಂತಹ ಕತೆಗಳು. 'ಅವತಾರಗಳು' ಕವನ ಪರವಾಗಿಲ್ಲ. 'ತಿರುವು' ಮಿನಿ ಕಥೆ ವಾಸ್ತವತೆಗೆ ಹಿಡಿದ ಕನ್ನಡಿ.

ಶಿವಸ್ವಾಮಿ, ಬೆಂಗಳೂರು

'ನಾಳೆ ನನ್ನದು' ಕಾದಂಬರಿ ಸಿನೀಮಿಯವಾಗಿತ್ತು. 'ಚಿತ್ರ ವಿಮರ್ಶೆ' ಸರಿಯಾಗಿದೆ. 'ಹಾಸ್ಯ ಸಂಗಮ' ಬಹಳ ಅರ್ಥಗರ್ಭಿತವಾಗಿದೆ.

ಪಿ. ಆರ್. ಸುನಿಲ್‌ಕುಮಾರ್, ಹೆಗ್ಗಾರ

ಎಸ್. ಜೆ. ಸುಜಾತರವರ 'ನಾಳೆ ನನ್ನದು' ಸರಳ ಸುಂದರ ಸಹಜ ಶೈಲಿಯಲ್ಲಿ ರಸವತ್ತಾಗಿ ಮೂಡಿಬಂದಿದೆ. ಓದಿದಾಗ ಸಿನಿಮಾ ನೋಡಿದ ಅನುಭವವಾಯಿತು.

ಸಿ. ಸುಧಾಕರ್, ಕಂಬ್ಳಕಟ್ಟ

ನಿತ್ಯಾರವರ ಮುಖಪುಟ ಆಕರ್ಷಕವಾಗಿತ್ತು. ಹಾಗೂ ಎಸ್. ಜೆ. ಸುಜಾತರವರ 'ನಾಳೆ ನನ್ನದು' ಕಾದಂಬರಿ ತುಂಬ ಚೆನ್ನಾಗಿ ಮೂಡಿಬಂದಿದೆ. ಅರುಣಾರವರ 'ಒಲವು ಮೂಡಿದಾಗ' ಎಂಬ ಸಣ್ಣ ಕಥೆ ತುಂಬ ಚೆನ್ನಾಗಿತ್ತು.

ಕೃಷ್ಣಮೂರ್ತಿ, ಬೆಂಗಳೂರು–10

ಅರುಣಾರವರ ಸಣ್ಣ ಕಥೆ 'ಒಲವು ಮೂಡಿದಾಗ' ಅವಾಸ್ತವವಾಗಿ ಕಂಡುಬರುತ್ತದೆ. ಅವಿನಾಶ್‌ಗೆ ಇರುವ ಕುಷ್ಠರೋಗದ ನೆಪ ಸರಿಯಲ್ಲ. ಅದೂ ಅಲ್ಲದೆ ಆ ರೋಗವೇನು ವಾಸಿಯಾಗದೆ ಇರುವುದಿಲ್ಲವಲ್ಲ ಏಡ್ಸ್‌ನಂತೆ.

ಗಣೇಶಪ್ರಸಾದ್ ಪಾಂಡೇಲು, ಕುಳ

ಎಸ್. ಜೆ. ಸುಜಾತರವರ 'ನಾಳೆ ನನ್ನದು' ಹಿಡಿಸಲಿಲ್ಲ ಅರುಣಾರವರ 'ಒಲವು ಮೂ ದಾಗ' ಸಣ್ಣ ಕಥೆ ಸೊಗಸಾ ಶೈಲಿಯಿಂದ ಸೆಳೆಯಿತು. ರಾಮಕೃಷ್ಣ ಶಾಸ್ತ್ರಿರವರ ಮಿ ಕಥೆ ನೀರಸ. 'ಚೈತ್ರ ಚಂದ ಹಾಗೂ 'ಚಿನ್ನದ ಪುತ್ಥಳಿ' ಎರಡ ಧಾರಾವಾಹಿಗಳು ಚೆನ್ನಾ ಮೂಡಿಬರುತ್ತಿವೆ. 'ಮೈಸೂ ಜಾಣ' ಚಿತ್ರ ವಿಮರ್ ಪರವಾಗಿಲ್ಲ. 'ಸಿನಿ ಬಿಟ್ಸ್'ನ ಶಶಿಕುಮಾರ್ ಬಗ್ಗೆ ಲೇಖ ಉತ್ತಮ. 'ಕ್ರೀಡಾಂಗಣ'ದ ಸವ್ಯಸಾಚಿ ಕಪಿಲ್ ಬಗ್ಗೆ ಬರ ಓದಿ ನೆಮ್ಮದಿಯಾಯ್ತು. ಮ ಕಪಿಲ್‌ದೇವ್ ನಾಯಕತ್ವದ ಭಾರತೀಯ ತಂಡ ಗಮನಾ ಸಾಧನೆ ಮಾಡಿ ವಿಶ್ವ ಶ್ರೇ ಕ್ರಿಕೆಟ್ ತಂಡವಾಗಿ ಹೊ ಹೊಮ್ಮಲಿ.


ಎಂ. ಜಿ. ಸತ್ಯನಾರಾಯಣ, ಬೆಂಗಳೂರು

'ನಾಳೆ ನನ್ನದು' ಕಾದಂಬ ಪರವಾಗಿಲ್ಲ. ಎಂ. ಶಿವಾಜಿರಾ ರವರ 'ಮಕ್ಕಳ ಕಥೆ' ಚೆನ್ನಾಗಿತ್ತು 'ರಂಗೋಲಿ'ಯಲ್ಲಿನ ಚಿತ್ರಗಳ ಅಷ್ಟೇನೂ ಸುಂದರವಾಗಿರಲಿಲ್ಲ ಸಣ್ಣ ಕಥೆ 'ಒಲವು ಮೂಡಿದಾಗ ಚೆನ್ನಾಗಿತ್ತು.

ಸಂಪಾದಕಿ ಮತ್ತು ಪ್ರಕಾಶಕಿ : ಕಮಲಾ ಸುಂದರ್ ರಾಜನ್, ಸಂಗಮ ಪ್ರಕಾಶನ, ಅಂಚೆ ಪೆಟ್ಟಿಗೆ 6646, 41, ಕೋಟೆ 'ಬಿ' ಬೀದಿ, ಬೆಂಗಳೂರು–2; ದೂರವಾಣಿ : 625004; ಮುದ್ರಕರು : ಪಿ. ರಾಮಯ್ಯ, ಶ್ರೀ ಸತ್ಯನಾರಾಯಣ ಪ್ರೆಸ್, 31, ಜೆ.ಬಿ.ಲೇನ್, ಕಾಟನ್‌ಪೇಟೆ, ಬೆಂಗಳೂರು–53


ಮಹಿಳೆಯರೂ ಪುರುಷರಷ್ಟೇ ಸಮರ್ಥರು:

ಮಂಗಳೂರು, ನ. 18: ಅವಕಾಶ



"ಬರೇ ಸಮರ್ಥರಲ್ಲ, ಹೆಚ್ಚು ಸಮರ್ಥರು."

ಹುಡುಗರ ಹಿಂದುಳಿಯುವಿಕೆಯಲ್ಲಿ ಹೆತ್ತವರ, ಬೋಧಕರ ಪಾತ್ರವೂ ಇದೆ



"ಸಮಾಧಾನವಾಯ್ತು, ಬರೇ ನಾವು ಮಾತ್ರ ಕಾರಣರಲ್ಲ."

ಹಾಸ್ಯ ಸಂಗಮ

ನಾರಾಯಣ ಶೆಟ್ಟಿ ಕುಕ್ಕುವಳ್ಳಿ

ಧ್ಯಾನ: ಮಾದಕ ವ್ಯಸನಕ್ಕೆ ಮದ್ದು



"ನನ್ನವರು ಆ ಮದ್ದಿಗಾಗಿಯೇ ನಿತ್ಯ ಧ್ಯಾನ ಮಾಡುವರು."



"ನಿಮ್ಮ ಅಡುಗೆ ರುಚಿಯನ್ನು ನೋಡಿದಾಗ ನೀವು ಭಿನ್ನಮತೀಯರೋ ಎಂಬ ಸಂಶಯ ಬರುತ್ತಿದೆ."

RAGASANGAMA Weekly 14-6-92 Regd. No. BGW

ಎಲ್ಲೆಡೆ ಮಾರಾಟವಾಗುತ್ತಿದೆ

ಜೂನ್ 14, 1992ರ ಸಂಚಿಕೆ

ಚುಟುಕ

ಸಮಗ್ರ ಸುದ್ದಿ ಸಾರಭರಿತ ಸಾಪ್ತಾಹಿಕ

- 'ಸನ್'ಗಳ ನಾಡು ಸ್ವೀಡನ್
- ಕುಳ್ಳರ ಕುಳ್ಳನ ವ್ಯಾಪಾರ
- ಹಣವಾಗಿ ಕೊಡಲಿ ಬಳಕೆ
- ಕುಡಿದು ಕಾವಲು ಕಾಯುವ ನಾಯಿ
- ಸಾವಿರ ಸಿನಿಮಾದ ಸರ್ದಾರಿಣಿ
- ಭಾರತದಲ್ಲಿ ಬಿಸೀeee
- ಸುಖ ದಾಂಪತ್ಯದ ಗುಟ್ಟು
- ತಲೆ ಮೇಲೆ ನಿಲ್ಲುವ ನಾಯಿ
- ರೋಗಿಗೆ ಚಿಕಿತ್ಸೆ, ರೋಗಕ್ಕಲ್ಲ
- ಕಣ್ಣಿಗೆ ಒಂದು ಸಿಹಿಸುದ್ದಿ
- ಹೆಂಗಸರೇ ಹೆಚ್ಚು ಬಲಶಾಲಿಗಳು

ಇವುಗಳ ಬಗ್ಗೆ ಹೆಚ್ಚಿನ
ವಿವರಗಳು ಈ ಸಂಚಿಕೆಯಲ್ಲಿದೆ

ಬೆಲೆ ರೂ. 2–50 ಮಾತ್ರ

ಇದು 'ರಾಗಸಂಗಮ'ದ ಸೋದರ ಪತ್ರಿಕೆ